ಉಪನ್ಯಾಸ ಗ್ರಂಥಮಾಲೆ

೩೦೬

# ಇಂಗ್ಲೀಷ್ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನೆ

ವ್ಹಿ. ಕೆ. ನವಲಗುಂದ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಫೆಬ್ರುವರಿ, ೧೯೭೦

ಉಪನ್ಯಾಸ ಗ್ರಂಥಮಾಲೆ

೩೦೬

# ಇಂಗ್ಲೀಷ್ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನೆ

ಶ್ರೀ ವ್ಹಿ.ಕೆ. ನವಲಗುಂದ



ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಫೆಬ್ರುವರಿ, ೧೯೮೦

ಪ್ರಕಾಶಕರು :

**ಸಿ. ಎಸ್. ಕಣವಿ**

ನಿರ್ದೇಶಕರು,
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಫೆಬ್ರುವರಿ ೧೯೮೦



ಬೆಲೆ : ೫೦ ಪೈಸೆ

ಮುದ್ರಕರು :

**ಜಿ. ಬಿ. ಮನ್ನಾಚಾರ**

ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೫೮೦ ೦೦೩

# ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿ ರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿ ಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನ ಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸ ಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲ ಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ, ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲ್ಯಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೦೫ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

**ಎಸ್. ಎಸ್. ಒಡೆಯರ**
ಕುಲಪತಿಗಳು

# ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ೨೨೭ನೆಯ ಉಪನ್ಯಾಸ ಶಿಬಿರವನ್ನು ವಿಜಾಪೂರ ಜಿಲ್ಲೆಯ ಯಡಹಳ್ಳಿಯಲ್ಲಿ ಅಡವೀಶ್ವರ ತರುಣ ಸಂಘದ ಆಶ್ರಯದಲ್ಲಿ ೧೯೭೭ರ ಜೂನ ತಿಂಗಳ ೨೭ ಮತ್ತು ೨೮ ರಂದು ಏರ್ಪಡಿಸಲಾಗಿತ್ತು. ಈ ಉಪನ್ಯಾಸ ಶಿಬಿರದ ಕಾರ್ಯಕ್ರಮದ ಅಂಗವಾಗಿ ನಾನು 'ಇಂಗ್ಲೀಷ್ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನೆ' ಎಂಬ ವಿಷಯವಾಗಿ ಉಪನ್ಯಾಸ ಮಾಡಿದೆ. ಅದರ ವಿಸ್ತೃತ ರೂಪವೇ ಈ ಚಿಕ್ಕ ಪುಸ್ತಿಕೆ.

ಇಂಗ್ಲೀಷ್ ಹಾಸ್ಯ ಮತ್ತು ವಿಡಂಬನ ಸಾಹಿತ್ಯ ಸಾಗರದಷ್ಟು ಅಪಾರವಾದದ್ದು. ಹಾಸ್ಯ ಮತ್ತು ವಿಡಂಬನಗಳು ಇಂಗ್ಲೀಷ್ ಸಾಹಿತ್ಯದಲ್ಲಿ ಅನೂಚಾನವಾಗಿ, ನಾನಾ ಮುಖವಾಗಿ ಬೆಳೆದು ಬಂದಿವೆ. ಅವು ಇಂಗ್ಲೀಷ್ ಸಂಸ್ಕೃತಿಯ ಅವಿಭಾಜ್ಯ ಅಂಗಗಳೂ ಅಹುದು. ಅದರ ಸಮಗ್ರ ಪರಿಶೀಲನೆ ಈ ಚಿಕ್ಕ ಪುಸ್ತಿಕೆಯಲ್ಲಿ ಕಠಿಣ. ಸ್ಥೂಲವಾಗಿ ಅದರ ಸಂಕ್ಷಿಪ್ತ ಪರಿಚಯವನ್ನು ಮಾಡಿ ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಸಾಮಾನ್ಯ ಜನರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಇಂಗ್ಲೀಷ್ ಹಾಸ್ಯ ಮತ್ತು ವಿಡಂಬನ ಸಾಹಿತ್ಯಗಳ ಬಗ್ಗೆ ಅಭಿರುಚಿ ಹುಟ್ಟಿಸುವುದೇ ಈ ಚಿಕ್ಕ ಗ್ರಂಥದ ಮುಖ್ಯ ಉದ್ದೇಶ. ಈ ಪುಸ್ತಿಕೆಯ ರಚನೆಯಲ್ಲಿ ನನಗೆ ಸೂಕ್ತ ಸಲಹೆ ಗಳನ್ನು ನೀಡಿದ ಪ್ರೊ. ಚಂದ್ರಶೇಖರ ಪಾಟೀಲ ಅವರಿಗೆ ನಾನು

ಕೃತಜ್ಞ. ಈ ಪುಸ್ತಿಕೆಯು ಇಂಗ್ಲೀಷ್ ಸಾಹಿತ್ಯ ಅಭ್ಯಾಸಿಗಳಿಗೂ, ತುಲನಾತ್ಮಕ ಓದುಗರಿಗೂ ಹಾಗೂ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುತ್ತದೆಯೆಂದು ನನ್ನ ನಂಬಿಕೆ.

ಪ್ರಾಸಂಗ ವಿಸ್ತರಣ ಉಪನ್ಯಾಸ ಶಿಬಿರದಲ್ಲಿ ಉಪನ್ಯಾಸವನ್ನೀಯುವ ಅವಕಾಶವನ್ನಿತ್ತ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಹಾಗೂ ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೂ, ಶಿಬಿರದಲ್ಲಿ ನನ್ನೊಂದಿಗೆ ಇದ್ದುಕೊಂಡು ಸಹಕರಿಸಿದ ಸಹಾಯಕ ನಿರ್ದೇಶಕರಾದ ಶ್ರೀ ಎಲ್.ಎಂ.ಗುಡ್ಡೀನ ಅವರಿಗೂ ಮತ್ತು ಶಿಬಿರದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಯಡಹಳ್ಳಿಯ ಶ್ರೀ ಅಡವೀಶ್ವರ ತರುಣ ಸಂಘದವರಿಗೂ ನನ್ನ ಅನಂತ ನಮನಗಳು.

ಲಕ್ಷ್ಮೀನಗರ, ರಾಮದುರ್ಗ
೨೬-೧-೧೯೭೫

ವ್ಹಿ. ಕೆ. ನವಲಗುಂದ

# ಪರಿವಿಡಿ

# ೧. ಇಂಗ್ಲೀಷ ಸಾಹಿತ್ಯದಲ್ಲಿ ಹಾಸ್ಯ ಹಾಗೂ ವಿಡಂಬನೆ

ಇಂಗ್ಲೀಷ್ ಸಾಹಿತ್ಯದಲ್ಲಿ ಹಾಸ್ಯಕ್ಕೆ ಯಾವಾಗಲೂ ಅಗ್ರ ಸ್ಥಾನ. ಅದರಲ್ಲಿ ವಿವಿಧ ರೂಪಗಳಿವೆ. ಅದರ ವಿರಾಡ್ರೂಪ ದರ್ಶನವನ್ನು ಹದಿನಾಲ್ಕನೆಯ ಶತಮಾನದಿಂದ ಇಂದಿನ ಇಪ್ಪತ್ತನೆಯ ಶತಮಾನದ ವರೆಗೂ ಎಲ್ಲರೂ ಕಾಣಬಹುದಾಗಿದೆ. ನಿತ್ಯ ಜೀವನದಲ್ಲಿಯ ವಿವಿಧ ಹಾಸ್ಯ ಭಾವಗಳನ್ನು ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಕಾಣಬಹುದು. ಇಂಗ್ಲೀಷ್ ಜನರ ಸಂಸ್ಕೃತಿ, ಮೇಲ್ಮೆ, ಇತಿಹಾಸಗಳನ್ನು ಸಾರಿ ಹೇಳುವ ಇಂಗ್ಲೀಷ್ ಹಾಸ್ಯ ಸಾಹಿತ್ಯ ಆ ಜನರ ರಾಷ್ಟ್ರೀಯ ಐಕ್ಯತೆಯ ದ್ಯೋತಕ ಹಾಗೂ ಅವರ ಜೀವನದ ಅವಿಭಾಜ್ಯ ಅಂಗ. ಇಂಗ್ಲೀಷ್ ಜನರ ವಿಕಾಸವನ್ನು, ನಡೆನುಡಿ, ಹಾವಭಾವಗಳನ್ನು ನಾವು ಕಾಣುವದು ಅವರ ವಿನೋದ ಸಾಹಿತ್ಯದಲ್ಲಿ. ವಿಶ್ವಸಾಹಿತ್ಯಕ್ಕೆ ಕಾಣಿಕೆ ನೀಡಿ ಬೇರೆ ರಾಷ್ಟ್ರಗಳ ಸಾಹಿತ್ಯಕ್ಕೂ ಪ್ರೇರೇಪಣೆ ನೀಡಿದ ಇಂಗ್ಲೀಷ್ ಹಾಸ್ಯ ಸಾಹಿತ್ಯ ನಿಜಕ್ಕೂ ಶ್ಲಾಘನೀಯ. ಆ ನಾಡಿನ ವೈವಿಧ್ಯತೆಯ ಜೀವನಕ್ಕೆ, ವಿಶಿಷ್ಟ ಗುಣ ಸ್ವಭಾವದ ಜನರಿಗೆ ಕನ್ನಡಿ ಹಿಡಿಯುವದೇ ಇಂಗ್ಲೀಷ್ ವೈನೋದಿಕ ಸಾಹಿತ್ಯದ ಪರಮಗುರಿ. ಅದೊಂದು ಅದಮ್ಯ ಹಾಗೂ ಚಿರಂತನ ಕಾವ್ಯಶಕ್ತಿ. ಇಂಗ್ಲೀಷ್ ವಿನೋದ ಸಾಹಿತ್ಯ ಆ ರಾಷ್ಟ್ರದ ಮಣ್ಣಿನ ಗುಣವನ್ನು ಎತ್ತಿ

ತೋರಿಸುತ್ತದೆ. ಇಂಗ್ಲೀಷ್ ಹಾಸ್ಯ ಸಾಹಿತ್ಯ ವಾಸ್ತವ ಪ್ರಪಂಚಕ್ಕೆ ಹಿಡಿಯುವ ಕನ್ನಡಿಯಾದ್ದರಿಂದ ಜಗತ್ತಿನ ಓದುಗರಿಗೆಲ್ಲ ಬಹು ಆಪ್ಯಾಯಮಾನ. ಈ ಕೆಳಗೆ ವಿಶದೀಕರಿಸಲಟ್ಟವು ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿಯ ವಿವಿಧ ರೂಪಗಳು.

೧. Wit – ಚತುರೋಕ್ತಿ
೨. Satire – ಅಣಕವಾದ ವಿಡಂಬನ
೩. Pun – ಹಾಸ್ಯ ಪ್ರಯೋಗ, ಶ್ಲೇಷೆ
೪. Repartee–ಹಾಜರಿ ಜವಾಬ, ಚತುರ ಪ್ರತ್ಯುತ್ತರ
೫. Grotesque Humour – ವಿಕಟ ಚೇಷ್ಟೆ
೬. Limerick – ಹಾಸ್ಯ ಪದ್ಯ
೭. Mock heroic – ಪರಿಹಾಸ
೮. Anticlimax – ಆರೋಹಣ ಭಂಗ
೯. Comic Opera – ಹರ್ಷಾಂತ ನಿರೂಪಣೆಯ ಪ್ರಹಸನ.
೧೦. Caricature – ವ್ಯಂಗ್ಯ ಚಿತ್ರ.
೧೧. Burlesque – ವಿಕಟಾನುಕರಣ
೧೨. Farce– ನಕಲಿ
೧೩. Parody– ವಿಡಂಬನಾನುಕರಣ
೧೪. Irony – ಹಾಸ್ಯವ್ಯಂಗ್ಯ, ಅಣಕ
೧೫. Paradox – ವಿರೋಧಾಭಾಸ
೧೬. Hyper bole – ಅತಿಶಯೋಕ್ತಿ

ಇಂಗ್ಲೀಷ್ ಸಾಹಿತ್ಯದಲ್ಲಿ ಮೊದನಿಂದಲೂ ಹಾಸ್ಯಕ್ಕೆ ಪ್ರಾಶಸ್ತ್ಯ. ಅದರ ವೈಶಾಲ್ಯತೆ, ವೈವಿಧ್ಯತೆಗಳು ಇಂಗ್ಲೀಷ್ ಸಾಹಿತ್ಯದಲ್ಲಿ ಕಂಡು ಬಂದಷ್ಟು ಭಾರತೀಯ ಸಾಹಿತ್ಯದಲ್ಲಿ ಕಂಡು ಬರಲಾರವು. ಇಂಗ್ಲೀಷ್ ಜನರು ವಿನೋದಪ್ರಿಯರು ಹಾಗೂ ವಾಸ್ತವವಾದಿಗಳು. ಇವರ ಹಾಸ್ಯ ಪ್ರವೃತ್ತಿಯು ಮೋಡ ದೊಳಗಿನ ಬಿಸಿಲಿನಂತಿರುತ್ತದೆ. ಹಾಸ್ಯದ ಸೂಕ್ಷ್ಮ ಅಂಶಗಳನ್ನು ಇವರು ಜಾಗರೂಕತೆಯಿಂದ ಇಂದಿಗೂ ಕಾಪಾಡಿಕೊಂಡು ಬಂದಿದ್ದಾರೆ. ಕೀಳು ದರ್ಜೆಯ ಹಾಸ್ಯವನ್ನೆಂದಿಗೂ ಇವರು ಮೆಚ್ಚರು. ಗಾಂಭೀರ್ಯ ಹಾಗೂ ಸಾಮಾಜಿಕ ಪರಿಸರದ ವಾಸ್ತವಿಕತೆಗಳು ಇಂಗ್ಲೀಷ್ ಜನರ ನಿತ್ಯ ಜೀವನದಲ್ಲಿ ಕಂಡು ಬರುವಂತೆಯೇ ಹಾಸ್ಯವು ಇಂಗ್ಲೀಷ ಸಾಹಿತ್ಯದಲ್ಲಿ ತನ್ನ ಮೇಲ್ಮೆ ಯನ್ನು ಸಾಧಿಸಿದೆ.

ಇಂಗ್ಲೀಷ್ ಜನರ ವಿಡಂಬನೆ ಇನ್ನೂ ಹೆಚ್ಚಿನ ಮಟ್ಟ ದ್ದಾಗಿದೆ. ಇದನ್ನೇ ಇಂಗ್ಲೀಷ್ ಭಾಷೆಯಲ್ಲಿ Satire ಎಂದು ಕರೆಯುತ್ತಾರೆ. ಬಹುಸೂಕ್ಷ್ಮವಾದ ಹಾಗೂ ಹರಿತವಾದ ಮೊನೆ ಮಾತುಗಳಿಂದ ಈ ವಿಡಂಬನೆ ಕೂಡಿದ್ದಾಗಿದೆ. ಸಮಾಜದ ಅಥವಾ ವ್ಯಕ್ತಿಯ ದೋಷಗಳನ್ನು ಮತ್ತು ಏರು ಪೇರುಗಳನ್ನು ಎತ್ತಿ ತೋರಿಸುವದೇ ವಿಡಂಬನೆಯ ಪರಮ ಉದ್ದೇಶ. ಹದಿನಾಲ್ಕನೆಯ ಶತಮಾನದಿಂದಲೇ ಹಾಸ್ಯ ಮತ್ತು ವಿಡಂಬನೆಗಳು ಒಂದಿಲ್ಲೊಂದು ವಿಧದಿಂದ ಇಂಗ್ಲೀಷ್ ಸಾಹಿತ್ಯದ ಹಾಸ್ಯ ಹಾಗೂ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಅರ್ವಾ ಚೀನ ಹಾಗೂ ಪ್ರಾಚೀನ ಯುಗಗಳ ಇಂಗ್ಲೀಷ್ ಸಾಹಿತ್ಯವನ್ನು

"Counterbory tales" ಮತ್ತು "Piers the Ploughman" ಗಳಲ್ಲಿ ರಸಧಾತು ನಿಧಾನ ತತ್ವವನ್ನು ಅಳವಡಿಸಿಕೊಂಡದು ಕಂಡುಬರುವದಿಲ್ಲ. ಇಂಗ್ಲೆಂಡಿನ ರಾಷ್ಟ್ರೀಯತ್ವೆಯನ್ನು ಬಿಂಬಿಸುವ ಗಂಭೀರ ಹಾಗೂ ತಿಳಿಹಾಸ್ಯವನ್ನು ಛಾಸರನು ಸಹಜವಾಗಿ ಉಪಯೋಗಿಸಿದ್ದಾನೆ. ಅದೇ ರೀತಿ ಲ್ಯಾಂಗ್ ಲ್ಯಾಂಡ್ ಕೂಡ ವಿಡಂಬನೆಯನ್ನು ಸ್ವಯಂಸ್ಫೂರ್ತಿಯಿಂದ ಉಪಯೋಗಿಸಿದ್ದಾನೆ. ಇವರಿಬ್ಬರೂ ತಮ್ಮ ಹಾಸ್ಯ ಸಾಹಿತ್ಯದಲ್ಲಿ ಜೀವನದ ವಾಸ್ತವಿಕತೆಯನ್ನೇ ನಿರೂಪಿಸಿದ್ದಾರೆ. ಇವರನಂತರ ಹಾಸ್ಯ ಸಾಹಿತ್ಯವನ್ನು ವಿಕಾಸಗೊಳಿಸಿದ ಇಂಗ್ಲೆಂಡಿನ ವಿಕಟ ಕವಿಗಳು ಹಾಗೂ ಹಾಸ್ಯ ಲೇಖಕರು ಶರೀರದಲ್ಲಿರುವ ಧಾತುಗಳ ವಿಷಮತೆಯ ಪರಿಣಾಮ ಮನುಷ್ಯ ಸ್ವಭಾವದ ಮೇಲೆ ಹೇಗೆ ಆಗುತ್ತದೆಂಬುದನ್ನು ತಮ್ಮ ಕೃತಿಗಳಲ್ಲಿ ವಿಶದವಾಗಿ ತೋರಿಸಿದ್ದಾರೆ.

ನಾಲ್ಕು ರಸಧಾತುಗಳ ಏರುಪೇರುಗಳು ಖಂಡಿತವಾಗಿ ಮಾನವನ ದೇಹ ಹಾಗೂ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುತ್ತವೆಂಬುದು ಛಾಸರನ ನಂತರ ಇಂಗ್ಲೆಂಡಿನ ಕವಿಗಳ, ಲೇಖಕರ ಅಭಿಮತ. ಸ್ವಭಾವ ವಿಲಕ್ಷಣತೆ, ಮಾನಸಿಕ ವೈಚಿತ್ರ್ಯಗಳ ಕಲ್ಪನೆಯನ್ನು ಹದಿನಾರನೆಯ ಶತಮಾನದ ಹಾಸ್ಯ ಪ್ರಮೇಯ ಸೂಚಿಸುತ್ತದೆ.

ಹದಿನೇಳನೆಯ ಶತಮಾನದ ಹಾಸ್ಯ ಸಿದ್ಧಾಂತವು ಮನುಷ್ಯನ ಮನೋಧರ್ಮ, ಪ್ರವೃತ್ತಿ, ಒಲವು, ಮನೋವಿಕಾರ,

ಚಂಚಲತ್ವ, ಭ್ರಾಂತಿಗಳನ್ನು ಸೂಚಿಸುತ್ತದೆ. ಹದಿನೆಂಟನೆಯ ಶತಕದ ಪ್ರಾರಂಭದಲ್ಲಿ ಇಂಗ್ಲೀಷ್ ಹಾಸ್ಯ ಸಾಹಿತ್ಯ ಪರಿಪೂರ್ಣತ್ವವನ್ನು ಪಡೆಯುವ ಮಾರ್ಗವನ್ನು ಕಂಡುಕೊಂಡಿತು. ಹಾಸ್ಯ ಪಾತ್ರಗಳ ನಿರೂಪಣೆ ಹಾಗೂ ವಿನೋದ ಘಟನೆಗಳ ಸಂಯೋಜನೆಯಲ್ಲಿ ಕ್ರಮಬದ್ಧತೆಯನ್ನು ಹದಿನೆಂಟನೆಯ ಶತಮಾನದ ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ನಿತ್ಯ ನೂತನ ಜೀವನದ ಪ್ರಸಂಗಗಳನ್ನು, ವ್ಯಕ್ತಿಗಳನ್ನು ನಾವು ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಕಾಣುತ್ತೇವೆ. ಆದ್ದರಿಂದಲೇ ಅವು ಆಪ್ಯಾಯಮಾನವಾಗಿವೆ. ಅವುಗಳ ಪ್ರಭಾವ ಶಾಶ್ವತ.

ಇಂಗ್ಲೀಷ್ ಹಾಸ್ಯ ಸಾಹಿತ್ಯದ ವಿಕಾಸ ಮೂರು ಹಂತಗಳಲ್ಲಿಲ್ಲಾಗಿದೆ. ನಾರ್ಮನ್ ವಿಜಯದ ನಂತರದ ಕಾಲ ಅದರ ಬೆಳವಣಿಗೆಯ ಮೊದಲಘಟ್ಟ. ಫ್ರಾನ್ಸ್ ಸಂಸ್ಕೃತಿಯ ಪ್ರಭಾವ ಇಂಗ್ಲೆಂಡಿನ ಜನಜೀವನ ಹಾಗೂ ಸಾಹಿತ್ಯಗಳ ಮೇಲೆ ಈ ಕಾಲದಲ್ಲೇ ಆದದ್ದು ಕಂಡು ಬರುತ್ತವೆ. ಹದಿನಾರನೆಯ ಶತಮಾನದಿಂದ ಪ್ರಾರಂಭಿಸಿ ಹದಿನೇಳನೆಯ ಶತಮಾನದ ಕೊನೆಯವರೆಗಿನ ಕಾಲ ಅದರ ವಿಕಾಸದ ಎರಡನೆಯ ಮೆಟ್ಟಲು. ಇದೇ ಹಂತದಲ್ಲಿಯೇ ಹಾಸ್ಯ (Humour) ಶಬ್ದವು ಅನೇಕ ಸ್ಥಿತ್ಯಂತರಗಳನ್ನು ಹೊಂದಿ ವಿನೋದಗಾರನ ಸಾಧನವಾಗಿ ಪರಿಣಮಿಸಿತು. ಹದಿನೆಂಟನೆಯ ಶತಕದಿಂದ ಇಂದಿನವರೆಗಿನ ಕಾಲ ಮೂರನೆಯ ಹಾಗೂ ಕೊನೆಯ ಹಂತವಾಗಿದೆ. ಇಂಗ್ಲೀಷ್ ಜನರ ಮನೋವಿಕಾಸ ಹಾಗೂ ವಿಚಾರ, ವಿಕಾಸಗಳಿಗನುಗುಣವಾಗಿ ಅವರ ಹಾಸ್ಯ ಸಾಹಿತ್ಯ ಬೆಳವಣಿಗೆಯನ್ನು ಹೊಂದಿದೆ.

ವಿನೋದ ಪ್ರವೃತ್ತಿಯು ಇಂಗ್ಲೀಷ್ ಜನರ ಮೂಲಸ್ವಭಾವವಾದ್ದರಿಂದಲೇ ಇಂಗ್ಲೀಷ್ ಹಾಸ್ಯ ಸಾಹಿತ್ಯ ಹೆಚ್ಚು ಶ್ರೀಮಂತವಾಗಿದೆ.

ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಕಗಳಲ್ಲಿ ಇಂಗ್ಲೆಂಡಿನ ಹಾಸ್ಯ ಲೇಖಕರು ಯುರೋಪ ಖಂಡದ ಬೇರೆ ಬೇರೆ ದೇಶಗಳ ಹಾಸ್ಯ ಪ್ರಮೇಯಗಳಿಂದ ಪ್ರಭಾವಿತರಾದರೂ ಕೂಡ ಅವುಗಳನ್ನು ತಮ್ಮ ಸಾಹಿತ್ಯದಲ್ಲಿ ಮೈಗೂಡಿಸಿಕೊಂಡು ಅವುಗಳಿಗೆ ತಮ್ಮ ದೇಶದ ಮುದ್ರೆಯನ್ನೊತ್ತಿ ತಮ್ಮದನ್ನಾಗಿ ಮಾಡಿಕೊಂಡರು. ' ವಿವಿಧ ಮೂಲಗಳಿಂದ ಹಾಸ್ಯ ಪ್ರವಾಹ ಇಂಗ್ಲೀಷ್ ಸಾಹಿತ್ಯದಲ್ಲಿ ಪ್ರವಹಿಸಿದರೂ ಕೂಡ ಆ ಸಾಹಿತ್ಯದಲ್ಲಿಯ ಹಾಸ್ಯ ಇಂಗ್ಲೆಂಡ್ ರಾಷ್ಟ್ರೀಯತೆಯ, ಜನರ ಸಂಸ್ಕೃತಿಯ ದ್ಯೋತಕವಾಗಿದೆ ಹಾಗೂ ಅದರ ಅವಿಚ್ಛಿನ್ನ ಅಂಗವಾಗಿದೆ. ಅದು ಇಂಗ್ಲೆಂಡಿನ ಜನರ ರಾಷ್ಟ್ರೀಯ ಸೊತ್ತು. ಕೆಲವು ಸಂದರ್ಭಗಳಲ್ಲಿ ಇಂಗ್ಲೀಷ್ ಹಾಸ್ಯ ಸಾಹಿತ್ಯ ತನ್ನದೇ ಪರಂಪರೆಯ ಜಾಡನ್ನು ಹಿಡಿದರೆ ಇನ್ನು ಕೆಲವೆಡೆಗಳಲ್ಲಿ ನವ್ಯತೆಯ ಮಾರ್ಗವನ್ನನುಸರಿಸಿ ವಿಶ್ವಸಾಹಿತ್ಯಕ್ಕೆ ಮಾದರಿಯಾಗಿ ತನ್ನ ಅತ್ಯಮೂಲ್ಯವಾದ ಕೊಡುಗೆಯನ್ನೇ ನೀಡಿದೆ. ಆಧುನಿಕ ಇಂಗ್ಲೀಷ್ ಹಾಸ್ಯ ಸಾಹಿತ್ಯವಂತೂ ಒಂದು ಪ್ರಭಾವಶಾಲಿ ಶಕ್ತಿಯೆನಿಸಿ ಪೌರ್ವಾತ್ಯ ಸಂಸ್ಕೃತಿ ಹಾಗೂ ಸಾಹಿತ್ಯಗಳ ಮೇಲೆ ತನ್ನ ಪ್ರಭಾವವನ್ನು ಬೀರಿದೆ.

ಇಂಗ್ಲೆಂಡ ದೇಶವು ಹೇಗೆ ವಿಶಿಷ್ಟ ರೀತಿಯ ಜನರಿಂದ ತುಂಬಿರುವದೋ ಅದೇ ರೀತಿ ಇಂಗ್ಲೀಷ್ ಹಾಸ್ಯ ಸಾಹಿತ್ಯ ಕೂಡ

ವೈಶಿಷ್ಟ್ಯಪೂರ್ಣವಾಗಿದೆ. ಇಂಗ್ಲೆಂಡಿನ ಪ್ರತಿಯೊಬ್ಬ ವ್ಯಕ್ತಿ ವೈಶಿಷ್ಟ್ಯಪೂರ್ಣ. ಒಬ್ಬೊಬ್ಬರೂ ಒಂದೊಂದು ವಿಧ. ರೀತಿ, ನೀತಿ, ನಡತೆ, ಉಡಿಗೆ–ತೊಡಿಗೆ, ಆಹಾರ–ವಿಹಾರ ಇವೆಲ್ಲವು ಗಳಲ್ಲಿ ಅವರು ಭಿನ್ನರು. ಈ ವೈವಿಧ್ಯತೆಯಲ್ಲೇ ಏಕತೆಯನ್ನು ಕಾಣುವದು ಅವರ ಹಾಸ್ಯ ಸಾಹಿತ್ಯದಲ್ಲಿ ,ಮಾತ್ರವೆಂದರೆ ತಪ್ಪಾಗಲಿಕ್ಕಿಲ್ಲ. ಇಂಗ್ಲೀಷ್ ಜನಾಂಗ ಒಂದು, ಇಂಗ್ಲೀಷ್ ಸಂಸ್ಕೃತಿ ಒಂದು ಎಂಬ ಭಾವನೆಯನ್ನು ಇಂಗ್ಲೀಷ್ ಹಾಸ್ಯ ಸಾಹಿತ್ಯವು ವಿದಿತಪಡಿಸುತ್ತದೆ. ಇಂಗ್ಲೀಷ್ ಜನರು ಕೆಲವು ವಿಷಯುಗಳಲ್ಲಿ ಸಂಪ್ರದಾಯ ಶರಣರೇನೋ ನಿಜ. ಆದರೆ ಹಾಸ್ಯ ಸಾಹಿತ್ಯ ವಿಚಾರಧಾರೆಯನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸಿ, ಅದಕ್ಕೊಂದು ಹೊಸರೂಪ ಕೊಡುವದರಲ್ಲಿ ಅವರು ಅಷ್ಟೇ ಸಿಸ್ಸೀಮರಾಗಿದ್ದಾರೆ. ಪ್ರತಿ ಶತಕದಲ್ಲಾಗುವ ಸಾಮಾಜಿಕ ಬದಲಾವಣೆಗಳನ್ನು ಹೊಂದಿಕೊಂಡೇ ಇಂಗ್ಲೀಷ್ ಹಾಸ್ಯ ಸಾಹಿತ್ಯ ತನ್ನ ವಿಕಾಸವನ್ನು ಹೊಂದಿದೆ.

ವಿಡಂಬನೆಯು ಹಾಸ್ಯ ಸಾಹಿತ್ಯದ ಒಂದು ಭಾಗವಾಗಿದೆ. ಹಾಸ್ಯವೇ ಅದರ ಉಗಮಸ್ಥಾನ. ತಿಳಿಹಾಸ್ಯ ಹೇಗೆ ಇಂಗ್ಲೀಷ್ ಸಾಹಿತ್ಯದಲ್ಲಿ ವಿಪುಲವಾಗಿ ಬೆಳೆದಿದೆಯೋ ವಿಡಂಬನೆಯೂ ಕೂಡ ಅದಕ್ಕೆ ಪೋಷಕವಾಗಿ ಹುಲುಸಾಗಿ ಬೆಳೆದಿದೆ. ಅವುಗಳ ಬೆಳ ವಣಿಗೆಗೆ ನೆಲ–ಜಲ ಒಂದೇ ಆಗಿದೆ. ಆದರೆ ಅವು ಇಂಗ್ಲೀಷ್ ಜನರ ಹಾಸ್ಯ ಮನೋಧರ್ಮದ ಎರಡು ಮುಖಗಳು. ಜಾಣನಿಗೆ ಮಾತಿನ ಪೆಟ್ಟಿನ ರೀತ್ಯ ವಿಡಂಬನೆ ಬೌದ್ಧಿಕ ಹಾಸ್ಯ. ಅದು ಬಹು ತೀಕ್ಷ್ಣವಾಗಿ ಮಾರ್ಮಿಕವಾಗಿರುತ್ತದೆ. ಇಂಗ್ಲೀಷ್

ಸಾಹಿತ್ಯದಲ್ಲಿ ಹಾಸ್ಯ ಹೇಗೆ ಸ್ವಾಭಾವಿಕವಾದ ಬೆಳವಣಿಗೆ ಹೊಂದಿದೆಯೋ ಅದೇ ರೀತಿ ವಿಡಂಬನೆಯು ಕೂಡ ಇಂಗ್ಲೆಂಡ ಸಮಾಜದಿಂದ ಪ್ರೇರೇಪಣೆ ಹೊಂದಿ ಸ್ವಾಭಾವಿಕವಾಗಿ ವಿಕಾಸ ಹೊಂದಿದೆ. ಇಂಗ್ಲೀಷ್ ಭಾಷೆಯಲ್ಲಿ Satire ಎಂಬುದು ಅನ್ವರ್ಥಕ ಶಬ್ದ. ಇಂಗ್ಲೀಷ್ ಸಾಹಿತ್ಯದಲ್ಲಿ ವಿಡಂಬನೆಯು ವೈವಿಧ್ಯಮಯ ಶೈಲಿಯುನ್ನು ಹೊಂದಿದೆಯಲ್ಲದೆ ವಿವಿಧ ರೂಪಗಳಲ್ಲಿ ಪ್ರಕಟವಾಗಿದೆ. ನಿಂದಾಪರ ಪದ್ಯ, ವಿಡಂಬನ ಕಾವ್ಯ, ಪ್ರಹಸನ, ಅಪಹಾಸ್ಯದ ಬರಹಗಳು, ಕುಚೋದ್ಯ ಹಾಗೂ ಲೇವಡಿಗಳಿಂದ ಕೂಡಿದ ಲೇಖನಗಳು ಮುಂತಾದವುಗಳು ವಿಡಂಬನೆಯ ವಿವಿಧ ರೂಪಗಳು.

ಕೆಲವು ವಿಮರ್ಶಕರು ಹೇಳುವಂತೆ ಹಾಸ್ಯ ಸಾಹಿತ್ಯ ಬಹುರೂಪಿ. ಇಂಗ್ಲೀಷ್ ಸಾಹಿತ್ಯದಲ್ಲಿಯ ಹಾಸ್ಯ ದಶಾವತಾರದ ರೂಪಗಳನ್ನು ತಾಳಿದೆ. ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಹಾಸ್ಯ ಹಾಗೂ ವಿಡಂಬನೆಯ ಅನೇಕ ರೂಪಗಳು ಹೇಗೆ ಒಳಗೊಂಡಿರುವವೋ ಅದೇ ರೀತಿ ಹಾಸ್ಯದ ಇನ್ನೊಂದು ಅವಿಚ್ಛಿನ್ನ ಅಂಗವಾದ ಚತುರೋಕ್ತಿ (Wit) ಕೂಡ ಇಂಗ್ಲೀಷ್ ಸಾಹಿತ್ಯದಲ್ಲಿ ಸ್ವಾಭಾವಿಕವಾಗಿ ವಿಕಾಸಹೊಂದಿದೆ. ಹದಿನೇಳನೆಯ ಶತಮಾನದ ಆಧ್ಯಾತ್ಮವಾದಿ ಕವಿಗಳು (Metaphysical Poets) ಸಹಜವಾಗಿ ತಮ್ಮ ಕವನಗಳಲ್ಲಿ ಚತುರೋಕ್ತಿಯನ್ನು ಉಪಯೋಗಿಸಿದ್ದಾರೆ. ಈ ಕವಿಗಳ ಕೃತಿಗಳಲ್ಲಿ ವಿರೋಧಾಭಾಸ (Paradox) ಹಾಗೂ ವಿನೋದಪೂರ್ಣವಾದ ವಿಚಾರಗಳ ಸಂಯೋಜನವಿದೆ. ತೀವ್ರವಾದ ಆಶ್ಚರ್ಯ, ಆಘಾತಗಳನ್ನು ವಿನೋದಪೂರ್ಣ ಚಮತ್ಕಾರ

ವಾಕ್ಯಗಳ ಮೂಲಕ ಉಂಟು ಮಾಡುವದೇ ಆಧುನಿಕ ಚತುರೋಕ್ತಿಯ ಮುಖ್ಯೋದ್ದೇಶ. ಇದೊಂದು ಬುದ್ಧಿಮತ್ತೆಯ ಪ್ರದರ್ಶನ. ಕ್ರೋಢೀಕರಣತ್ವ, ಚಾತುರ್ಯ, ಕೈಚಳಕಗಳೇ ಚತುರೋಕ್ತಿಯ ಲಕ್ಷಣಗಳು.

ಪರಸ್ಪರ ಸಂಬಂಧವಿಲ್ಲದ ಭಾವಗಳ ಅಥವಾ ಮಾತುಗಳ ಅನಿರೀಕ್ಷಿತ ಸಂಯೋಜನೆ ಅಥವಾ ವಿವಿಧ ದೃಶ್ಯ ನಿರೂಪಣೆಯಿಂದ ಥಟ್ಟನೆ ಬುದ್ಧಿಗೆ ಆನಂದವನ್ನುಂಟು ಮಾಡುವದೇ ಚತುರೋಕ್ತಿಯ ಪ್ರಧಾನ ವೈಶಿಷ್ಟ್ಯವಾಗಿದೆ. ಈ ಚತುರೋಕ್ತಿಯನ್ನೇ ಬೇರೆ ಅನ್ವರ್ಥಕ ನಾಮಗಳಾದ ರಸಿಕೋಕ್ತಿ, ಸರಸೋಕ್ತಿ ಹಾಗೂ ಹಾಸ್ಯಾಭಾಸಗಳೆಂಬ ಹೆಸರುಗಳಿಂದ ಕರೆಯಲಾಗಿದೆ.

ಶ್ಲೇಷೆ (Pun) ಯನ್ನು ಇಂಗ್ಲೆಂಡಿನ ಖ್ಯಾತ ಕವಿಗಳಾದ ಶೇಕ್ಸಪೀಯರ್ ಹಾಗೂ ಹರ್ಬರ್ಟರು ತಮ್ಮ ಕೃತಿಗಳಲ್ಲಿ ಉಪಯೋಗಿಸಿಕೊಂಡಿದ್ದಾರೆ. ಶ್ಲೇಷೆ ಕೂಡ ಇಂಗ್ಲೀಷ್ ಸಾಹಿತ್ಯದಲ್ಲಿ ಹಾಸ್ಯ ಪ್ರಯೋಗವಾಗಿದೆ. ಆಧುನಿಕ ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ವಿಶೇಷ ಹಾಸ್ಯ ಪ್ರಕಾರವಾದ ಹಾಜರಿ ಜವಾಬ (Repartee) ಬೆಳೆದು ಬಂದ ಬಗೆ ಬಹು ವಿಸ್ಮಯಕರ. ಸನ್ನಿವೇಶ ಪ್ರಚೋದಿತ ಚತುರೋಕ್ತಿಗೇ ನಾವು ಹಾಜರಿ ಜವಾಬ ಎಂದು ಕರೆಯುವದುಂಟು.

ವ್ಯಂಗ್ಯ ಅಥವಾ ಅಣಕವು ಇಂಗ್ಲೀಷ್ ಹಾಸ್ಯ ಸಾಹಿತ್ಯದ ಒಂದು ಪ್ರಕಾರ. ಶೇಕ್ಸಪೀಯರ್ ಮೊದಲಾದ ನಾಟಕಕಾರರು ತಮ್ಮ ನಾಟಕಗಳಲ್ಲಿ ಹಾಸ್ಯವ್ಯಂಗ್ಯ (Comic Irony)ವನ್ನು

ಚಾತುರ್ಯದಿಂದುಪಯೋಗಿಸಿದ್ದಾರೆ. ವಿಡಂಬನಾನುಕರಣ, ವಿಕಟಾನುಕರಣ, ಹರ್ಷಾಂತ ನಿರೂಪಣೆ ಹಾಗೂ ಪ್ರಹಸನಗಳು ಹದಿನೇಳು ಹಾಗೂ ಹದಿನೆಂಟನೆಯ ಶತಕಗಳಲ್ಲಿ ವಿಕಾಸವಾದವು. ಈ ಯುಗದ ನಗೆ ಬರಹಗಾರರು ಇವುಗಳನ್ನು ಸಂಶೋಧಿಸಿ ಇಂಗ್ಲೀಷ್ ಹಾಸ್ಯ ಸಾಹಿತ್ಯವನ್ನು ಅಭಿವೃದ್ಧಿ ಪಡಿಸಿದರು. ವಿರೋಧಾಭಾಸ, ಅತಿಶಯೋಕ್ತಿಗಳನ್ನು ನವ ಯುಗದ ಇಂಗ್ಲೀಷ್ ಹಾಸ್ಯ ಬರಹಗಾರರು ಲೀಲಾಜಾಲವಾಗಿ ತಮ್ಮ ನಗೆ ಬರಹಗಳಲ್ಲುಪಯೋಗಿಸಿದ್ದಾರೆ.

ಪದ್ಯರೂಪಿ ಹರ್ಷನಾಟಕ ಹಾಗೂ ಚಿಕ್ಕ ಹರ್ಷನಾಟಕಗಳು ಹದಿನೇಳನೆಯ ಶತಕದ ಇಟಲಿ ಹಾಗೂ ಫ್ರಾನ್ಸ ದೇಶಗಳ ಸಾಹಿತ್ಯದಿಂದ ಎರವಲು ಪಡೆದವುಗಳಾಗಿವೆ. ಮಹಾಕವಿ ಮಿಲ್ಟನ್ ಇಂತಹ ಪದ್ಯರೂಪಿ ಹರ್ಷ ನಾಟಕಗಳನ್ನು ರಚಿಸಿದ್ದಾನೆ. ಐದು ಚರಣಗಳ ಹಾಸ್ಯಪದ್ಯ ಹಾಗೂ ನಗೆಯ ಹಾಡುಗಳು ಹದಿನೆಂಟನೆಯ ಶತಕದಿಂದೀಚೆಗೆ ರಚಿಸಲ್ಪಟ್ಟು, ಬೆಳಕಿಗೆ ಬಂದಿವೆ. ವಿಕಟ ಚಿತ್ರಗಳನ್ನೊಳಗೊಂಡ ಪದ್ಯಗಳು, ಲೇಖನಗಳು ಹಾಗೂ ವಿನೋದಕರವಾದ ಚಿತ್ರಗಳ ಸರಣಿಗಳು ಹಾಸ್ಯ ಹಾಸ್ಯದ ನವಜಾತ ಶಿಶುಗಳು.

ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಯುರೋಪದ ಬೇರೆ ದೇಶಗಳ ಹಾಸ್ಯ ಸಾಹಿತ್ಯದಿಂದ ಪ್ರಭಾವಗೊಂಡು ಇಂಗ್ಲೀಷ ಹಾಸ್ಯ ಲೇಖಕರು ಖಂಡಾಂತರ ಹಾಸ್ಯರೂಪಗಳನ್ನು ತಮ್ಮ ಸಾಹಿತ್ಯದಲ್ಲಿ ಪ್ರಯೋಗಿಸಿದರು. ಹಾಸ್ಯಾನುಕರಣ (Travesty)

ಉದಾತ್ತ ಶೈಲಿಯ ವಿಕಟಾನುಕರಣ, ಹಾಸ್ಯಪ್ರಕರಣಗಳು ಹಾಗೂ ಸಂಗೀತ ಪ್ರಧಾನ ಹರ್ಷ ನಾಟಕಗಳು ಹದಿನೆಂಟು ಹಾಗೂ ಹತ್ತೊಂಬತ್ತನೆಯ ದಶಕಗಳ ಮಧ್ಯದಲ್ಲಿ ಇಂಗ್ಲೆಂಡಿನಲ್ಲೇ ಜನ್ಮ ತಾಳಿದವು. ವಿನೋದಕ್ಕಾಗಿ ಬರೆದ ಕ್ಷುಲ್ಲಕ ಹಾಗೂ ಅಸಂಬದ್ಧ ವಾದ ಕವನಗಳು (Light Verse Doggerel); ಕಟುವ್ಯಂಗ್ಯ ಲೇಖನಗಳು,(Lampoons)ಹತ್ತೊಂಬತ್ತು ಹಾಗೂ ಇಪ್ಪತ್ತನೆಯ ದಶಕಗಳ ಹಾಸ್ಯ ಸಾಹಿತ್ಯದ ಪರಿಮಿತಿಯಲ್ಲಿ ಬರುತ್ತವೆ.

ಶೇಕ್ಸಪೀಯರನ ದುರಂತ ನಾಟಕಗಳಲ್ಲಿ ವಿನೋದವನ್ನುಂಟು ಮಾಡುವ ಕೆಲ ದೃಶ್ಯಗಳು ಜೋಡಿಸಲ್ಪಟ್ಟಿವೆ. ಇವುಗಳಿಗೆ ಇಂಗ್ಲೀಷಿನಲ್ಲಿ Comic Relie ಎಂದು ಕರೆಯುವದುಂಟು. ಇಲ್ಲಿ "ಹ್ಯಾಮಲೇಟ್" ನಾಟಕದಲ್ಲಿಯ ಸ್ಮಶಾನದ ದೃಶ್ಯ ಹಾಗೂ "ಮ್ಯಾಕಬೆಥ್"ದಲ್ಲಿಯ ಫ್ಲೀಟನ ರಸದೃಶ್ಯಗಳನ್ನು ಉದ್ಧಾಹರಿಸ ಬಹುದು. ಕೆಲವು ಇಂಗ್ಲೀಷ್ ಲೇಖಕರು ಸಾರೋಕ್ತಿ (Climax) ಹಾಗೂ ಪ್ರತಿಸಾರೋಕ್ತಿ (Anticlimax)ಗಳನ್ನು ವಿನೋದ ವನ್ನುಂಟುಮಾಡುವದರ ಸಲುವಾಗಿ ತಮ್ಮ ಕೃತಿಗಳಲ್ಲಿ ಉಪ ಯೋಗಿಸಿದ್ದಾರೆ. ಇವು ಕೂಡ ವಿಶಾಲವಾದ ಇಂಗ್ಲೀಷ್ ಹಾಸ್ಯ ವೃಕ್ಷದ ಟಿಸಿಲುಗಳಾಗಿವೆ.

ಬೇರೆ ಬೇರೆ ಯುಗಗಳಲ್ಲಿ ಯುರೋಪಿನ ಇತರ ದೇಶಗಳ ಹಾಸ್ಯ ಸಾಹಿತ್ಯವು ಇಂಗ್ಲೀಷ್ ಹಾಸ್ಯ ಸಾಹಿತ್ಯದ ಮೇಲೆ ವಿವಿಧ ಮಟ್ಟದಲ್ಲಿ ತನ್ನ ಪ್ರಭಾವ ಬೀರಿದ್ದು ಕಂಡು ಬರುತ್ತದೆ. ಮಧ್ಯ ಯುಗದಿಂದಲೂ ಫ್ರಾನ್ಸ ದೇಶದ ಹಾಸ್ಯ ಸಾಹಿತ್ಯವು ಇಂಗ್ಲೀಷ್

ಹಾಸ್ಯ ಸಾಹಿತ್ಯದ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದು ತಿಳಿದು ಬರುತ್ತದೆ. ಛಾಸರ ಹಾಗೂ ಲ್ಯಾಂಗ್‌ಲ್ಯಾಂಡರು ಫ್ರಾನ್ಸ ದೇಶದ ಹಾಸ್ಯ ಸಾಹಿತ್ಯದಿಂದಲೇ ಸ್ಫೂರ್ತಿಯನ್ನು ಪಡೆದಿದ್ದಾರೆನ್ನುವದು ನಿರ್ವಿವಾದ. ಮಧ್ಯಯುಗದ ಫ್ರೆಂಚ ಸಾಹಿತ್ಯದ ಹಾಸ್ಯ ಶೈಲಿ ಹೆಚ್ಚಾಗಿ ಒರಟಾಗಿಯೇ ಇದ್ದದ್ದು ಕಂಡು ಬರುತ್ತದೆ. ಇಂಗ್ಲೀಷ್ ಸಾಹಿತ್ಯದಲ್ಲಿಯೂ ಕೂಡ ಮೊದಲಿಗೆ ಒರಟಾದ ಹಾಸ್ಯ ಶೈಲಿಯೇ ಬೆಳೆದು ಬಂದಿದೆ. ಮಧ್ಯಯುಗದ ಫ್ರೆಂಚ ವೈನೋದಿಕೆಗಳು ಇಂಗ್ಲೀಷ್ ಹರ್ಷ ನಾಟಕಗಳ ಮೇಲೆ ಪ್ರಭಾವ ಬೀರಿ ಅವು ಭರದಿಂದ ಬೆಳೆಯಲು ಪ್ರೇರಣೆ ಕೊಟ್ಟವು. ನವೋದಯ ಯುಗದ ಇಂಗ್ಲೀಷ್ ಹಾಸ್ಯ ಸಾಹಿತ್ಯವು ಸಮಕಾಲೀನ ಇಟಲಿ, ಫ್ರಾನ್ಸ. ಹಾಗೂ ಸ್ಪೇನ್ ದೇಶಗಳ ಹಾಸ್ಯ ಸಾಹಿತ್ಯದಿಂದ ಪ್ರಭಾವಹೊಂದಿ ರೂಪುಗೊಂಡದ್ದಾಗಿದೆ. ಫ್ರೆಂಚ ಸಾಹಿತ್ಯದ ಹಾಸ್ಯ ಚತುರೋಕ್ತಿಯನ್ನು ಇಂಗ್ಲೀಷ್ ವಿಕಟ ಕವಿಗಳು ಹಾಗೂ ಲೇಖಕರು ಎರವಲು ಪಡೆದುಕೊಂಡಿದ್ದಾರೆಂದು ಹೇಳಬಹುದು. ಇದೇ ರೀತಿ ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಕಗಳಲ್ಲಿ ಫ್ರೆಂಚ್, ಇಟಾಲಿಯನ್. ನಾರ್ವೆಜಿಯನ್. ರಶಿಯನ್ ಸಾಹಿತ್ಯದ ನವೀನ ಹಾಸ್ಯ ಶೈಲಿಗಳು ಇಂಗ್ಲೀಷ್ ಹಾಸ್ಯ ಸಾಹಿತ್ಯವನ್ನು ವಿಸ್ತಾರಗೊಳಿಸಿ ಹೊಸ ತಿರುವನ್ನು ಕೊಟ್ಟಿವೆ.

ಇಂಗ್ಲೀಷ್ ಸಾಹಿತ್ಯದಲ್ಲಿಯ ವಿನೋದ ಬರಹಗಾರರು ಹಾಗೂ ವಿಡಂಬನಕಾರರು ಒಂದೇ ನಾಣ್ಯದ ಎರಡು ಮುಖಗಳಂತಿದ್ದರೂ ಅವರ ಮನೋಧರ್ಮದಲ್ಲಿ ಸ್ವಲ್ಪ ವ್ಯತ್ಯಾಸ

ವನ್ನು ಕಾಣಬಹುದಾಗಿದೆ. ತಿರಸ್ಕೃತ ಭಾವನೆಯು ವಿಡಂಬನೆಯ ಮೂಲೋದ್ದೇಶವಾಗಿದೆ. ವಿಡಂಬನಕಾರನ ಉದ್ದೇಶವು ವಿಡಂಬನೆಗೆಡೆಯಾದ ವಸ್ತುವನ್ನು ಪರಿಹಾಸ್ಯಕ್ಕೆ ಗುರಿಮಾಡುವದಲ್ಲದೇ ಓದುಗರು ಆ ವಸ್ತುವನ್ನು ಹೀಯಾಳಿಸುವಂತೆ ಪ್ರೇರೇಪಿಸುವದೇ ಆಗಿದೆ. ಶೇಕ್ಸಪೀಯರ್, ಡಿಕೆನ್ಸ್, ಗೋಲ್ಡ ಸ್ಮಿಥ್ ಹಾಗೂ ಭಾಸರನಂಥ ಕವಿಗಳು ಹಾಗೂ ಲೇಖಕರು ತಿಳಿ ಹಾಸ್ಯ ಹಾಗೂ ಮೃದು ವಿಡಂಬನೆಗಳನ್ನು ಮೈಗೂಡಿಸಿಕೊಂಡಿದ್ದಾರೆ. ಹಾಗೂ ಅವರ ವಿಡಂಬನ ಶೈಲಿ ತಿರಸ್ಕಾರ ಹಾಗೂ ಪರಿಹಾಸ್ಯರಹಿತವಾಗಿದೆ. ವಿನೋದಬರಹಗಾರ ವಸ್ತುವಿನ ಅಸಂಬದ್ಧತೆಯ ಮೇಲೆ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಿರುತ್ತಾನೆ ಮತ್ತು ಅವನು ಮಾನವೀಯತೆಯ ಪ್ರತೀಕ. ಮಾನವ ಸಮಾಜದ ಲೋಪದೋಷಗಳ ಬಗೆಗೆ ಈತನಿಗೆ ಅಪಾರ ಅನುಕಂಪ. ಮಾನವನ ಲೋಪದೋಷಗಳನ್ನು ಕಂಡು ಈತನು ಮುಗುಳ್ನಗುತ್ತಾನಷ್ಟೇ ! ವಿನೋದ ಬರಹಗಾರ ನರದ್ವೇಷಿಯಲ್ಲ; ಆದರೆ ಮಾನವ ಪ್ರೇಮದಿಂದ ತುಂಬಿದ ಸಮಾಜ ಜೀವನವೇ ಅವನ ಹಾಸ್ಯ ಸಾಹಿತ್ಯಕ್ಕೆ ಸ್ಫೂರ್ತಿ. ವಿಕಟ ಬರಹಗಾರನೂ ಕೂಡ ಒಬ್ಬ ಕಲಾಕಾರ. ಜನರ ಮನರಂಜಿಸುವದಲ್ಲದೇ ಅವರು ತಮ್ಮ ತಪ್ಪು ತಡೆಗಳನ್ನು ತಿದ್ದಿಕೊಳ್ಳಲು ಸಹಾಯ ಮಾಡುವದೇ ಉದಾತ್ತ ವಿಕಟ ಬರಹಗಾರನ ಪರಮಗುರಿ.

ಅನೇಕ ಸಾಮಾನ್ಯ ಜನರು ಹಾಸ್ಯಕ್ಕೆ "ನಗೆ" ಎಂಬ ಸಾಮಾನ್ಯಾರ್ಥ ಕಲ್ಪಿಸುತ್ತಾರೆ. ಇದು ತಪ್ಪು. ಅದು ಕೇವಲ ನಗೆಯಾಗಿರದೇ ಜೀವನದ ಅಸಂಬದ್ಧತೆಗಳನ್ನು ಎತ್ತಿ ತೋರಿಸಿ

ಜನರನ್ನು ನಲಿಸುವ ಸಾಧನವಾಗಿದೆ. ಹಾಸ್ಯದಲ್ಲಿ ಮುಖ್ಯವಾಗಿ ಎರಡು ವಿಧಾನಗಳು. ಮನರಂಜಿಸುವ ಹಾಸ್ಯ ಹಾಗೂ ಬೌದ್ಧಿಕ ಹಾಸ್ಯ. ಇವೆರಡು ಪ್ರಕಾರಗಳು ಇಂಗ್ಲೀಷ್ ಸಾಹಿತ್ಯದಲ್ಲಿ ಹೇರಳವಾಗಿ ಕಂಡು ಬರುತ್ತವೆ. ಥ್ಯಾಕರೆಯ ಅಭಿಪ್ರಾಯದ ಪ್ರಕಾರ ಉದಾತ್ತ ಹಾಸ್ಯ ಬರಹಗಾರ ಜೀವನದ ವಿಮರ್ಶಕ, ತನ್ನ ಅಭಿಪ್ರಾಯಗಳನ್ನು ಪೂರ್ವಗ್ರಹ ಪೀಡನೆಗಳಿಂದ ಮುಕ್ತವಾಗಿರಿಸಬೇಕು. ಇಂಥ ಅನೇಕ ವಿಮರ್ಶಕ, ಸಮಾಜ ಸುಧಾರಕ ಮತ್ತು ನೀತಿ ಮತ್ತೆಯ ಹಾಸ್ಯ ಬರಹಗಾರರನ್ನು ಇಂಗ್ಲೀಷ್ ಹಾಸ್ಯ ಸಾಹಿತ್ಯ ಬೆಳಕಿಗೆ ತಂದಿದೆ. ನಿಜಕ್ಕೂ ಇಂಗ್ಲೀಷ್ ಹಾಸ್ಯ ಸಾಹಿತ್ಯವು ವಿಶಾಲವಾದ ಕಡಲಿದ್ದಂತೆಯೇ.

# ೨. ಪ್ರಾಚೀನ ಇಂಗ್ಲೀಷ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನೆ

ಪ್ರಾಚೀನ ಇಂಗ್ಲೀಷ್ ಸಾಹಿತ್ಯದಲ್ಲಿ ಹೇಳಿಕೊಳ್ಳುವಂಥ ವೈವಿಧ್ಯತೆ ಹಾಗೂ ಬೆಳವಣಿಗೆ ಕಂಡುಬರುವದಿಲ್ಲ. ಇದು ಹಾಸ್ಯ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಪ್ರಾಚೀನ ಇಂಗ್ಲೀಷ್ ಸಾಹಿತ್ಯವನ್ನು ಎರಡು ವಿಭಾಗಗಳನ್ನಾಗಿ ವಿಭಜಿಸಲಾಗಿದೆ. ಮೊದಲನೆಯದು "ಆಂಗ್ಲೋ–ಸ್ಯಾಕ್ಸನ್" ಸಾಹಿತ್ಯಯುಗ. ಎರಡನೆಯದು "ಆಂಗ್ಲೋ ನಾರ್ಮನ್" ಸಾಹಿತ್ಯಯುಗ. ಈ ಎರಡೂ ಯುಗಗಳಲ್ಲಿ ಕೈಬೆರಳಲ್ಲಿ ಎಣಿಸುವಷ್ಟು ಮಾತ್ರ ಕೃತಿಗಳು ರಚಿಲಸ್ಪಟ್ಟವು. ಹಾಸ್ಯ ಮತ್ತು ವಿಡಂಬನ ಸಾಹಿತ್ಯ ಕೂಡ ಬಹಳೇ ಮಂದಗತಿಯಲ್ಲಿ ಸಾಗಿದ್ದು ಕಂಡು ಬರುತ್ತದೆ.

i) **ಆಂಗ್ಲೋ ಸ್ಯಾಕ್ಸನ್ ಕಾಲದ ಹಾಸ್ಯ ಮತ್ತು ವಿಡಂಬನ ಸಾಹಿತ್ಯ**– "ಆಂಗ್ಲೋ ಸ್ಯಾಕ್ಸನ್" ಸಾಹಿತ್ಯದಲ್ಲಿ ಹಾಸ್ಯದ ಅಭಾವ ಕಂಡು ಬರುತ್ತದೆ. ಗಂಭೀರ ಶೈಲಿಯ ಮಹಾ ಕಾವ್ಯಗಳು ಬರೆಯಲ್ಪಟ್ಟ ಯುಗವಾಗಿರುವದರಿಂದ ಹಾಸ್ಯಕ್ಕೆ ಪ್ರಾಧಾನ್ಯತೆ ಸಿಕ್ಕಿಲ್ಲ. ಆದರೆ ಗಂಭೀರವಾದ ವಿಡಂಬನ ಶೈಲಿ ಮತ್ತು ಧಾರ್ಮಿಕ ಭಾವನೆಗಳು ಮಹಾಕಾವ್ಯಗಳ ಪ್ರಭಾವದ ಮೂಸೆಯಲ್ಲಿ ಅದ್ದಿ ತೆಗೆಯಲ್ಪಟ್ಟವುಗಳಾಗಿವೆ. ಈ ವಿಡಂಬನ ಶೈಲಿಯನ್ನು ನಾವು ಈ ಯುಗದ ಮಹಾಕಾವ್ಯದಲ್ಲಿ ಕಾಣುತ್ತೇವೆ. ಧರ್ಮವೇ ಆಗಿನ ಕಾಲದ ಜನರ ಜೀವನದ ಉಸಿರಾಗಿತ್ತು. ಧಾರ್ಮಿಕ ವಿಷಯುಗಳು

ಹಾಗೂ ಯುದ್ಧಗಳ ವಿಷಯುಗಳನ್ನು ಮಾತ್ರ ಈ ಮಹಾಕಾವ್ಯದಲ್ಲಿ ಕಾಣುತ್ತೇವೆ. ಈ ಯುಗ ಇನ್ನೂ ಉಗಮವಾಗದ ಕ್ರೈಸ್ತ ಧರ್ಮದ ಹಾಗೂ ವಿಧರ್ಮೀಯರ ಮತ್ತು ಮೂರ್ತಿ ಪೂಜಕರ ಕಾಲ. ಈ ಯುಗದ ಮಹಾಕಾವ್ಯ "ಬೇಪೂಲ್ಫ್"ದಲ್ಲಿ ವಿಡಂಬನೆ ಸೇರಿಕೊಂಡಿದೆ. "ದಿ ಸೀಫೇರರ್" ಈ ಯುಗದ ಅದ್ಭುತ ಪದ್ಯ; ಇದರಲ್ಲಿ ರೂಪಕ ಅಥವಾ ಅನ್ಯೋಕ್ತಿಯನ್ನು ಕಾಣಬಹುದಾಗಿದೆ. ಜಾನಪದ ಹಾಸ್ಯ ಸಾಹಿತ್ಯ ಹಾಗೂ ಒಗಟಿನ ಪದ್ಯಗಳು ಈ ಯುಗದಲ್ಲೇ ಆರಂಭಗೊಂಡಿದ್ದರಲ್ಲಿ ಸಂಶಯುವಿಲ್ಲ.

ii) **ಆಂಗ್ಲೋ-ನಾರ್ಮನ್ ಕಾಲದ ಹಾಸ್ಯ ಮತ್ತು ವಿಡಂಬನ ಸಾಹಿತ್ಯ**– ಈ ಯುಗದ ಸಾಹಿತ್ಯದಲ್ಲಿ ರಾಜಕೀಯ ಧಾರ್ಮಿಕ ಹಾಗೂ ಯುದ್ಧಕೌಶಲಗಳ ವಿಷಯುಗಳೇ ಹೆಚ್ಚಾಗಿ ನಿರೂಪಿಸಲ್ಪಟ್ಟಿವೆ. ಇಲ್ಲಿಯೂ ಹಾಸ್ಯದ ಅಭಾವ ಕಂಡು ಬರುತ್ತದೆ. ರಾಜಕೀಯ ವಿಷಯುಗಳನ್ನು ನಿರೂಪಿಸುವ ಜಾನಪದ ಗೀತೆಗಳು ಈ ಕಾಲದಲ್ಲಿ ಪ್ರಚಾರಕ್ಕೆ ಬಂದವು. ಈ ಜಾನಪದ ಕಾವ್ಯಗಳಲ್ಲಿ ರಾಜಕೀಯ ಹಾಗೂ ಧಾರ್ಮಿಕ ವಿರುಪೇರುಗಳ ವಿಡಂಬನೆ ಗೈಯಲಾಗಿದೆ. ಕ್ರೈಸ್ತಧರ್ಮವು ಇಂಗ್ಲೆಂಡಿಗೆ ಬಂದು ಇಂಗ್ಲೆಂಡಿನ ಜನರ ಜೀವನದಲ್ಲಿ ಅನೇಕ ಬದಲಾವಣೆಗಳನ್ನುಂಟು ಮಾಡಿದ ಕಾಲವಿದು.

# ೩. ಮಧ್ಯಯುಗದ ಇಂಗ್ಲೀಷ ಹಾಸ್ಯ ಮತ್ತು ವಿಡಂಬನ ಸಾಹಿತ್ಯ

ನಾರ್ಮನ್‌ರು ಇಂಗ್ಲೆಂಡನ್ನು ಗೆದ್ದ ಬಳಿಕ ಅಲ್ಲಿ ಹೊಸ ವಾತಾವರಣ ಉಂಟಾಯಿತು. ಇಂಗ್ಲೀಷ್ ಭಾಷೆಯು ಬೆಳವಣಿಗೆ ಶೀಘ್ರ ಗತಿಯಿಂದ ಆರಂಭವಾಯ್ತು. ಇಂಗ್ಲೆಂಡಿನ ರಾಷ್ಟ್ರೀಯ ಭಾವನೆಗಳು ಬಲವಾಗಿ ಬೇರೂರಿ ಅದು ತನ್ನದೇ ಆದ ಸಂಸ್ಕೃತಿ ಹಾಗೂ ಸಾಹಿತ್ಯವನ್ನು ವಿಕಸಿಸಿ ಕಾಪಾಡಿಕೊಂಡು ಬರಲು ಸಿದ್ಧವಾಯಿತು. ಫ್ರಾನ್ಸ ದೇಶದಿಂದ ಎರವಲು ಪಡೆದ (ರೋಮಾನ್ಸ್) ಕಲ್ಪಿತ ಕಥೆಗಳು ಇಂಗ್ಲೀಷ್ ಸಾಹಿತ್ಯದಲ್ಲಿಯೂ ರಚಿಸಲ್ಪಟ್ಟು ಜನಪ್ರಿಯವಾದವು; ಅವುಗಳಲ್ಲಿ ಕೆಲವು ವೀರ ಗಾಥಾಗಳು ಹಾಗೂ ಇನ್ನು ಕೆಲವು ರಾಷ್ಟ್ರೀಯತೆಯ ಭಾವನೆಯನ್ನು ಬಿಂಬಿಸುವಂಥವುಗಳಾಗಿವೆ. ಆರ್ಥರ ರಾಜಸಿಗೆ ಸಂಬಂಧಿಸಿದ ಕಲ್ಪಿತ ಕಥೆಗಳು ಬಹು ರಮ್ಯವಾಗಿವೆ, ಸ್ವಲ್ಪ ಮಟ್ಟಿಗೆ ಹಾಸ್ಯ ಹಾಗೂ ವಿಡಂಬನೆಗಳಿಂದ ಕೂಡಿವೆ. ಇದೇ ಕಾಲಕ್ಕೆ ಸೇರಿದ "ದಿ ಔಲ ಆ್ಯಂಡ್ ದಿ ನೈಟಿಂಗೇಲ್" ಪದ್ಯಕಾವ್ಯ ರಸಿಕೋಕ್ತಿಗಳಿಗೆ ಹೆಸರಾಗಿದೆ. ಹೀಗೆ ಅನ್ಯೋಕ್ತಿ ಹಾಗೂ ರೂಪಕಗಳ ರೂಪದಲ್ಲಿ ಇಂಗ್ಲೀಷ್ ಹಾಸ್ಯ ಸಾಹಿತ್ಯ ತನ್ನ ವಿಕಾಸವನ್ನು ಹೊಂದಿತು. ಮಧ್ಯಯುಗದ ನಾಟಕ ಪ್ರಭೇದಗಳಾದ ಪವಾಡ ನಾಟಕ ಹಾಗೂ ನೀತಿಬೋಧಕ ನಾಟಕಗಳಲ್ಲಿ ಪ್ರಥಮವಾಗಿ ನಕಲಿ ಪಾತ್ರ ಅಥವಾ ಹಾಸ್ಯ ಪಾತ್ರಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಇದು ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಮಹತ್ವದ ಬೆಳವಣಿಗೆ.

ಛಾಸರನ ಕಾಲದಲ್ಲಿ ಇಂಗ್ಲೆಂಡ ಒಂದು ದೇಶವಾಗಿ ಉದಾತ್ತ ಧ್ಯೇಯ ಹಾಗೂ ರಾಷ್ಟ್ರೀಯತೆಯ ಪ್ರತ್ಯೇಕ ಜನಾಂಗವಾಗಿ ರೂಪುಗೊಂಡಿತು. ಇಂಗ್ಲೀಷ್ ಭಾಷೆ ಕೂಡ ತನ್ನದೇ ಆದ ವೈಶಿಷ್ಟ್ಯಪೂರ್ಣ ಬೆಳವಣಿಗೆ ಹೊಂದಿತು. ಶಿಕ್ಷಣ ಪ್ರಸಾರ ಹೆಚ್ಚಿತು. ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳು ಸಾಹಿತ್ಯದ ಮೇಲೆ ಅಗಾಧ ಪರಿಣಾಮ ಗಳನ್ನುಂಟು ಮಾಡಿದವು. ಭೌಗೋಲಿಕ ಸಂಶೋಧನೆ, ಸಾಹಸೀ ಸಾಗರ ಪರ್ಯಟನಗಳು ಜನರ ವಿಚಾರಧಾರೆಯನ್ನು ಬದಲಿಸಿ ದವು. ಆದ್ದರಿಂದ ಛಾಸರನ ಕಾಲವನ್ನು ಸಂಧಿಕಾಲವೆಂದು ಕರೆಯಬಹುದು. ಹಳೆಯ ಸಂಪ್ರದಾಯಗಳ ವಿರುದ್ಧ ಪ್ರತಿ ಕ್ರಿಯೆ ಹಾಗೂ ನೂತನ ವಿಚಾರಧಾರೆಯನ್ನು ಈ ಯುಗದ ಸಾಹಿತ್ಯದಲ್ಲಿ ಕಾಣಬಹುದು. ನವೋದಯ ಯುಗದ ಸಂಸ್ಕೃತಿ ಹಾಗೂ ಭಾವನೆಗಳ ಛಾಯೆಯನ್ನು ಛಾಸರನ ಯುಗದಲ್ಲೇ ನೋಡುತ್ತೇವೆ. ಈ ಯುಗದಲ್ಲಿ ವಿಕಾಸ ಹೊಂದಿದ ಹಾಸ್ಯ ಸಾಹಿತ್ಯ ಇಂಗ್ಲೆಂಡಿನ ರಾಷ್ಟ್ರೀಯತೆಯ ದ್ಯೋತಕವಾಗಿದೆ; ಆ ನಾಡಿನ ಸಂಸ್ಕೃತಿ ಹಾಗೂ ಜನರ ಭಾವನೆಗಳ ಪ್ರತೀಕವಾಗಿದೆ. ಮಧ್ಯಯುಗದಲ್ಲಿಯ "ಹಾಸ್ಯ ಸಿದ್ಧಾಂತವು" ಅನಂತರದ ಶತಕಗಳ ಸಿದ್ಧಾಂತಗಳಿಗಿಂತಲೂ ಭಿನ್ನವಾಗಿದೆ ಹಾಗೂ ವಿಚಿತ್ರವಾಗಿದೆ. ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ "ಇಂಗ್ಲೀಷ್ ಹಾಸ್ಯ ಸಿದ್ಧಾಂತ"ದ ವಿಷಯವಾಗಿ ಮೊಟ್ಟಮೊದಲು ಕೆಲವು ವಿಚಾರಗಳನ್ನು ಆಗಿನ ಕಾಲದ ವಿಮರ್ಶಕರು ಮಂಡಿಸಿದ್ದಾರೆ. ಮಂಡಿಸಲ್ಪಟ್ಟ ಈ ಸಿದ್ಧಾಂತವು ಹಾಸ್ಯದ ವಿಷಯವಾಗಿ ಪ್ರಥಮ ಪ್ರಮೇಯ ವಾಗಿದೆ.

ಮಧ್ಯಯುಗದ ಹಾಸ್ಯ ಸಿದ್ಧಾಂತವನ್ನು "ರಸಧಾತುತತ್ವ ಎಂದು ಕರೆಯಲಾಗಿದೆ. ಇದರನ್ವಯ ಶರೀರದಲ್ಲಿ ಮುಖ್ಯವಾಗಿ ನಾಲ್ಕು ರಸಧಾತುಗಳಿವೆ; ಅವು ಕ್ರಮವಾಗಿ ಹರಿತಪಿತ್ತ, ಕೃಷ್ಣ ಪಿತ್ತ, ರಕ್ತ, ಶ್ಲೇಷ್ಮ ಆಗಿರುತ್ತವೆ. ಈ "ರಸಧಾತು ಪ್ರಮೇಯದ" ಪ್ರಕಾರ ಶರೀರದ ರಸಧಾತುಗಳ ವಿಕಾರ ಸ್ಥಿತಿಯೇ ಎಲ್ಲ ರೋಗ ಗಳಿಗೂ ಮೂಲ ಕಾರಣವಾಗಿದೆ. ಈ ರಸಧಾತುಗಳೇ ಮನು ಷ್ಯನ ಮನಸ್ವಾಸ್ಥ್ಯವನ್ನು ಹಿಡಿತದಲ್ಲಿಡುತ್ತವೆ. ಅವನ ಸ್ವಭಾವ ಈ ರಸಗಳ ಏರುಪೇರುಗಳ ಮೇಲೆಯೇ ಅವಲಂಬಿತವಾಗಿದೆ. ಉದಾ: ವಿಷಣ್ಣತೆ, ಸಿಡುಕುತನ, ಅರಸಿಕತೆ ಹಾಗೂ ಮುಂಗೋಪಿತನದ ಸ್ವಭಾವಗಳು.

ಮಧ್ಯಯುಗದ ಪ್ರಾರಂಭದ ಸಾಹಿತ್ಯದಲ್ಲಿಯ ಹಾಸ್ಯ ಶೈಲಿಯು ನಯವಿಲ್ಲದ್ದಾಗಿದೆ. ಇಂಗ್ಲೆಂಡಿನ ಪ್ರಥಮ ಕವಿ ಛಾಸರನು ಇಂಗ್ಲೀಷ್ ಹಾಸ್ಯ ಸಾಹಿತ್ಯವನ್ನು ಪ್ರಥಮವಾಗಿ ಬೆಳೆಸಿ ಪೋಷಿಸಿದನು. ಅವನ ಕೃತಿಗಳಿಂದಲೇ ಇಂಗ್ಲೀಷ್ ಹಾಸ್ಯ ಮತ್ತು ವಿಡಂಬನೆಗಳು ತಮ್ಮ ರೋಮಾಂಚನಕಾರೀ ಪರ್ಯಟನ ವನ್ನು ಪ್ರಾರಂಭಿಸಿದವೆನ್ನಬಹುದು. ಈ ಯುಗಕ್ಕೆ ಸೇರಿದ ಕವಿ ಲ್ಯಾಂಗಲಂಡ್ ವಿಡಂಬನ ಶೈಲಿಯನ್ನು ಇಂಗ್ಲೀಷ್ ಸಾಹಿತ್ಯ ದಲ್ಲಿ ಹೆಚ್ಚು ಪ್ರಚಾರಗೊಳಿಸಿದನು. ಮಧ್ಯಯುಗದ ಮತ್ತೊಬ್ಬ ಕವಿ ಜಾನ್‌ಗೋವರ್ ಕೂಡ ವಿಡಂಬನ ಕಾವ್ಯವನ್ನು ಜನಪ್ರಿಯ ಗೊಳಿಸಿದನು.

ಮಧ್ಯಯುಗದಲ್ಲಿ "ಹಾಸ್ಯ" ಶಬ್ದಕ್ಕೆ ಕೆಲವು ಅರ್ಥ ಅಥವಾ ವ್ಯಾಖ್ಯೆಗಳನ್ನು ಕೊಡಲಾಗಿತ್ತು. ಅವುಗಳಲ್ಲಿ ಕೆಲವನ್ನು ಇಲ್ಲಿ

ಉಲ್ಲೇಖಿಸಬಹುದು. "ಪರಿಹಾಸ ಶೀಲತೆ" ಅಥವಾ "ವಿನೋದ ಪ್ರವೃತ್ತಿ"ಗಳು "ಹಾಸ್ಯಕ್ಕೆ" ಕೊಟ್ಟ ಪ್ರಥಮ ವ್ಯಾಖ್ಯೆಗಳು. ಎರಡನೆಯದಾಗಿ "ಹಾಸ್ಯ"ಕ್ಕೆ "ಮನೋಭಾವ" "ಪ್ರವೃತ್ತಿ" ಗಳೆಂಬ ಅರ್ಥವನ್ನು ಹೇಳಿಸಲಾಗುತ್ತಿತ್ತು. ಈ ವ್ಯಾಖ್ಯೆ ಅನಂತರದ ಬೆಳವಣಿಗೆ: ಇದನ್ನೇ ಮುಂದಿನ ಶತಕಗಳ ಲೇಖಕರು ತಮಗನುಕೂಲವಾಗುವಂತೆ "ರಸಧಾತು ಸಿದ್ಧಾಂತ"ಕ್ಕೆ ಪರಿವರ್ತಿಸಿದರು. ಕ್ರೈಸ್ತಮತವು ಇಂಗ್ಲೆಂಡಿನಲ್ಲಿ ಬೆಳೆದು ತನ್ನ ಪ್ರಭಾವವನ್ನು ಸಾಹಿತ್ಯದ ಮೇಲೆ ಸ್ಥಾಪಿಸಿದ್ದು ಈ ಕಾಲದಲ್ಲಿಯೇ.

i) **ಜಾಫ್ರಿ ಛಾಸರ**: ಈತ ಇಂಗ್ಲೆಂಡಿನ ಪ್ರಥಮ ಮಹಾಕವಿ. ಇಂಗ್ಲೀಷ್ ಹಾಸ್ಯ ಸಾಹಿತ್ಯಕ್ಕೆ ಗಟ್ಟಿಮುಟ್ಟಾದ ತಳಪಾಯವನ್ನು ಹಾಕಿದವ. ಅವನ ಸುಲಲಿತ, ಸ್ವಾಭಾವಿಕ, ಸ್ವಯಂಪ್ರೇರಣಾತ್ಮಕವಾದ ಹಾಗೂ ರಾಷ್ಟ್ರೀಯ ದೃಷ್ಟಿಕೋನವುಳ್ಳ ಹಾಸ್ಯ ಸಾಹಿತ್ಯ ಎಲ್ಲರ ಮನಸ್ಸನ್ನೂ ರಂಜಿಸುವಂಥದು. ತನ್ನ "ಕ್ಯಾಂಟರ್‌ಬರಿ ಕಥೆಗಳು" ಈ ಪದ್ಯ ಕಾವ್ಯದ ಮುಖಾಂತರ ಇಂಗ್ಲೀಷ್ ನಗೆ ಸಾಹಿತ್ಯಕ್ಕೆ ಹೊಸ ತಿರುವು ಕೊಟ್ಟಿದ್ದಾನೆ. ಇವನು ಆಂಗ್ಲ ಸಾಹಿತ್ಯದಲ್ಲಿಯೇ ಪ್ರಪ್ರಥಮ ನಗೆಗಾರ. ಇವನು ತನ್ನ ಕೃತಿಯಲ್ಲಿ ತನ್ನ ಕಾಲದ ವಿವಿಧೋದ್ಯೋಗಗಳ ಜನರ ವೇಷಭೂಷಣ, ನಡೆನುಡಿ ಹಾಗೂ ಹಾವಭಾವಗಳನ್ನು ಯಥಾವತ್ತಾಗಿ ಚಿತ್ರಿಸಿದ್ದಾನೆ. ಇವನು ಇಂಗ್ಲೀಷ್ ಹಾಸ್ಯ ಸಾಹಿತ್ಯಕ್ಕೆ ಒಂದು ಮಹತ್ವದ ಸ್ವರೂಪವನ್ನು ತಂದು ಕೊಟ್ಟಿದ್ದಾನೆ. ಇವನ ಕಾಲದಲ್ಲಿ ಸರ್ವತೋಮುಖ ಅಭಿವೃದ್ಧಿ ಹೊಂದಿದ ಇಟಲಿ, ಫ್ರಾನ್ಸ ದೇಶಗಳ ಸಂಸ್ಕೃತಿ ಹಾಗೂ ಹಾಸ್ಯ ಸಾಹಿತ್ಯಗಳು

ಇಂಗ್ಲೆಂಡ ಜನರ ಸಂಸ್ಕೃತಿ ಹಾಗೂ ಹಾಸ್ಯ ಸಾಹಿತ್ಯಗಳ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿದವು. ಅವುಗಳ ಪ್ರಭಾವ ವನ್ನು ಈತನ ಕಾವ್ಯದಲ್ಲಿ ಸ್ವಲ್ಪಮಟ್ಟಿಗೆ ಕಾಣಬಹುದು. ಆದರೆ ಬಹುಮಟ್ಟಿಗೆ ಅವನ ಹಾಸ್ಯ ಶೈಲಿಯು ಸಹಜತೆ ಹಾಗೂ ಲಾಲಿತ್ಯ ಗಳಿಂದೊಡಗೂಡಿದೆ. ಅವನ ಹಾಸ್ಯ ಯಾರ ಮನವನ್ನೂ ನೋಯಿಸುವುದಿಲ್ಲ. ಜೀವನದ ವಾಸ್ತವಿಕತೆಯ ಪ್ರತಿಬಿಂಬವೇ ಅವನ ಕಾವ್ಯ. "ಕ್ಯಾಂಟರ್‌ಬರಿ ಕಥೆಗಳಲ್ಲಿ" ಚಿತ್ರಿತವಾದ ಪಾತ್ರ ನಿರೂಪಣೆಯಲ್ಲಿ ಅವನ ಹೃದಯ ವೈಶಾಲ್ಯತೆ, ಸಹಜ ವಿನೋದ ಪ್ರವೃತ್ತಿಗಳು ಪ್ರಕಟವಾಗಿವೆ. ಈ ನೈಜ ಹಾಗೂ ತಿಳಿಹಾಸ್ಯ ದಿಂದಲೇ ಈ ಕೃತಿಯ ಪಾತ್ರಗಳು ಜೀವಕಳೆಯಿಂದ ತುಂಬಿವೆ. ಛಾಸರ ತನ್ನ ಕಾಲದ ಅತೀ ಪ್ರಭಾವಿಯಾದ ಫ್ರೆಂಚ್ ಸಾಹಿತ್ಯದ ಒರಟು ಹಾಸ್ಯ ಶೈಲಿಯನ್ನು ಅನುಕರಣೆ ಮಾಡಲಿಲ್ಲ. ಅವನ ಹಾಸ್ಯ ಶೈಲಿ ಶೇಕ್ಸಪೀಯರನ ಹಾಸ್ಯ ಶೈಲಿಯನ್ನು ಹೋಲುತ್ತದೆ. ಜನರ ನಿತ್ಯ ವ್ಯವಹಾರಗಳಲ್ಲಿ ಅಸಂಬದ್ಧತೆಯು ಹೊರಹೊಮ್ಮು ತ್ತದೆಯೆಂಬುದು ಛಾಸರನ ಅಭಿಪ್ರಾಯ. ಈ ಸ್ವಾಭಾವಿಕವಾದ ಅಸಂಬದ್ಧತೆಯನ್ನು ಛಾಸರನು ಕೃತಿಯಲ್ಲಿ ಎತ್ತಿ ತೋರಿಸಿದ್ದಾನೆ. ಛಾಸರ ಇಂಗ್ಲೀಷ್ ಸಾಹಿತ್ಯದಲ್ಲಿಯೇ ಮೊದಲ ನಿಜ ನಗೆ ಬರಹ ಗಾರ. ಹಾಸ್ಯವು ಅವನ ಕಲೆಯ ಹಾಗೂ ಬುದ್ಧಿಶಕ್ತಿಯ ನಿಜ ವಾದ ಸತ್ವವಾಗಿತ್ತು. ವಿಮರ್ಶಕ ಮೇಸ್‌ಫೀಲ್ಡ್‌ನ ಪ್ರಕಾರ ಛಾಸರನು "A great Renaissance gentleman making the middle ages" ಕಾಲ ಮತ್ತು ಸಂಪ್ರದಾಯಗಳ ಆತಂಕ ಗಳನ್ನು ಮೀರಿ ಛಾಸರನ ವಿಶಾಲ ಹೃದಯದ ಹಾಗೂ ನಗು ಮುಖದ ಹಾಸ್ಯ ಶೈಲಿಯು ವಿಜೃಂಭಿಸಿದೆ. ಅವನ ಹಾಸ್ಯ ಬಡವ ಬಲ್ಲಿದರೆಲ್ಲರ ಹೃದಯವನ್ನು ಸೂರೆಗೊಳ್ಳುತ್ತದೆ.

ಇಂದಿಗೂ ಕೂಡ ಅದು ನಮಗೆ ಟಾನಿಕ್ ಇದ್ದ ಹಾಗೆ. ಇಂಗ್ಲೆಂಡಿನ ರಾಷ್ಟ್ರೀಯತೆಯನ್ನು ಛಾಸರನ ಹಾಸ್ಯ ಪ್ರತಿಬಿಂಬಿಸುತ್ತದೆ. ಫ್ರೆಂಚ್ ಹಾಸ್ಯ ಸಾಹಿತ್ಯದಲ್ಲಿಯ ಚತುರೋಕ್ತಿಯನ್ನು ಇವನ ಹಾಸ್ಯ ಸಾಹಿತ್ಯದಲ್ಲಿ ಕಾಣಲಾರೆವು. ಛಾಸರನು ಬರೆದ "ದಿ ನನ್ಸ್ ಪ್ರೀಸ್ಟ್ಸ್ ಟೇಲ್" ಪರಿಹಾಸದ ಉದಾತ್ತ ಶೈಲಿಯ ಪದ್ಯಕೃತಿ. ಇದರಲ್ಲಿ ನಿರೂಪಿಸಲ್ಪಟ್ಟ ಪದ್ಯರೂಪಿ ಕಥೆ ಬಹಳ ವಿನೋದಮಯವಾಗಿದೆ. ಈ ವಿನೋದದ ಮುಖಾಂತರವೇ ನೀತಿಪರತೆಯನ್ನು ತನ್ನ ಕೃತಿಯಲ್ಲಿ ವಿಶ್ಲೇಷಿಸಿದ್ದಾನೆ.

ಸಹಿಷ್ಣುತೆ, ಅನುಕಂಪ, ನಾವೀನ್ಯತೆಯಿಂದೊಡಗೂಡಿದ ಎಲ್ಲ ಕತೆಗಳು ಛಾಸರನ ಹಾಸ್ಯ ಶೈಲಿಯ ವೈಶಿಷ್ಟ್ಯಗಳು. ಇಟಲಿ ದೇಶದ ಸಾಹಿತಿ ಬೊಕಾಸಿಯೋ ಛಾಸರನ ಸಮಕಾಲೀನ ಹಾಸ್ಯಗಾರ. ಅವನ ಒರಟಾದ ಹಾಸ್ಯ ಶೈಲಿಯ ಪ್ರಭಾವ ಛಾಸರನ ಮೇಲೆ ಏನೂ ಬದಲಾವಣೆಯನ್ನುಂಟು ಮಾಡಿಲ್ಲ. ಮಾನವನ ಗುಣದೋಷಗಳನ್ನು ಹಾಗೂ ತನ್ನ ಕಾಲದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಸಮಸ್ಯೆಗಳ ವಿಕಾರವಾದ ನ್ಯೂನತೆಗಳನ್ನು ತನ್ನ ಕ್ಯಾಂಟರ್‌ಬರಿ ಕಥೆಗಳಲ್ಲಿ ಸೌಮ್ಯವಾಗಿ ಟೀಕಿಸಿದ್ದಾನೆ, ವಿನೋದಕರವಾಗಿ ನಿರೂಪಿಸಿದ್ದಾನೆ. ಅವನ ಹಾಸ್ಯ ಸಾಹಿತ್ಯ ಹಾಸ್ಯದ ವಿವಿಧ ವರ್ಣಗಳ ಲಾಸ್ಯಗಳನ್ನು ತೋರಿಸುವ ಚಿತ್ರದರ್ಶನವಿದ್ದ ಹಾಗೆಯೇ ಸರಿ. ಪ್ರಚಂಡ ಮೊರೆತದ ಭೋರ್ಗರೆಯುವ ಹಾಸ್ಯ, ವಿಕಟ ಚಿತ್ರಗಳ ಸರಮಾಲೆ, ಸೌಮ್ಯವಾದ ವಿಡಂಬನೆ ಹಾಗೂ ಮೃದುವಾಗಿ ಹೊರಸೂಸುವ ನಗು ಇವುಗಳು ಛಾಸರನ ಹಾಸ್ಯ ಸಾಹಿತ್ಯದ ವಿವಿಧ ಮುಖಗಳು.

ಛಾಸರನ ಕ್ಯಾಂಟರ್‌ಬರಿ ಕಥೆಗಳಲ್ಲಿ ಚಿತ್ರಿಸಲ್ಪಟ್ಟ ಯಾತ್ರಿಕರ ಪಾತ್ರಗಳು ವಿನೋದಪೂರ್ಣವಾಗಿವೆ. ಅಲ್ಲಿ ಬರುವ ಕ್ರೈಸ್ತ ಮತದ ಸನ್ಯಾಸಿನಿಯನ್ನು (Prioress) ಛಾಸರ ಲೇವಡಿ ಮಾಡಿದ್ದಾನೆ. ಅವಳು ಬಹಳ ಸೂಕ್ಷ್ಮ ಮನಸ್ಸಿನವಳು. ಇಲಿಯು ಬಲೆಯಲ್ಲಿ ಹಿಡಿಯಲ್ಪಟ್ಟರೆ ಅಥವಾ ಯಾರಾದರೂ ಅವಳ ನಾಯಿ ಮರಿಗಳನ್ನು ಬಡಿದರೆ ಅವಳ ಸೂಕ್ಷ್ಮ ಮನಸ್ಸು ಈ ಆಘಾತಗಳನ್ನು ಸಹಿಸಲಾರದೆ ಅವಳು ಅತ್ತು ಮೂರ್ಛೆ ಹೋಗುವಂತೆ ಮಾಡುತ್ತಿತ್ತು. ಸನ್ಯಾಸಿನಿಯಾದರೂ ಕೂಡ ಪ್ರೇಮಪಾಶದಲ್ಲಿ ಸಿಲುಕಿಹಾಕಿಕೊಂಡಿದ್ದಳು. ಅವಳ ರೂಪ ಹಾಗೂ ಹಾವಭಾವಗಳು ರಸಮಯ. ಅವನ ಕಥೆಗಳಲ್ಲಿ ವರ್ಣಿಸಲ್ಪಟ್ಟ "ವೈಫ್ ಆಫ್ ಬಾಥ್"ಳ ವರ್ಣರಂಜಿತ ಚಿತ್ರ ಹಾಸ್ಯ ಹಾಗೂ ಅರ್ಥಂಬರ್ಥ ತಮಾಷೆಗಳಿಂದ ಕೂಡಿದೆ. ಅವಳು ಐದು ಜನ ಗಂಡಸರನ್ನು ತನ್ನ ಹರೆಯದಲ್ಲಿ ಮದುವೆ ಮಾಡಿಕೊಂಡಂಥವಳು. ಅವಳ ಹಲ್ಲುಗಳು ಮುಂದೆ ಚಾಚಿದ್ದವು. ಪ್ರೇಮದ ವಿಷಯದಲ್ಲಿ ಅವಳು ನಿಷ್ಣಾತೆ. ತರುಣರ ಮಧ್ಯದಲ್ಲೇ ಅವಳ ವಿಹಾರ.

ಇಂಥ ವ್ಯಕ್ತಿಚಿತ್ರಗಳಲ್ಲಿ "ರೋಮಾನ್ಸ್" ಹಾಗೂ "ರೊಮ್ಯಾಂಟಿಕ್" ಶೈಲಿಗಳ ಪ್ರಭಾವವನ್ನು ಕಾಣಬಹುದು. ಚರ್ಚಿನ ಪಾದ್ರಿ ಧರ್ಮಾಧಿಕಾರಿ ಹಾಗೂ ಉಳಿದ ಕೆಳ ಮಟ್ಟದ ಅಧಿಕಾರಿಗಳನ್ನು ವರ್ಣಿಸುವಾಗ ಛಾಸರ ವಿಡಂಬನೆಯನ್ನು ಉಪಯೋಗಿಸಿದ್ದಾನೆ. ಅವನು ತನ್ನ ಕಥೆಗಳಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಧಾನ್ಯ ಬೀಸುವ ಕಾರಖಾನೆಯ ಪಾತ್ರಗಳನ್ನು ವರ್ಣಿಸುವಾಗ ಮೋಜು ಹಾಗೂ ತಮಾಷೆಗಳ

ಒರಟಾದ ಹಾಸ್ಯವನ್ನು ಬಳಸಿದ್ದಾನೆ. ಧಾರ್ಮಿಕ ಅಧಃಪತನ, ಚರ್ಚುಗಳಲ್ಲಿಯ ಅಧರ್ಮೀಯತೆ ಹಾಗೂ ಪಾದ್ರಿಗಳ ವಿಲಾಸೀ ಜೀವನವನ್ನು ಅವನು ಚೆನ್ನಾಗಿ ವಿಡಂಬನೆ ಗೆಯ್ದಿದ್ದಾನೆ.

ii) **ಲ್ಯಾಂಗ್‌ಲಂಡ:** ಈತ ಛಾಸರನ ಸಮಕಾಲೀನ ಕವಿ ಹಾಗೂ ವಿಡಂಬನಕಾರ. ಈತನ ಪದ್ಯಕಾವ್ಯ "ಪಾಯರ್ಸ್ ದಿ ಪ್ಲೋಮ್ಯಾನ್" ವಿಡಂಬನ ಕೃತಿ. ತನ್ನ ಕಾಲದ ಧೂರ್ತ, ಠಕ್ಕ ಹಾಗೂ ವಿಲಾಸೀ ಜೀವನದ ಕ್ರೈಸ್ತ ಪಾದ್ರಿಗಳನ್ನು ಕಟುವಾಗಿ ಟೀಕಿಸಿದ್ದಾನೆ. ಈತನ ವಿಡಂಬನ ಶೈಲಿ ಹರಿತವಾದ ಕೂರಂಬು ಗಳಿದ್ದಂತೆ, ಬಹಳ ಖಾರವಾದಂಥದು. ತನ್ನ ಕಾಲದ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಅಧಃಪತನವನ್ನು ಬಯಲಿಗೆಳೆದ ಲ್ಯಾಂಗ್‌ಲಂಡ ಬರಿ ನಗೆಗಾರನಲ್ಲ, ಆದರೆ ಸಮಾಜದ ವಿಮರ್ಶಕ. ಆತನ ಕೃತಿ ಉಪದೇಶಪರವಾಗಿದೆ ಹಾಗೂ ಅವನ ಕ್ರಾಂತಿಕಾರೀ ಭಾವನೆಗಳನ್ನು ಪ್ರತಿಪಾದಿಸುತ್ತದೆ. ರೋಮನ್ ಕಟು ವಿಡಂಬ ನಕಾರ ಜುವೆನಾಲ್‌ನ ಶೈಲಿಯನ್ನು ಇವನು ಅನುಕರಿಸಿದ್ದಾನೆ. ಇವನೊಬ್ಬ ಸುಧಾರಣಾವಾದಿ ಕವಿ.

# ೪. ನವ್ರೋದಯ ಕಾಲದ ಇಂಗ್ಲೀಷ ಹಾಸ್ಯ ಮತ್ತು ವಿಡಂಬನ ಸಾಹಿತ್ಯ

ಹದಿನಾಲ್ಕರಿಂದ ಹದಿನಾರನೆಯ ಶತಕದ ಅವಧಿಯಲ್ಲಿ ಇಂಗ್ಲೆಂಡ ಹಾಗೂ ಯುರೋಪ ದೇಶಗಳಲ್ಲಿ ಹಿಂದಿನ ರೋಮನ್ ಮತ್ತು ಗ್ರೀಕ್ ಪ್ರೌಢ ಆದರ್ಶಗಳ ಪ್ರಭಾವದಿಂದ ಸಾಹಿತ್ಯ ಮತ್ತು ಕಲೆಗಳಲ್ಲಿ ಬದಲಾವಣೆ ಹಾಗೂ ಅಭಿವೃದ್ಧಿಗಳು ಕಂಡು ಬಂದವು. ಸಾಹಿತಿ. ಹಾಗೂ ಕಲೆಗಾರರಲ್ಲಿ ಮಾನವೀಯ ದೃಷ್ಟಿ ಕೋನ ಉಗಮಹೊಂದಿತು. ಜಲ ಪರ್ಯಟನ, ಭೂ ಸಂಶೋಧನೆ ಗಳು, ಜ್ಞಾನಪ್ರಸಾರ ಹಾಗೂ ಮುದ್ರಣ ಯಂತ್ರದ ಶೋಧನೆ ಗಳು ಹೊಸ ವಿಚಾರದ ಅಲೆಗಳನ್ನುಂಟು ಮಾಡಿದವು.

ಇಂಗ್ಲೀಷ್ ಭಾಷೆ ಹಾಗೂ ಸಾಹಿತ್ಯಗಳು ಅಗಾಧ ರೀತಿಯಲ್ಲಿ ಅಭಿವೃದ್ಧಿ ಹೊಂದಿದವು. ಹದಿನೈದು ಹಾಗೂ ಹದಿನಾರನೆಯ ಶತಕಗಳಲ್ಲಾದ ಅನೇಕ ಸಾಮಾಜಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳು ಸಾಹಿತ್ಯದ ಮೇಲೆ ಪರಿಣಾಮವನ್ನುಂಟು ಮಾಡಿ ದವು. ಇಂಗ್ಲೆಂಡಿನ ಜನರಲ್ಲಿ ರಾಷ್ಟ್ರೀಯತೆ ಹಾಗೂ ಏಕತೆಗಳು ಒಡಮೂಡಿದ ಕಾಲವದು. ರಾಷ್ಟ್ರೀಯ ದೃಷ್ಟಿಕೋನದಿಂದ ಸ್ಫೂರ್ತಿ ಪಡೆದು ಶೇಕ್ಸಪೀಯರ್ ಹಾಗೂ ಸ್ಪೆನ್ಸರ್‌ಸಂಥ ನಾಟಕ ಕಾರರು ಹಾಗೂ ಕವಿಗಳು ಕೃತಿಗಳನ್ನು ರಚಿಸಿದರು. ಇಂಗ್ಲೆಂಡಿನ ಸಮಾಜದಲ್ಲಿ ಮಧ್ಯಮ ವರ್ಗದ ಉಗಮವಾಗಿ ಆ ವರ್ಗಕ್ಕೆ

ಸೇರಿದ ಕಲಾಕಾರರು ಹಾಗೂ ಸಾಹಿತಿಗಳು ಸಾಹಿತ್ಯಕ್ಷೇತ್ರವನ್ನು ಶ್ರೀಮಂತಗೊಳಿಸಿದರು.

ಹದಿನೈದನೆಯ ಶತಕದ ಇಂಗ್ಲೆಂಡಿನಲ್ಲಿ ಹೇಳಿಕೊಳ್ಳುವಂಥ ಸಾಹಿತಿಗಳೇನೂ ಇಲ್ಲ. ಛಾಸರನ ಜಾಡನ್ನೇ ಹಿಡಿದು ಕೆಲವು ಸ್ಕಾಟಿಶ್ ಹಾಗೂ ಇಂಗ್ಲೆಂಡಿನ ಕವಿಗಳು ಕೃತಿ ರಚಿಸಿದರು. ಇನ್ನು ಕೆಲವರು ಹಾಗೆ ಮಾಡಲು ಹೋಗಿ ಮುಗ್ಗರಿಸಿದರು. ಪದ್ಯ ಸಾಹಿತ್ಯಕ್ಕಿಂತಲೂ ನಾಟಕ ಸಾಹಿತ್ಯ ಹೆಚ್ಚಿನ ಪ್ರೋತ್ಸಾಹ ಪಡೆಯಿತು. ಪವಾಡ ನಾಟಕ ಹಾಗೂ ನೀತಿಭೋಧಕ ನಾಟಕಗಳೇ ನಕಲಿ ಪಾತ್ರಗಳಿಂದ ಹೆಚ್ಚು ಆಕರ್ಷಕವಾಗಿ ಮುಂದುವರೆದವು. ಪದ್ಯ ಸಾಹಿತ್ಯದಲ್ಲಿ ವಿಡಂಬನೆಯೇ ಹೆಚ್ಚಾಗಿ ಕಂಡುಬರುವದು. ಜಾನ್ ಶೆಲ್ಟನ್ ಇಂಗ್ಲೆಂಡಿನ ಕವಿ. ಈತ ಕಟು ವಿಡಂಬನಕಾರ. ಹದಿನೈದನೆಯ ಶತಮಾನದಲ್ಲಿಯ ಧಾರ್ಮಿಕ ಕ್ಷೇತ್ರದಲ್ಲಿಯ ವಿಪರ್ಯಾಸಗಳನ್ನು ಹಾಗೂ ಧರ್ಮಗುರುಗಳ ಅಧರ್ಮ ಮಾರ್ಗಗಳನ್ನು ಈತನು ಟೀಕಿಸಿದ್ದಾನೆ. ಸ್ಕಾಟಲಂಡಿನ ಕವಿ ಬಾರ್ಕಲೇ ತನ್ನ ಕವನಗಳಲ್ಲಿ ವಿಡಂಬನೆ ತುಂಬಿದನು. ಸ್ಕಾಟ್‌ಲಂಡಿನ ಇನ್ನೊಬ್ಬ ಕವಿ, ಡನಬಾರ ಕೂಡ ಲಘು ವಿಡಂಬನಕಾರ. ಈತ ಉಲ್ಲಾಸಕರವಾದ ವ್ಯಂಗ್ಯವನ್ನು ತನ್ನ ಕಾವ್ಯದಲ್ಲಿ ಉಪಯೋಗಿಸಿ ಸಮಕಾಲೀನ ನ್ಯಾಯ ವ್ಯವಸ್ಥೆ ಹಾಗೂ ನ್ಯಾಯಾಲಯಗಳ ಲೋಪದೋಷಗಳನ್ನು ಹೀಗಳೆದಿದ್ದಾನೆ. ವಿನೋದಪೂರ್ಣವಾದ ಲಘುಕವನಗಳೂ, ಆಶುಕವಿತೆಗಳೂ ಈ ಶತಕದಲ್ಲಿ ರಚಿಸಲ್ಪಟ್ಟು ಬೆಳಕಿಗೆ ಬಂದವು. ಒಕ್ಲೀವ್ ಇದೇ ಶತಮಾನಕ್ಕೆ ಸೇರಿದ ವಿಡಂಬನಕಾರ. ಸಾಮಾಜಿಕ ಅನ್ಯಾಯಗಳ

ವಿರುದ್ಧ ವಿಡಂಬನೆಯ ಕಿಡಿ ಹಾರಿಸಿದ್ದಾನೆ. ಚರ್ಚಿನ ಪಾದ್ರಿಗಳ ಅಥವಾ ತರದ ವಿಲಾಸೀ ಜೀವನದ ವಿರುದ್ಧ ಇವನು ಸಿಡಿದೆದ್ದು ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾನೆ. ಡೇವಿಡ್ ಲಿಂಡಸ್ ಸ್ಕಾಟಲಂಡಿನ ಕವಿ ಹಾಗೂ ಹಾಸ್ಯಗಾರ. ಸ್ಕಾಟಲಂಡಿನ ಕವಿಗಳು ಛಾಸರನ ಜಾಡನ್ನೇ ಹಿಡಿದು ಅವನ ಹಾಸ್ಯ ಹಾಗೂ ವಿನೋದ ಮಯವಾದ ಸಾಹಿತ್ಯ ಸಂಪ್ರದಾಯಗಳನ್ನು ಬೆಳೆಸಿದರು.

ಶೇಕ್ಸ್‌ಪೀಯರನ ಪರಿಪೂರ್ಣವಾದ ನಾಟಕಗಳ ಉದಯ ಕ್ಕಿಂತ ಮೊದಲು ಹದಿನೈದನೆಯ ಶತಕದ ಕೊನೆಯ ಭಾಗದಲ್ಲಿ ವಿನೋದದೃಶ್ಯ ಅಥವಾ ವಿಡಂಬನ ದೃಶ್ಯಗಳು ರಚಿಸಲ್ಪಟ್ಟವು. ಇವು ಪವಾಡ ನಾಟಕಗಳ ಅಂಕಗಳ ನಡುವೆ ಇರುವ ವಿರಾಮದ ವೇಳೆಯಲ್ಲಿ ಸೇರಿಸಲ್ಪಟ್ಟವು. ಇವುಗಳಲ್ಲಿ ತಮಾಷೆಯಿಂದೊಡ ಗೂಡಿದ ಹಾಸ್ಯ ಶೈಲಿಯನ್ನು ಕಾಣಬಹುದು. ಜಾನ್ ಹೇವುಡ್ ಇಂತಹ ವಿನೋದ ಪ್ರಕರಣಗಳನ್ನು ರಚಿಸಿದ್ದಾನೆ. ಇಂಥ ನಾಟಕಗಳ ಉಗಮ ಇಂಗ್ಲೀಷ್ ಸಾಹಿತ್ಯದಲ್ಲಿ ಒಂದು ಹೊಸ ಹೆಜ್ಜೆ ಹಾಗೂ ಮಹತ್ವದ ಮೈಲಿಗಲ್ಲು. ಶೇಕ್ಸಪೀಯರನ ಕಾಲದ ವಿನೋದ ನಾಟಕ ಸಾಹಿತ್ಯ ಇಂಥ ವಿನೋದ ದೃಶ್ಯ ಗಳಿಂದಲೇ ಸ್ಫೂರ್ತಿ ಪಡೆದು ತನ್ನ ವಿಕಾಸವನ್ನು ಹೊಂದಿತೆಂದು ಹೇಳಬಹುದು. ಈ ಶತಕದ ಕೊನೆಯ ಭಾಗದಲ್ಲಿ ಪರಿಪೂರ್ಣ ವಾದ ವಿನೋದ ನಾಟಕಗಳು ರಚಿಸಲ್ಪಟ್ಟವು. ಮೊದಲನೆಯ ದಾಗಿ ನಿಕೋಲಸ್ ಉಡಾಲ್‌ನ “ರಾಲ್ಫ ರಾಯಸ್ಟರ್ ಡಾಯ ಸ್ಟರ್” ಇಟಾಲಿಯನ್ ವಿನೋದಗಾರ ಟೇರೆನ್ಸನ ಹಾಸ್ಯ ಶೈಲಿ ಯನ್ನನುಕರಿಸಿ ಉಡಾಲ್ ಈ ವಿನೋದ ನಾಟಕವನ್ನು ರಚಿಸಿ

ದ್ದಾನೆ. ಇಲ್ಲಿ ಕಂಡು ಬರುವ ಹಾಸ್ಯ ಒರಟಾದದ್ದು. ಇದೇ ಸಮಯದಲ್ಲಿ ರಚಿಸಲ್ಪಟ್ಟ ಇನ್ನೊಂದು ವೈನೋದಿಕವೆಂದರೆ "ಗಾಮರ ಗರ್ಟನ್ನ ನೀಡಲ್". ಜೀವನದ ವಾಸ್ತವಿಕತೆಗೆ ಇದು ಸಂಬಂಧಿಸಿದೆ. ವಿಷಯ ನಿರೂಪಣೆ ಹಾಗೂ ದೃಶ್ಯಗಳು ವಿನೋದಪೂರ್ಣವಾಗಿ, ರಚನೆ ಹರ್ಷಮಯವಾಗಿದೆ. ಆದರೆ ಹಾಸ್ಯ ನಾಜೂಕಿಲ್ಲದ್ದು.

ಹದಿನೈದನೆಯ ಶತಮಾನದಲ್ಲಿ ನವೋದಯ ಕಾಲದ ಹಾಸ್ಯ ಹಾಗೂ ವಿಡಂಬನ ಸಾಹಿತ್ಯ ಪ್ರಕಾರಗಳಿಗೆ ಅಸ್ತಿವಾರವನ್ನು ಹಾಕಲಾಯಿತು. ಹದಿನೈದನೆಯ ಶತಕದ ಹಾಸ್ಯ ಹಾಗೂ ವಿಡಂಬನೆಯುಕ್ತ ನಾಟಕ ಹಾಗೂ ಪದ್ಯ ಸಾಹಿತ್ಯಗಳು ಬೀಜದ ರೂಪದಲ್ಲಿ ನೆಡಲ್ಪಟ್ಟು, ಹದಿನಾರನೆಯ ಶತಕದಲ್ಲಿ ಅವು ಮೊಳಕೆ ಯೊಡೆದು ಫಲಭರಿತ ವೃಕ್ಷಗಳಾಗಿ ಬೆಳೆದುವೆಂದು ಹೇಳಬಹುದು.

ಶೇಕ್ಸಪೀಯರನ ಯುಗವೆಂದರೆ ನವೋದಯ ಕಾಲ ಹಾಗೂ ಹದಿನಾರನೆಯ ಶತಕ ಇಂಗ್ಲೆಂಡಿನಲ್ಲಿ ರಾಷ್ಟ್ರಾಭಿಮಾನ ಉಕ್ಕಿ ಹರಿಯುತ್ತಿದ್ದ ಕಾಲ. ಇಂಗ್ಲೆಂಡಿನ ಜನರು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಮೇಲ್ಮೆಯನ್ನು ಈ ಶತಕದಲ್ಲಿ ಸಾಧಿಸಿದರು. ಮಧ್ಯಯುಗದ ಕತ್ತಲೆ ಕಳೆದು ನವೋದಯ ಯುಗದ ಬೆಳಕು ಪಸರಿಸಿದ ಶೇಕ್ಸಪೀಯರನ ಯುಗದಲ್ಲಿ ಸಾಹಿತ್ಯವೂ ವಿಪುಲವಾಗಿ ಅಭಿವೃದ್ಧಿಯನ್ನು ಹೊಂದಿತು. ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿಯೂ ಕೂಡ ಹೊಸ ವೈವಿಧ್ಯತೆಗಳು ಕಂಡು ಬಂದವು. ನವೋದಯದ ಯುಗದಲ್ಲಿ ಹೊಸ ವಿಚಾರ ಧಾರೆಗಳು ಪ್ರಸಾರ

ಗೊಂಡು ಜನಜೀವನದಲ್ಲಿ ಅನೇಕ ಬದಲಾವಣೆಗಳುಂಟಾದವು. ಇಟಲಿ, ಜರ್ಮನಿ, ಫ್ರಾನ್ಸ್ ದೇಶಗಳ ವಿಚಾರಗಳು ಹಾಗೂ ಸಾಹಿತ್ಯ ಪ್ರಕಾರಗಳು ಇಂಗ್ಲೆಂಡಿನ ಬರಹಗಾರರ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿದವು. ಶೇಕ್ಸಪೀಯರನ ಕಾಲದಲ್ಲಿ ನಾಟಕ ಸಾಹಿತ್ಯವೂ ಕೂಡ ಬಹಳೇ ಅಭಿವೃದ್ಧಿಹೊಂದಿತು. ಈ ಕಾಲದಲ್ಲುದಯವಾದ "ವಿಶ್ವವಿದ್ಯಾಲಯಗಳ ಜ್ಞಾನಿಗಳ ಸಂಘ" ಇಂಗ್ಲೀಷ್ ರಮ್ಯ ವಿನೋದ ನಾಟಕಗಳ ರಚನೆಗೆ ಪ್ರಾರಂಭಿಸಿತು. ಈ ಯುಗದ ಪದ್ಯ ಸಾಹಿತ್ಯದಲ್ಲಿ ಕೂಡ ವಿಪುಲವಾದ ಹಾಸ್ಯಶೈಲಿಯನ್ನು ಕಾಣಬಹುದು. ವಿಶ್ವವಿದ್ಯಾಲಯಗಳ ಜ್ಞಾನಿಗಳ ಕೂಟದ ಒಬ್ಬ ಸದಸ್ಯನಾದ ಲಿಲೀ ರಮ್ಯ ವಿನೋದ ನಾಟಕಗಳನ್ನು ರಚಿಸಿದ. ಇನ್ನೊಬ್ಬ ನಾಟಕಕಾರ ಪೀಲ್‌ನ ನಾಟಕಗಳು ವಿನೋದ ಹಾಗೂ ವಿಡಂಬನೆಗಳಿಂದ ರಮ್ಯವಾಗಿವೆ. ಗ್ರೀನ್‌ನ ನಾಟಕಗಳಲ್ಲಿ ರಮ್ಯವಾದ ಹರ್ಷ ಕಂಡುಬಂದರೂ ನೈಜತೆಯ ಅಭಾವ ಎದ್ದು ಕಾಣುತ್ತದೆ. ಇಲ್ಲಿ ಕಾಣುವ ಹಾಸ್ಯ ಅಪರಿಪಕ್ವ ಹಾಗೂ ಒರಟು. ಈ ಸಂಘದ ಇನ್ನೊಬ್ಬ ಬರಹಗಾರ ನಾಶ್‌ನ ಕೃತಿಗಳಲ್ಲಿ ವಿಡಂಬನೆಯನ್ನೇ ಹೆಚ್ಚಾಗಿ ಕಾಣುತ್ತೇವೆ.

ಶೇಕ್ಸಪೀಯರನ ಅನಂತರದ ವರ್ಷಗಳಲ್ಲಿ ಸಾಹಿತ್ಯಕ್ಷೇತ್ರದಲ್ಲಿ ನೈಜ ಹಾಸ್ಯ ಶೈಲಿಯ ಕೊರತೆ ಕಂಡುಬರುತ್ತದೆ. ಭಾವನೆಗಳನ್ನು ಉಲ್ಲಾಸಗೊಳಿಸುವ ಹಾಸ್ಯ ಈ ಕಾಲದ ಸಾಹಿತ್ಯದಲ್ಲಿ ಕಡಿಮೆ. ನೈಜ ಹಾಸ್ಯದ ಬದಲಿಗೆ ವಿಡಂಬನಾತ್ಮಕ ಹಾಸ್ಯ ಬೆನ್‌ಜಾನ್ಸನ್ ಹಾಗೂ ಮಿಡಲ್‌ಟನ್ ಇವರ ನಾಟಕಗಳಲ್ಲಿ

ಕಂಡು ಬರುತ್ತದೆ. ಜಾರ್ಜ ಚಾಪಮನ್, ಬ್ಲೂಮೌಂಟ, ಡೆಕರ್, ಥಾಮಸ್ ಹೇವುಡ್ ಮುಂತಾದವರು ಶೇಕ್ಸಪೀಯರನ ನಂತರದ ಯುಗದ ವಿಡಂಬನಕಾರರು ಹಾಗೂ ಹಾಸ್ಯಗಾರರು. ಚಾಪಮನ್ ಮನಮೋಹಕವಾದ ಹರ್ಷನಾಟಕಗಳನ್ನು ಬರೆದಿದ್ದಾನೆ. ಡೆಕರ್ ಹಾಗೂ ಬ್ಲೂಮೌಂಟರು ತಮ್ಮ ವಿನೋದ ನಾಟಕಗಳಲ್ಲಿ ವಿಡಂಬನೆ ಪ್ರಯೋಗಿಸಿ ಲಂಡನ್ನಿನ ಸಾಮಾನ್ಯ ಜನ ಅಜ್ಞಾನವನ್ನು ಕುರಿತು ಗೇಲಿ ಮಾಡಿದ್ದಾರೆ; ಆದರೆ ಜೊತೆಗೇ ಸಹಾನುಭೂತಿ ಹಾಗೂ ಮಾನವೀಯ ಅನುಕಂಪಗಳೂ ಇವೆ. ಇದೇ ಪಂಕ್ತಿಗೆ ಸೇರಿದ ಥಾಮಸ್ ಮಿಡಲ್‌ಟನ್ ಲಂಡನ್ನಿನ ಕೀಳುಮಟ್ಟದ ಜೀವನದ ಬಗೆಗೆ ವಿಡಂಬನಾತ್ಮಕ ಕಥೆಗಳನ್ನು ಬರೆದನು. ಆದರ ನಂತರ ತಮಾಷಾ ಮಾದರಿಯ ನಾಟಕಗಳನ್ನೂ ಕೂಡ ರಚಿಸಿದ್ದಾನೆ. ಬ್ಲೂಮೌಂಟ ಹಾಗೂ ಫ್ಲೇಚರ್ ಅನೇಕ ರಮ್ಯ ವೈನೋದಿಕೆಗಳನ್ನು ಹಾಸ್ಯ ಸಾಹಿತ್ಯಕ್ಕೆ ಉಡುಗೊರೆಯಾಗಿ ನೀಡಿದ್ದಾರೆ. ಈ ಸಾಹಿತ್ಯ ಯುಗಕ್ಕೆ ಸಂಬಂಧಿಸಿದ ಜಾನ್ ವೆಬಸ್ಟರ್ ಖ್ಯಾತ ವಿಡಂಬನಕಾರ. ಅವನ ದುರಂತ ನಾಟಕಗಳಲ್ಲಿ ವಿಡಂಬನೆ, ವ್ಯಂಗ್ಯ ಶೈಲಿಗಳು ಉಪಯೋಗಿಸಲ್ಪಟ್ಟಿವೆ. ಜೀವನದ ಅನೇಕ ಅಂಶಗಳನ್ನು ವೆಬಸ್ಟರ್ ಕಟುವಾಗಿ ಟೀಕಿಸಿದ್ದಾನೆ. ಇವನನ್ನು ಸ್ವಿಫ್ಟನಿಗೆ ಹೋಲಿಸಬಹುದು. ಶೇಕ್ಸಪೀಯರನ ನಂತರದ ಸಾಹಿತ್ಯದಲ್ಲಿ ವ್ಯಂಗ್ಯ ವಿಡಂಬನೆಗಳೇ ಹೆಚ್ಚಾಗಿ ಸೇರಿಕೊಂಡಿವೆ. ಸ್ಪೆನ್ಸರನ ಕವಿತೆಗಳಲ್ಲಿ ವಿಡಂಬನೆಯಿದೆ. ಜೊಸೆಫ್ ಹಾಲ್ ಕೂಡ ತನ್ನ ಪದ್ಯಗಳಲ್ಲಿ ವಿಡಂಬನೆಯನ್ನು ಉಪಯೋಗಿಸಿದ್ದಾನೆ. ಇದೇ ಕಾಲದಲ್ಲಿ

ಉದಯ ಹೊಂದಿದ ಆಧ್ಯಾತ್ಮಿಕ ಧಾಟಿಯ ಪದ್ಯಗಳಲ್ಲಿ ಚತುರೋಕ್ತಿ ಹಾಗೂ ವಿಡಂಬನಗಳು ಹಾಸುಹೊಕ್ಕಾಗಿವೆ. ಜಾನ್ ಡನ್‌ನ ಪದ್ಯಸಾಹಿತ್ಯ ಇದಕ್ಕೊಂದು ದೃಷ್ಟಾಂತ. ಬೆನ್ ಜಾನ್ಸನ್ ಈ ಕಾಲಕ್ಕೆ ಸೇರಿದ ವಿಡಂಬನ ನಾಟಕಕಾರ. ಜುವೆನಾಲ್ ಹಾಗೂ ಹೊರೇಸ್ ಇವರ ಧಾಟಿಯನ್ನೇ ಈ ಕಾಲದ ವಿಡಂಬನಕಾರರು ಅನುಸರಿಸಿದ್ದಾರೆ. ಇವರು ತಮ್ಮ ಸಮಕಾಲೀನ ಸಮಾಜದ ಲೋಪದೋಷಗಳನ್ನು ಹಾಗೂ ಅಸಂಬದ್ಧತೆಗಳನ್ನು ತಮ್ಮ ಗದ್ಯ ಹಾಗೂ ಪದ್ಯ ಸಾಹಿತ್ಯಗಳಲ್ಲಿ ವಿಡಂಬನೆಗೈದಿದ್ದಾರೆ. ಈ ಯುಗದಲ್ಲಿ ರಚಿಸಲ್ಪಟ್ಟ ರುದ್ರ ನಾಟಕಗಳಲ್ಲಿಯೂ ಕೂಡ ಹಾಸ್ಯ ಪಾತ್ರಧಾರಿಯಾದ ವಿದೂಷಕನು ಕಾಣಿಸಿಕೊಂಡಿದ್ದಾನೆ.

i) **ಬೆನ್ ಜಾನ್ಸನ್** : ಇವನು ಶೇಕ್ಸಪೀಯರನ ಸಮಕಾಲೀನ ನಾಟಕಕಾರರಲ್ಲಿ ಅತ್ಯಂತ ಪ್ರಸಿದ್ಧ. ಇಂಗ್ಲೀಷ್ ಸಾಹಿತ್ಯದಲ್ಲಿಯ ಹಾಸ್ಯ ಹಾಗೂ ವಿಡಂಬನೆಯ ವಿಕಾಸದ ವಿಷಯದಲ್ಲಿ ಬೆನ್ ಜಾನ್ಸನ್ ತನ್ನದೇ ಆದ ವಿಶಿಷ್ಟ ಕ್ರಮವನ್ನು ವ್ಯಕ್ತಪಡಿಸಿದ್ದಾನೆ. ತನ್ನ ಕಾಲದ ಸಮಾಜದ ವಿರೂಪಗಳ ವಿಡಂಬನೆಯೇ ಅವನ ಕೃತಿಗಳ ಮೂಲೋದ್ದೇಶ. ತನ್ನ ಪ್ರಥಮ ಕೃತಿಯಾದ "ಎವ್ಹರಿ ಮ್ಯಾನ್ ಇನ್ ಹೀಜ ಹ್ಯೂಮರ್"ದಲ್ಲಿ ತಾನು ಕಣ್ಣಾರೆ ಕಂಡು ಅನುಭವಿಸಿದ ಭಿಕ್ಷುಕರ ಅಲೆದಾಟವನ್ನು ವಿಡಂಬನೆಗೈದಿದ್ದಾನೆ. "ಬಾರ್‌ಥ್ಲೋಮ್ಯೂ ಫೇರ್" ನಾಟಕದ ಮೂಲಕ "ಪ್ಯೂರಿಟನ್" ಸಂಪ್ರದಾಯಸ್ಥರನ್ನು ಹೀಗಳೆದಿದ್ದಾನೆ. "ಮನೋಧರ್ಮ" ಅಥವಾ "ಸ್ವಭಾವ" ಇವು ಜಾನ್ಸನ್‌ನ

ಕಾಲದಲ್ಲಿ ಹಾಸ್ಯಕ್ಕಿದ್ದ ಅರ್ಥವಿವರಣೆ. ಜಾನ್ಸನ್ ಮಧ್ಯ ಯುಗದ "ರಸಧಾತು ತತ್ವ"ದ ಅನುಯಾಯಿ. ಈ ಪ್ರಮೇಯ ವನ್ನೇ ಆಧಾರವಾಗಿಟ್ಟುಕೊಂಡು ತನ್ನ ಹರ್ಷ ನಾಟಕಗಳನ್ನು ರಚಿಸಿದ್ದಾನೆ. ಜಾನ್ಸನ್‌ನ ಹಾಸ್ಯ ಶೈಲಿಯು ಬೇರೆ ದೇಶಗಳಿಂದ ಆಮದಾದ ವಸ್ತುವೇನಲ್ಲ. ಅದು ರಾಷ್ಟ್ರೀಯ ದ್ಯೋತಕ. ಶರೀರದ ರಸಧಾತುಗಳ ಏರುಪೇರಿನಿಂದುಂಟಾದ ವ್ಯಕ್ತಿಗಳ ವಿಷಯವಾದ ಸ್ವಭಾವ ವೈಚಿತ್ರ್ಯ, ವಿಚಿತ್ರ ನಡತೆ, ವೇಷಭೂಷಣ ಹಾಗೂ ಹಾಸ್ಯಾಸ್ಪದವಾದ ಹಾವಭಾವಗಳನ್ನು ತನ್ನ ವೈನೋದಿಕೆ ಗಳಲ್ಲಿ ಚಿತ್ರಿಸಿದ್ದಾನೆ. "ದಿ ಆಲ್ಕೆಮಿಸ್ಟ್" ನಾಟಕದಲ್ಲಿ ಮಾನವ ಸ್ವಭಾವವಾದ ಲೋಭಿತನವನ್ನು ಕುರಿತು ವಿಡಂಬನೆ ಇದೆ. ಅವನ ನಾಟಕಗಳಲ್ಲಿ ವಿಕ್ಷಿಪ್ತ ಸ್ವಭಾವದ ವ್ಯಕ್ತಿಗಳನ್ನು ಕಾಣ ಬಹುದು; ಗಯ್ಯಾಳಿ ಹೆಂಡಂದಿರು, ನರದ್ವೇಷ ಗಂಡಸರು, ವೇಷಭೂಷಣಗಳಲ್ಲೇ ಮೆರೆಯುವ ಶ್ರೀಮಂತರು ಇವರೇ ಇವನ ವಸ್ತು. ಇವನ ಕೆಲ ನಾಟಕಗಳಲ್ಲಿಯ ಹಾಸ್ಯ ಶೈಲಿಯು ಒರಟಾದದ್ದು. ಇವನ ನಾಟಕಗಳು ವಾಸ್ತವ ಜೀವನಕ್ಕೆ ಹಿಡಿದ ಕನ್ನಡಿಗಳಾದ್ದರಿಂದ ಇವುಗಳಲ್ಲಿ ಸಮಾಜದ ಲೋಪದೋಷಗಳ ವಿಡಂಬನೆಯನ್ನು ಧಾರಾಳವಾಗಿ ಕಾಣಬಹುದಾಗಿದೆ. ಕೆಲವು ನಾಟಕಗಳು ನೀತಿಪರವಾಗಿವೆ. ತನ್ನ ಕಾಲದ ಜನರ ಹುಚ್ಚು ಹುಚ್ಚು ಹವ್ಯಾಸಗಳನ್ನು ವಿಚಿತ್ರ ಸ್ವಭಾವದ ವ್ಯಕ್ತಿಗಳ ಮೂಲಕ ವಿಡಂಬನೆಗೈದಿದ್ದಾನೆ. ಶೇಕ್ಸಪೀಯರನ ಹರ್ಷ ನಾಟಕಗಳಲ್ಲಿ ಕಂಡು ಬರುವ ರಮ್ಯ ವಾತಾವರಣ, ವಿಕಸಿತವಾದ ಮಂದಹಾಸ, ನಿಶ್ಚಲವಾದ ನೈಜ ಹಾಸ್ಯಗಳು ಜಾನ್ಸನ್‌ನಲ್ಲಿ

ಕಂಡುಬರಲಾರವು. ಈತನ ನಾಟಕಗಳಿಗೆ ಕೊಡಲ್ಪಟ್ಟ ವಿಶೇಷ ಶೀರ್ಷಿಕೆ "ಮನುಷ್ಯನ ಮನಸ್ಥಿತಿಯನ್ನು ನಿರೂಪಿಸುವ ಹರ್ಷ ನಾಟಕ" ಹೆಚ್ಚು ಅನ್ವರ್ಥಕವಾಗಿಲ್ಲ; ಈ ನಾಟಕಗಳಲ್ಲಿ ನಿಜವಾದ ಹಾಸ್ಯ ಶೈಲಿಯ ಅಭಾವ ಎದ್ದು ಕಾಣುತ್ತದೆ. ರಮ್ಯ ವಿನೋದ ನಾಟಕಗಳ ಸತ್ವವೇ ಈ ನಾಟಕಗಳಲ್ಲಿಲ್ಲ. ಅವನ ಪ್ರಕಾರ ಮನುಷ್ಯನ ಜೀವನದ ಅಸಮರ್ಪಕತೆಯೇ ವಿನೋದ ನಾಟಕಗಳಿಗೇ ಮುಖ್ಯ ಗ್ರಾಸ; ಅದು ಪ್ರಸಂಗದ ರೂಪದಲ್ಲಿರಬಹುದು ಅಥವಾ ಪಾತ್ರಗಳ ರೂಪದಲ್ಲಿರಬಹುದು. ರೊಮ್ಯಾಂಟಿಕ್ ಸಂಪ್ರದಾಯಕ್ಕೆ ವಿರುದ್ಧವಾದ ಜಾನ್ಸನ್ ವಿನೋದ ನಾಟಕಗಳ ಗೌರವ, ಅಂತಸ್ತುಗಳನ್ನುತ್ಥಾದಿಸಲು ಶ್ರಮಪಟ್ಟ. ಇವನ ಅಭಿಪ್ರಾಯದ ಪ್ರಕಾರ "Out of Humour" ಎಂದರೆ "ಮನಸ್ಸು ಸರಿಯಿಲ್ಲದ" ಎಂದೂ "In good Humour" ಎಂದರೆ ಸುಪ್ರಸನ್ನತೆ ಎಂದೂ ಅರ್ಥ. ಇವನ ನಾಟಕಗಳಲ್ಲಿ "ಸ್ವಭಾವದ ಅತಿರೇಕತೆ" ಅಥವಾ "ಹುಚ್ಚು ಹವ್ಯಾಸಗಳೇ" ಪ್ರಾಧಾನ್ಯತೆ ಪಡೆದಿವೆ. ತನ್ನದೇ ಆದ ವಿಶಿಷ್ಟ ಶೈಲಿಯಿಂದ ಹಾಸ್ಯಕ್ಕೆ ತನ್ನ ಮುದ್ರೆಯೊತ್ತಿದ್ದಾನೆ. ಲ್ಯಾಟಿನ್ ಭಾಷೆಯ ಪ್ರಸಿದ್ಧ ಹಾಸ್ಯ ನಾಟಕಕಾರರಾದ ಟೆರೆನ್ಸ್ ಹಾಗೂ ಪ್ಲಾಟಸ್‌ರ ಪ್ರಭಾವವನ್ನು ಜಾನ್ಸನ್‌ನ ವಿನೋದ ನಾಟಕಗಳು ಸೂಚಿಸುತ್ತವೆ. ಒಟ್ಟಾರೆ ಜಾನ್ಸನ್ ಇಂಗ್ಲೀಷ್ ಹಾಸ್ಯ ನಾಟಕಗಳನ್ನು ಪ್ರವರ್ಧಮಾನದೆಡೆಗೆ ಒಯ್ದ ಹಾಸ್ಯ ವಿಡಂಬನಕಾರ.

ii) **ಶೇಕ್ಸಪೀಯರನ ಹಾಸ್ಯ ಶೈಲಿ:** ವಿಶಾಲವಾದ ಹೃದಯದಿಂದ ಶೇಕ್ಸಪೀಯರ್ ಮಾನವ ಸಮಾಜವನ್ನು ನಿರೀ

ಕ್ಷಿಸಿದ ಹಾಗೂ ಹೆಚ್ಚು ವಿವೇಕದಿಂದ ಪರಿಶೀಲಿಸಿದ. ಸಮಾಜದ ಲೋಪದೋಷಗಳ ಅರಿವು ಅವನಿಗೆ ಚೆನ್ನಾಗಿ ಗೊತ್ತು. ಅಂತೆಯೇ ಅವುಗಳ ಬಗ್ಗೆ ತನ್ನ ಗಮನವನ್ನು ಅಷ್ಟೊಂದು ಕೇಂದ್ರೀಕರಿಸದೇ ನಕ್ಕು ನಗಿಸುವದಕ್ಕಾಗಿ ಮಾತ್ರ ಸಂದರ್ಭಾನುಸಾರವಾಗಿ ಅವು ಗಳನ್ನು ತನ್ನ ನಾಟಕಗಳಲ್ಲಿ ತೋರಿಸುವದುಂಟು. ವಿಲಿಯಂ ಶೇಕ್ಸಪೀಯರ ಜಗತ್ತಿನ ನಾಟಕಕಾರರಲ್ಲಿ ಅಗ್ರಮಾನ್ಯ. ಆತನ ವಿನೋದ ನಾಟಕಗಳ ವಸ್ತುಗಳಲ್ಲಿ ಕಂಡು ಬರುವ ವೈವಿಧ್ಯತೆ ಆತ ಸೃಷ್ಟಿಸಿದ ಹಾಸ್ಯ ಪಾತ್ರಗಳಲ್ಲಿಯೂ ಕೂಡ ಕಂಡುಬರು ತ್ತದೆ. ಬಾಟಮ್‌ನಿಂದ ಪ್ರಾರಂಭವಾದ ಅವನ ಒರಟು ಹಾಸ್ಯ ದರ್ಶನ ಸರ್ ಜಾನ್ ಫಾಲ್‌ಸ್ಟಾಫ್‌ನ ವೈವಿಧ್ಯಮಯವಾದ ಹಾಸ್ಯದ ಲಾಸ್ಯಗಳೊಂದಿಗೆ ಕೊನೆಗೊಳ್ಳುತ್ತದೆ. ರುದ್ರ ನಾಟಕ ಗಳಲ್ಲಿ ಸೃಷ್ಟಿಸಿದಂತೆ ಈ ರಮ್ಯ ನಾಟಕಗಳ ವಿದೂಷಕರು ಹಾಗೂ ಬೆಪ್ಪರೂ ಕೂಡ ಚಿರಂಜೀವಿಗಳೇ ಸರಿ. ಸಮಾಜ ಜೀವನದ ಹಾಗೂ ಮಾನವ ಸ್ವಭಾವದ ಪದರು ಪದರುಗಳ ಪರಿಚಯ ಆತನಿಗೆ ಇದ್ದುದೇ ಇಂಥ ರಮ್ಯ ಹಾಗೂ ಅದ್ಭುತ ಪಾತ್ರಸೃಷ್ಟಿ ವೈಖರಿಗೆ ಕಾರಣ. ಶೇಕ್ಸಪೀಯರನ ಒಂದೊಂದು ರಮ್ಯ ನಾಟಕವೂ ವಿಧ ವಿಧವಾದ ಹಾಸ್ಯದ ಹೊನಲನ್ನು ಹೊಮ್ಮು ತ್ತದೆ. ಅವನ ವೈನೋದಿಕೆಗಳು ಹಾಸ್ಯದ ಬತ್ತದ ಸೆಲೆ. ತನ್ನ ಹಾಸ್ಯಲಾಸ್ಯ ಪ್ರದರ್ಶನಕ್ಕಾಗಿ ಆತ ಸರ್ ಜಾನ್ ಫಾಲ್‌ಸ್ಟಾಫ್ ನಂತಹ ಪ್ರತ್ಯೇಕ ಪಾತ್ರವೊಂದನ್ನೇ ಸೃಷ್ಟಿಸಿ ಒಂದಲ್ಲ ನಾಲ್ಕು ನಾಟಕಗಳಲ್ಲಿ ಆತನ ವಿನೋದ ಸ್ವಭಾವದ ವಿಕ್ಷಿಪ್ತ ಸ್ವರೂಪದ ಪರಿಚಯ ಮಾಡಿಸಿದ್ದಾನೆ. ಇವನು ತನ್ನ ನಾಟಕಗಳಲ್ಲಿ ಹಾಸ್ಯ

ಪಾತ್ರಗಳ ಅನೇಕ ಶಿಲ್ಪಗಳನ್ನು ಕಡೆದಿದ್ದಾನೆ. ನಿಕ್ ಬಾಟಮ್, ಮ್ಯಾಲ್ ವೋಲಿಯೂ, ಸರ್ ಟೋಬಿ ಬೆಲ್ಟ್, ಅಟಾಲಿಕಸ್, ಮರ್ಕ್ಯೂಶಿಯೋ ಪೋಲೋನಿಯಸ್, ರೋಡ್ರಿಗೋ ಮುಂತಾದ ಪಾತ್ರಗಳು ಅವನ ನಾಟಕಗಳಲ್ಲಿ ಕಂಡು ಬರುವ ಪ್ರಧಾನ ಹಾಸ್ಯ ಪಾತ್ರಗಳು. ಇವುಗಳಿಗೆಲ್ಲ ಕಳಸಪ್ರಾಯವಾದ ಹಾಸ್ಯ ಪಾತ್ರ ಸರ್ ಜಾನ್ ಫಾಲ್‌ಸ್ಟಾಫ್‌ನದು. ಈತನ ಪಾತ್ರ "ವಿನ್ಸರನ ವಿನೋದ ವನಿತೆಯರು" ಮತ್ತು "ಐದನೇ ಹೆನ್ರಿ ದೊರೆ (ಭಾಗ–೨)" ನಾಟಕಗಳಲ್ಲಿ ನಿರೂಪಿಸಲ್ಪಟ್ಟಿದೆ. ಈ ಪಾತ್ರ ಸೃಷ್ಟಿ ಸಲು ಶೇಕ್ಸಪೀಯರನಿಗೆ ಸ್ಫೂರ್ತಿ ಮುಖ್ಯವಾಗಿ ಪುರಾತನ ಗ್ರೀಕ್ ನಾಟಕಕಾರ ಪ್ಲಾಟಸ್‌ನ ಕೃತಿ "ಮೈಲ್ಸ್ ಗ್ಲೋರಿ ಯೂಸಸ್"ನಿಂದ ಸಿಕ್ಕಿರುವದು. ಫಾಲ್‌ಸ್ಟಾಫ್ ಪ್ರೇಮಿಯಾಗಿ ಪಡುವ ಪಾಡು "ವಿಂಡ್ಸರನ ವಿನೋದ ವನಿತೆಯರು" ನಾಟಕದಲ್ಲಿ ವಿಡಂಬನಾತ್ಮಕ ಹಾಸ್ಯದ ಮೂಲಕ ಚಿತ್ರಿತವಾಗಿದೆ. ಶೇಕ್ಸ ಪೀಯರನ ಕಾಲದ ಪ್ರೇಕ್ಷಕರು ಬಹಳವಾಗಿ ಮೆಚ್ಚಿ ನಕ್ಕು ನಲಿ ಯುವಂತೆ ಮಾಡಿದ ಪಾತ್ರ ಫಾಲ್‌ಸ್ಟಾಫ್‌ನದೇ. ಅವನು ಸ್ವತಃ ವಿನೋದಿಯಷ್ಟೇ ಅಲ್ಲ, ಜೊತೆಗೆ ಇತರರಲ್ಲಿನ ವಿನೋದ ಪ್ರಕೃತಿಗೆ ಕಾರಣನೂ ಹೌದು.

ಶೇಕ್ಸಪೀಯರನ ವಿಶಾಲವಾದ ಮನೋಭಾವ ಹಾಗೂ ಆಳವಾದ ಬುದ್ಧಿಮತ್ತೆಯಷ್ಟೇ ಅವನ ಹಾಸ್ಯ ದೃಷ್ಟಿಕೋನವೂ ಕೂಡ ವಿಶಾಲ ಹಾಗೂ ವೈವಿಧ್ಯಮಯ. ಸಹಾನುಭೂತಿ ಪ್ರೇರಿತವಾದ ಪರಿಹಾಸ್ಯ, ಪ್ರಮೋದಗಳನ್ನು ಪ್ರಥಮವಾಗಿ ಅವನ ನಾಟಕಗಳಲ್ಲಿ ಹೇರಳವಾಗಿ ಕಂಡುಕೊಳ್ಳಬಹುದಾಗಿದೆ.

ಜಾಕ್‌ನ ಪಾತ್ರದ ಮೂಲಕ ಜಗತ್ತಿನ ಲೋಪದೋಷಗಳನ್ನು ಕುರಿತು ಶೇಕ್ಸಪೀಯರನು ಅವಹೇಳನ ಮಾಡಿದ್ದಾನೆ. ಅದ ರಂತೆಯೇ ಚಿತ್ರಿತ ಸಮಾಜದ ಹುಚ್ಚು ವ್ಯವಹಾರಗಳನ್ನು ನೋಡಿ ನಕ್ಕು ನಲಿಯುವದನ್ನು ಕೂಡ ಕಾಣಬಹುದು. ಮಾನವ ಸಮಾಜದ ತಪ್ಪು ತಡೆಗಳ ಬಗೆಗೆ ಹೆಚ್ಚು ವಿಚಾರಿಸದೇ ಕೇವಲ ನಕ್ಕು ನಲಿಯುವ ನಿರ್ವಿಕಾರ ಮನೋಭಾವನೆ ಹಾಗೂ ನಿರ್ಲಿಪ್ತ ತೆಗಳನ್ನು ಶೇಕ್ಸಪೀಯರನ ಹಾಸ್ಯ ಶೈಲಿಯಲ್ಲಿ ಚೆನ್ನಾಗಿ ಕಾಣು ತ್ತೇವೆ. ಸಾಮಾನ್ಯ ಜನರ ನಕ್ಕು ನಲಿಯುವ ಭಾವನೆ ಹಾಗೂ ವಿಮರ್ಶಕ ವಿವೇಚನೆಯಿಂದ ಕೂಡಿದ ಹಾಸ್ಯ ದೃಷ್ಟಿಯೂ ಶೇಕ್ಸಪೀಯರನ ನಾಟಕಗಳಲ್ಲಿ ಕಂಡು ಬರುತ್ತವೆ. ಸಮಾಜದ ಏರುಪೇರುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಮುಗುಳ್ನಗೆ ಯನ್ನು ಸೂಸುವ ವಿಶಾಲ ಮನೋಭಾವದ ಹಾಸ್ಯ ದೃಷ್ಟಿ ಕೋನವುಳ್ಳ ಶೇಕ್ಸಪೀಯರ ಇಂದಿನ ಸಮಾಜಕ್ಕೂ ತುಂಬಾ ಆಪ್ಯಾಯಮಾನವಾಗಿದ್ದಾನೆ. ಅವನ ಹಾಸ್ಯ ಅನುಕಂಪದಿಂದ ಕೂಡಿದ್ದಾಗಿದೆ, ಸ್ವಾಭಾವಿಕವಾಗಿದೆ. ಅವನು ತನ್ನ ಹಾಸ್ಯ ಪಾತ್ರಗಳಿಗಾಗಲೀ ಅಥವಾ ಹಾಸ್ಯ ಪ್ರಸಂಗಗಳಿಗಾಗಲಿ ಬಹಳಷ್ಟು ಪ್ರಯತ್ನ ಪಡಬೇಕಾಗಿಲ್ಲ. ಪರಿಶ್ರಮವಿಲ್ಲದೇ ಸ್ವಾಭಾವಿಕವಾಗಿ ಅವನ ಹಾಸ್ಯ ಶೈಲಿ ನಾಟಕಗಳಲ್ಲಿ ಪ್ರವಹಿಸುತ್ತದೆ. ಅವನದು ಜೀವಂತ ಹಾಸ್ಯ. ಹಾಸ್ಯದ ವಿವಿಧ ರೂಪಗಳ ಪರಿಚಯವನ್ನು ಅವನು ತನ್ನ ನಾಟಕಗಳ ಮೂಲಕ ಮಾಕೊಡಿಟ್ಟಿದ್ದಾನೆ.

ಮುಖ್ಯವಾಗಿ ನಾವು ಗಮನಿಸಬೇಕಾದ ವಿಷಯವೇನಂದರೆ ನಿರ್ದಿಷ್ಟವಾಗಿ ಶೇಕ್ಸಪೀಯರನ ಹಾಸ್ಯ ಶೈಲಿ ಹಾಗೂ ದೃಷ್ಟಿ

ಅವನ ರಾಷ್ಟ್ರದ ವಿಶಿಷ್ಟ ಗುಣದ ಪ್ರತೀಕ ಒಂದೆಡೆಯಾದರೆ ವಿಶಾಲಾರ್ಥದಲ್ಲಿ ಇಡೀ ಮಾನವ ಸಮಾಜದ ವಿನೋದ ದೃಷ್ಟಿ ಕೋನದ ಪ್ರತೀಕವೂ ಸರಿ. ಅವನ ಹಾಸ್ಯ ಶೈಲಿ ನೀಲಗಗನದಲ್ಲಿ ಕಾಲದ ಮಿಂಚು ಕೋರೈಸಿದಂತೆ ನಮ್ಮನ್ನು ಘಾಸಿಗೊಳಿಸದೆ ಪ್ರಕಾಶಗೊಳಿಸುತ್ತದೆ; ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ ಹಾಗೂ ಮೋಹಗೊಳಿಸುತ್ತದೆ. ಅದು ಯಕ್ಷಿಣಿಗಾರನ ಯಕ್ಷಿಣಿಯಂತಿದೆ. ಕೇವಲ ನಗೆಯನ್ನುಂಟು ಮಾಡುವ ಪ್ರೇರಕಶಕ್ತಿಯಲ್ಲ; ತಾನು ಸೃಷ್ಟಿಸಿದ ಪಾತ್ರಗಳ ಮುಖಾಂತರ ಪ್ರವಹಿಸುವ ಪ್ರಭಾವಶಾಲಿಶಕ್ತಿ, ಎಲ್ಲವನ್ನೂ ಒಳಗೊಂಡಿರುವ ವ್ಯಾಪಕಶಕ್ತಿ. ಮುಖ್ಯವಾಗಿ ಅವನ ಶೈಲಿಯಲ್ಲಿ ನಾವು ಕಾಣುವದು ಸಮತೋಲನತ್ವ ಹಾಗೂ ಒಂದು ಬಗೆಯ ಮೋಹಕ ಚುಂಬಕ ಶಕ್ತಿಯನ್ನು. ತನ್ನ ಕಾಲದ ಸಭ್ಯತೆ, ಸಂಪ್ರದಾಯಗಳು ಹಾಗೂ ಹುಚ್ಚು ಕೆಲಸಗಳೇ ಇವನ ಆಮೋದ–ಪ್ರಮೋದಗಳ ವಸ್ತುಗಳಾಗಿವೆಯೇ ಹೊರತು, ವ್ಯಕ್ತಿಯ ದುರಾದೃಷ್ಟ ಹಾಗೂ ಲೋಪದೋಷಗಳಲ್ಲ. ಗಂಭೀರ ಹಾಗೂ ರಹಸ್ಯವಾದ ಉದ್ದೇಶದಿಂದ ಕೂಡಿದ ಪ್ರಕಾಶಮಯವಾದ, ಉಲ್ಲಾಸವುಳ್ಳ ಪ್ರಹಸನವೇ ಇವನ ಹಾಸ್ಯದೃಷ್ಟಿಯ ಪ್ರಥಮ ಸೋಪಾನ. ಅದನ್ನು ನಾವು "ಲವ್ಸ ಲೇಬರ್ಸ ಲಾಸ್ಟ"ನಲ್ಲಿ ಕಾಣಬಹುದಾಗಿದೆ. ತಾನು ಬಹಳೇ ಗಂಭೀರನಾದಾಗ ನಗೆಯ ಅಲೆಗಳನ್ನು ಶೇಕ್ಸಪೀಯರ ಸೃಷ್ಟಿಸಿದ್ದಾನೆ. ಅವನ ರುದ್ರನಾಟಕಗಳಲ್ಲಿ ಕೂಡ ಉಲ್ಲಾಸಗೊಳಿಸುವ ವಿನೋದ ಕಂಡು ಬರುವದು. ಅವನ ಕೆಲವು ವಿನೋದ ನಾಟಕಗಳಲ್ಲಿ ಹಾಸ್ಯವು ಗಂಭೀರ ಶೈಲಿಯ ಮುಖವಾಡ

ಧರಿಸಿರುವದರಿಂದ ಅಂಥ ಹರ್ಷ ನಾಟಕಗಳಿಗೆ "Dark Comedies" ಎಂಬ ಅನ್ವರ್ಥಕ ಹೆಸರನ್ನು ವಿಮರ್ಶಕರು ಕೊಟ್ಟಿದ್ದಾರೆ. ಇವನ ಹಾಸ್ಯ ನಾಟಕಗಳಲ್ಲಿ ಇಂಗ್ಲೀಷ್ ಹಾಸ್ಯ ಶೈಲಿಯು ಪರಿಪೂರ್ಣ ವಿಕಾಸ ಹೊಂದಿದೆ. ಶೇಕ್ಸಪೀಯರನಿಗಿಂತ ಮೊದಲಿನ ಇಂಗ್ಲೀಷ್ ಹಾಸ್ಯ ಬರಹಗಾರರು ಹಾಸ್ಯ ಸಾಹಿತ್ಯ ಕ್ಷೇತ್ರವನ್ನು ಅಷ್ಟು ಫಲವತ್ತಾಗಿ ಮಾಡಿಲ್ಲ. ಆದರೆ ಶೇಕ್ಸಪೀಯರನು ಇಂಗ್ಲೀಷ್ ಹಾಸ್ಯಶೈಲಿಯ ವಿರಾಟ್ದರ್ಶನವನ್ನೇ ಮಾಡಿಸಿದ್ದಾನೆ. ಅವನ ಹಾಸ್ಯ ಶೈಲಿ ರಾಷ್ಟ್ರೀಯ ಹಾಗೂ ಮಾನವೀಯತೆಯ ದೃಷ್ಟಿಕೋನವನ್ನು ಬಿಂಬಿಸುತ್ತದೆ. ಆತ ಜೀವನದ ಆಳವನ್ನು ಬಗೆದಂತೆ ಜೀವನದಲ್ಲಿ ಹುದುಗಿದ ಹಾಸ್ಯವನ್ನು ಬಗೆದವನು. ಯುರೋಪದ ಬೇರೆ ದೇಶಗಳ ಹಾಸ್ಯ ಬರಹಗಾರರಾದ ಪ್ಲಾಟಸ್, ಟೆರೆನ್ಸ್, ಸರ್ವೆಂಟಿಸ್ ಹಾಗೂ ರೆಬೆಲಾಸ್ ಮೊದಲಾದವರ ಕೃತಿಗಳು ಶೇಕ್ಸಪೀಯರನ ಮೇಲೆ ಸಾಕಷ್ಟು ಪ್ರಭಾವವನ್ನುಂಟು ಮಾಡಿದವು. ಫ್ರೆಂಚ ಸಾಹಿತ್ಯದ ಚತುರೋಕ್ತಿ ಮತ್ತು ಇಟಲಿ ಸಾಹಿತ್ಯದ ವಿಡಂಬನೆ ಹಾಸ್ಯ ಶೈಲಿಗಳು ಅವನ ಹಾಸ್ಯ ನಾಟಕಗಳ ರಚನೆಗೆ ದಾರಿದೀಪಗಳಾದುವೆಂದು ಹೇಳಬಹುದಾಗಿದೆ. ಅವನ ಹಾಸ್ಯ ಶೈಲಿ ನಿಸರ್ಗ ಸಹಜವಾದದ್ದು. ಉಳಿದ ಯಾವ ಹಾಸ್ಯ ಬರಹಗಾರರನ್ನೂ ಅನುಕರಣೆ ಮಾಡದೆ ಅವನು ತನ್ನ ಸ್ವತಂತ್ರ ಹಾಸ್ಯ ಶೈಲಿಯನ್ನು ನಿರೂಪಿಸಿದ್ದಾನೆ. ಸಹಜ ಪ್ರವೃತ್ತಿಯನ್ನು ಮಾತ್ರ ಇವನ ಹಾಸ್ಯ ಶೈಲಿಯಲ್ಲಿ ಕಾಣಬಹುದು. ಇಂಗ್ಲೆಂಡಿನ ಗುಣಧರ್ಮ, ಮಣ್ಣಿನ ವಾಸನೆ ಹಾಗೂ ಚೈತನ್ಯಗಳನ್ನು ಶೇಕ್ಸಪೀಯರನ

ಹಾಸ್ಯ ಶೈಲಿ ಸಂಪೂರ್ಣವಾಗಿ ಬಿಂಬಿಸುತ್ತದೆ. ಇದರಲ್ಲಿ ಎರಡು ಸಮಕಾಲೀನ ಹಾಸ್ಯವಿಚಾರಧಾರೆಗಳು ಸಂಗಮವನ್ನು ಹೊಂದಿವೆ; ಅವೇ ರಾಷ್ಟ್ರೀಯ ಹಾಸ್ಯ ದೃಷ್ಟಿಕೋನ ಹಾಗೂ ಮಾನವೀಯ ದೃಷ್ಟಿಕೋನಗಳು. ಕವಿ ಛಾಸರನು ಹಾಕಿಕೊಟ್ಟ ಭವ್ಯವಾದ ಇಂಗ್ಲೀಷ್ ಹಾಸ್ಯದ ಪರಂಪರೆಯ ದಾರಿಯನ್ನೇ ತುಳಿದು ಶೇಕ್ಸ ಪೀಯರ ತನ್ನದೇ ಆದ ಮುದ್ರೆ ಒತ್ತಿದ್ದಾನೆ. ಅವನ ಹಾಸ್ಯ ದಲ್ಲಿ ಯುರೋಪಿನ ವಿವಿಧ ಭಾಷೆಗಳ ಹಾಸ್ಯ ಶೈಲಿಗಳ ಕ್ರೋಢೀ ಕರಣವನ್ನು ಹಾಗೂ ಅದಕ್ಕೆ ಅವನದೇ ಆದ ಮುದ್ರೆಯನ್ನು ಕಾಣಬಹುದು. ಇದೇ ಅವನಲ್ಲಿ ಕಂಡು ಬರುವ ನಾವೀನ್ಯತೆ. ಅವನ ಹಾಸ್ಯ ಶೈಲಿ ಸರ್ವತೋಮುಖವಾಗಿದೆ ಹಾಗೂ ಸೃಜ ನಾತ್ಮಕವಾಗಿದೆ.

ವಿಮರ್ಶಕರ ಪ್ರಕಾರ ಶೇಕ್ಸಪೀಯರನ ಹಾಸ್ಯ ಶೈಲಿಯ ವಿಕಾಸದಲ್ಲಿ ಮೂರು ಸೋಪಾನಗಳಿವೆ. ತಮಾಷೆ ಅಥವಾ ಪ್ರಹಸನ ಮೊದಲನೆಯದು; ವ್ಯಂಗ್ಯ ಹಾಸ್ಯ ಎರಡನೆಯದು; ಜನಪ್ರಿಯ ಹಾಗೂ ರಾಷ್ಟ್ರೀಯತೆಯನ್ನು ಬಿಂಬಿಸುವ ಹಾಸ್ಯ ಮೂರನೆಯದು. ಇನ್ನು ಕೆಲವು ವಿಮರ್ಶಕರ ಪ್ರಕಾರ ವಿಡಂಬ ನಾತ್ಮಕ ಹಾಸ್ಯ ಹಾಗೂ ಬೌದ್ಧಿಕ ಹಾಸ್ಯಗಳೂ ಕೂಡ ಇವನ ಹಾಸ್ಯ ಶೈಲಿಯ ಉತ್ತುಂಗ ಶಿಖರಗಳು. ಪ್ರೇಕ್ಷಕರನ್ನು ನಕ್ಕು ನಗಿಸುವ ಜಾಣ್ಮೆಯನ್ನು ಬೆಪ್ಪರಿಗೆ ಹಾಗೂ ವಿದೂಷಕರಿಗೆ ಇವನು ತನ್ನ ಹಾಸ್ಯ ವೈನೋದಿಕೆಗಳಲ್ಲಿ ಧಾರಾಳವಾಗಿ ಒದಗಿ ಸಿಕೊಟ್ಟಿದ್ದಾನೆ. ಅವರೇ ಅವನ ಹಾಸ್ಯವನ್ನು ಪ್ರವಹಿಸುವ ಸಾಧನ ವಾಗಿದ್ದಾರೆ.

ತನ್ನ ವಿನೋದ ನಾಟಕಗಳಲ್ಲಿ ನಿರೂಪಿಸಲ್ಪಟ್ಟಿರುವ ಹಾಸ್ಯ ಪ್ರಸಂಗ ಹಾಗೂ ಪಾತ್ರಗಳ ಮೂಲಕ ಶೇಕ್ಸಪೀಯರ ಇಂಗ್ಲೀಷ್ ಹಾಸ್ಯ ಸಾಹಿತ್ಯಕ್ಕೆ ನೀಡಿರುವ ಕಾಣಿಕೆ ಅತ್ಯಮೂಲ್ಯವಾಗಿದೆ. ಅನೇಕ ಪ್ರಸಂಗಗಳಲ್ಲಿ ಬೆಪ್ಪರ ಜಾಣ್ಮೆ ಅಥವಾ ಅವರ ಬೆಪ್ಪುತನ ಅವರಿಗೆ ದೈವದತ್ತ ವರವಾಗಿದೆ. ಶೇಕ್ಸಪೀಯರ ಬರೆಯಲು ಪ್ರಾರಂಭಿಸುವ ಹೊತ್ತಿಗೆ ಆಗಲೇ ಬೆಪ್ಪುತನವು ರಂಗಭೂಮಿಯ ಮೇಲೆ ತನ್ನ ಸ್ಥಾನವನ್ನು ಗಳಿಸಿದ್ದಿತು. ಗಾಂಭೀರ್ಯದಂತಹ ಕೋಟೆಯನ್ನೇ ಭೇದಿಸಿ ಹಾಸ್ಯ ಹೇಗೋ ನುಸುಳಿಕೊಂಡು ಬಂದು ಸೇರಿಬಿಡುತ್ತದೆ. ಎಂತಲೇ ಮತದ ಸ್ಫೂರ್ತಿಯಿಂದ ರೂಪ ತಾಳಿ ಬೆಳೆದು ಬಂದ ನಾಟಕದಲ್ಲಿಯೂ ಹಾಸ್ಯ ಕಾಲಿಡುತ್ತದೆ. ಅನೇಕ ನಾಟಕಗಳಲ್ಲಿ ನಾವು ಕಾಣುವ ವಿದೂಷಕನ ಪಾತ್ರ ಹಾಸ್ಯವನ್ನೊದಗಿಸುವದಕ್ಕಾಗಿಯೇ ಇದ್ದು, ಇದಕ್ಕೆ ಜನ್ಮ ತಳೆದ ಬೆಪ್ಪರೂ ಶೇಕ್ಸಪೀಯರನ ಜಗತ್ತಿನಲ್ಲುಂಟು. ಅವರ ವಜ್ರಾಯುಧ ಶ್ಲೇಷೆ, ಸಾಧ್ಯವಾದಾಗಲೆಲ್ಲ ಅಸಭ್ಯತೆ ಬೆರೆತ ಶ್ಲೇಷ ಪದಗಳೊಡನೆ ಆಟವಾಡುವದು ಒರಟು ಹಾಸ್ಯ. ಇವುಗಳಿಂದ ಜನರನ್ನು ನಗಿಸುವ, ಕಷ್ಟಪಡುವ ಮಾರ್ಗವನ್ನು ಪ್ರಾರಂಭದ ಕಥೆಗಳಲ್ಲಿ ಮಾತ್ರವಲ್ಲ "ಅಥೆಲೋ" ದಂತಹ ಮಹಾನ್ ಕೃತಿಗಳಲ್ಲಿಯೂ ಕಾಣಬಹುದು. ಲಾನ್ಸ್ ಲಾಟ್ ಗಾಬೋ ಕೂಡ ಜಾಣ್ಮೆತೋರುವ ಬೆಪ್ಪ. ಬೆಪ್ಪತನವನ್ನು ಹಾಸ್ಯದ ಸೃಷ್ಟಿಗಾಗಿ ಎಲ್ಲ ನಾಟಕಕಾರರೂ ಬಳಸಿಕೊಂಡಂತೆ ಶೇಕ್ಸಪೀಯರನೂ ಬಳಸಿಕೊಂಡಿದ್ದಾನೆ. ಆದರೆ ತನ್ನ ಕಾಲದ ನಾಟಕದ ಎಲ್ಲಾ ಸಂಪ್ರದಾಯಗಳಿಗೆ ಹೊಸ ಸ್ವರೂಪ, ಜೀವಕಳೆಗಳನ್ನಿತ್ತಂತೆ ಈ ಬೆಪ್ಪರ ಪಾತ್ರ

ಗಳಿಗೂ ಜೀವಕಳೆಯ ಎರಕ ಹೊಯ್ದಿದ್ದಾನೆ. ಮೊಟ್ಟಮೊದಲ ಬಾರಿಗೆ ಬೆಪ್ಪನ ಪಾತ್ರಕ್ಕೆ ಜೀವ ಸಂಚಾರವಾಗುವದು "ಎ ಮಿಡ್ಸ ಸಮರ ನೈಟ್ಸ ಡ್ರೀಮ್"ದಲ್ಲಿ; ಇಲ್ಲಿ ಬಾಟಮ್‌ನ" ಪಾತ್ರದ ಮುಖಾಂತರ ಒರಟು ಹಾಸ್ಯ ಸೃಷ್ಟಿಯಾಗಿದೆ. ಈ ನಾಟಕದ ಮುಖಾಂತರವೇ ಅವನ ನಾಟಕಗಳಲ್ಲಿ ಹಾಸ್ಯ ಚುಂಚು ಪ್ರವೇಶ ಮಾಡುವದು. ಇದು ಅವನ ಹಾಸ್ಯ ಶೈಲಿಯ ಪ್ರಥಮ ಪ್ರಯತ್ನ. ಬೆಪ್ಪ ಎಂದು ನಾವು ಹೆಸರಿಟ್ಟು ಕರೆಯಬಹುದಾದ ಪಾತ್ರವನ್ನು ಮತ್ತೆ ಕಾಣುವದು "ಮಚ್ ಆಡೂ ಅಬೌಟ್ ನಥಿಂಗ್"ದಲ್ಲಿ. ಇದರಲ್ಲಿ ಕಾಣುವ ಡಾಗ್‌ಬೆರಿ ಹಾಗೂ ವರ್ಜೀಸರು ಬಾಟಮ್ ನಂತೆಯೇ ಪ್ರೇಕ್ಷಕರಿಗೆ ವಿನೋದವನ್ನುಂಟು ಮಾಡುವರು. ಡಾಗ್‌ಬೆರಿ ಕಾವಲಿನ ಅಧಿಕಾರಿ. ತನಗೆ ಪದಗಳ ಅರ್ಥ ಗೊತ್ತಿರ ದಿದ್ದರೂ ತನ್ನ ಘನತೆಗೆ ತಕ್ಕ ಪದಗಳನ್ನೇ ಆರಿಸಿಕೊಳ್ಳುತ್ತಾನೆ. ಇವರ ಸುತ್ತ ಹಬ್ಬಿರುವದು ನಗೆಯ ಅಲೆಗಳು. ಮತ್ತೊಬ್ಬ ಬೆಪ್ಪನನ್ನು "ಟ್ವೆಲ್ಥ್ ನೈಟ"ದಲ್ಲಿ ಕಾಣಬಹುದಾಗಿದೆ. ಇಲ್ಲಿಯ ಹಾಸ್ಯದತರಂಗಗಳೇ ಬೇರೆ ವಿಧವಾಗಿವೆ. ನಾವು ಮಾಲ್ವೋ ಲಿಯೋನನ್ನು ನೋಡಿ ನಗುತ್ತೇವೆ. ಆದರೆ ಆ ನಗೆಯ ಹಿಂದೆ ಇವನು ನಗೆಗೆ ಮಾತ್ರ ಪಾತ್ರನಲ್ಲ ಎಂಬ ಭಾವನೆಯೂ ಉಂಟು. ಇವನು ಶ್ರೀಮಂತಳಾದ ಆಲಿವಿಯಾಳ ಮನೆವಾರ್ತೆಯನ್ನು ನೋಡಿ ಕೊಳ್ಳುವ ಅಧಿಕಾರಿ. ಇವನದು ಅತಿ ಬಿಗಿಯಾದ ಹಿಡಿತ: ಇದು ಆಲಿವಿಯಾಳ ಮನೆಯಲ್ಲಿ ಹೆಗ್ಗಣದಂತೆ ಸೇರಿಕೊಂಡಿರುವ ಸರ್ ಟೋಬಿಗೆ, ಆವಳ ಸಂಗಾತಿ ಮರಿಯಾ, ವಿದೂಷಕ ಫೆಸ್ಟ್ ಇವರಿಗೆ ಸಹಿಸದು. ಇವರೆಲ್ಲ ಸೇರಿ ಆಲಿವಿಯಾ ಮಾಲ್ವೋಲಿ

ಯೋಗೆ ಬರೆದಂತೆ ಒಂದು ಪ್ರಣಯ ಪತ್ರವನ್ನು ಬರೆದು, ಅವನಿಗೆ ಅದು ಸಿಕ್ಕುವಂತೆ ಮಾಡುತ್ತಾರೆ. ಇದರಿಂದ ಉಬ್ಬಿ ಹೋದ ಮಾಲ್ವೋಲಿಯೋ ಇನ್ನೂ ಉದ್ಧಟನಾಗಿ ನಡೆದು ಕೊಳ್ಳುತ್ತಾನೆ. ಅವನ ವರ್ತನೆ ಆಲಿವಿಯಾಳಿಗೆ ಅಚ್ಚರಿಯನ್ನುಂಟು ಮಾಡುತ್ತದೆ. ಉಳಿದವರೆಲ್ಲ ಅವನಿಗೆ ದೆವ್ವ ಹಿಡಿದಿದೆಯೆಂದು ಅವನನ್ನು ಕಾಡುತ್ತಾರೆ. ಮಾಲ್ವೋಲಿಯೋ ಆಲಿವಿಯಾಳ ಸಮ್ಮುಖದಲ್ಲಿ ನಡೆದುಕೊಳ್ಳುವ ರೀತಿ, ಅವಳನ್ನು ತಾನು ಮದುವೆಯಾದ ನಂತರ ಚಿತ್ರಿಸಿಕೊಳ್ಳುವ ವೈಖರಿ ಮತ್ತು ಮಾತು ಗಳು ವಿನೋದವನ್ನುಂಟು ಮಾಡುತ್ತವೆ. ಮತ್ತೊಬ್ಬ ಬೆಪ್ಪ ಸರ್ ಆಂಡ್ರೂ ಏಗ್ಯೂಚೀಕ್‌ನಲ್ಲಿ ಮಾಲ್ವೋಲಿಯೋನ ಆತ್ಮ ಪ್ರತಿಷ್ಠೆ ಇಲ್ಲದಿರುವದರಿಂದ ಅವನನ್ನು ಕಂಡು ಕನಿಕರ ಉಂಟಾಗು ತ್ತದೆ. ಅವನು ಹೇಡಿತನದ ಮೂರ್ತಿ, ಜಗಳಗಂಟ. ಸರ್ ಟೋಬಿ ಅವನಿಗೆ ಆಲಿವಿಯಾಳೊಡನೆ ಮದುವೆಯಾಗುವ ಸಾಧ್ಯತೆಯನ್ನು ತೋರಿಸಿ ಅವನನ್ನು ಸಾಕಷ್ಟು ಸುಲಿಗೆ ಮಾಡುತ್ತಾನೆ. ಸರ್ ಟೋಬಿ ಹೇಳಿದ "Accost" ಶಬ್ದದ ಅರ್ಥ ತಿಳಿಯದೆ ಅದು ಮರಿಯಾಳ ಹೆಸರೆಂದು ಭಾವಿಸಿಕೊಂಡು ಗೊಂದಲಕ್ಕೀಡಾಗು ತ್ತಾನೆ. ಇವನ ಭ್ರಮೆಗೆ ಸರ್ ಟೋಬಿಯ ಪೋಷಕತನ, ಹೊಗಳಿಕೆಗಳು ಪೂರಕವಾಗಿವೆ. ಬಾಟಮ್, ಡಾಗ್ ಬೆರಿ, ಆಂಡ್ರೂ ಇವರೆಲ್ಲ ಹುಟ್ಟು ಬೆಪ್ಪರು; ತಾವು ಬೆಪ್ಪರೆಂದು ಅರಿಯದ ಬೆಪ್ಪರು. ಇವರನ್ನು ಕಂಡು ತಿರಸ್ಕಾರವಿಲ್ಲದ ನಗು ಬರುತ್ತದೆ. ಇಂಥ ಬೆಪ್ಪರಿಂದ ಹಾಗೂ ಅವರ ವಿನೋದ ಪೂರ್ಣ ಪರಟೆ ನಡತೆಗಳಿಂದ ಜೀವನದ ಹಾಸ್ಯ ಸಂಪತ್ತು ಹೇಗೋ ಹೆಚ್ಚಿದಂತೆ

ಭಾಸವಾಗುತ್ತದೆ. ಬಹುಶಃ ಇದುವೇ ಶೇಕ್ಸಪೀಯರನ ಹಾಸ್ಯ ಶೈಲಿಯ ಉದ್ದೇಶ ಹಾಗೂ ಮಾರ್ಗವಾಗಿರಬಹುದು.

ಶೇಕ್ಸಪೀಯರನು ಇನ್ನೊಂದು ಬಗೆಯ ಬೆಪ್ಪರನ್ನೂ ತನ್ನ ನಾಟಕಗಳಲ್ಲಿ ಚಿತ್ರಿಸಿದ್ದಾನೆ. ಇವರು ವೃತ್ತಿಯಲ್ಲಿ ಬೆಪ್ಪರಾದವರು. ಬಹುಬಾರಿ ಇವರ ಹಾಸ್ಯ "ತಿಣಕಿದನು ಫಣಿರಾಯ" ಎನ್ನುವ ವರ್ಗಕ್ಕೆ ಸೇರಿದುದು. ಇವರನ್ನು "Licensed fools" ಎಂದು ಕರೆಯುವದು ಸಂಪ್ರದಾಯ. ಸುತ್ತಮುತ್ತಲಿನವರನ್ನು, ಅರಸನನ್ನೂ ಕೂಡ ಟೀಕೆ ಮಾಡುವದರಲ್ಲಿ ಇವರಿಗೆ ಬೇರಾರಿಗೂ ಇಲ್ಲದ ಸ್ವಾತಂತ್ರ್ಯವಿರುವದು. ಲಾನ್ಸ್‌ಲಾಟ್‌ಗಾಬೋ "ಅಥೆಲೋ"ದ ವಿದೂಷಕ. ಆದರೆ "As you like it" ನಾಟಕದ ಟಚ್‌ಸ್ಟೋನ್ ಬೇರೆ ಕಲ್ಲಿನಿಂದ ಕೆತ್ತಿದ ಮೂರ್ತಿಯಾಗಿದ್ದಾನೆ. ಸಾಂಪ್ರದಾಯಿಕ ವಿದೂಷಕನ ಶ್ಲೇಷ ಶಬ್ದಗಳೊಡನೆ ಚಲ್ಲಾಟಗಳೆಲ್ಲ ಅವನಲ್ಲಿಯೂ ಉಂಟು. ಅತಿರೇಕವನ್ನು ತಿದ್ದಿ ವಾಸ್ತವಿಕತೆಯನ್ನು ಜಗತ್ತಿಗೆ ನೀಡುವದು ಟಚ್‌ಸ್ಟೋನ್‌ನ ಕೆಲಸ. ಆಸ್ಥಾನಿಕರ ಒಣಹೆಮ್ಮೆ, ಬಂಡವಾಳವಿಲ್ಲದ ಬಡಾಯಿ, ಜಗಳಗಂಟತನ, ಹೇಡಿತನ ಇವೆಲ್ಲವುಗಳನ್ನು ನಿರ್ದಯವಾಗಿ ಹಾಸ್ಯ ಮಾಡುತ್ತಾನೆ. ವಿದೂಷಕನ ವೇಷದ ಇವನು ವಿವೇಕಶಾಲಿಗಳೆನಿಸಿಕೊಂಡವರ ಮೂರ್ಖತನವನ್ನು ಬೆರಳಿಟ್ಟು ತೋರುವ ಬುದ್ಧಿವಂತ. ಶೇಕ್ಸಪೀಯರನ ವಿದೂಷಕರು ಬರಿಯ ಬುದ್ಧಿಶಕ್ತಿಯ ವಿಗ್ರಹಗಳಲ್ಲ, ಆದರೆ ಅಂತಃಕರಣವನ್ನು ಅರಿತ ಮಾನವರು.

"ಟ್ವೆಲ್ಫ್‌ನೈಟ್"ದಲ್ಲಿಯ ಫೆಸ್ಟ್ ಎಲ್ಲರನ್ನು ನಕ್ಕು ನಗಿಸುವದು ಮಾತ್ರವಲ್ಲ ಕನಿಕರವನ್ನೂ ಸಂಪಾದಿಸುತ್ತಾನೆ. ಲಿಯರ್

ಅರಸನ ವಿದೂಷಕ ಕೂಡ ತನ್ನ ವಾಗ್ಬಾಣ, ಚತುರೋಕ್ತಿಗಳಿಗೆ ಹೆಸರಾಗಿದ್ದಾನೆ. ಲಿಯರ್‌ನ ಗುಣದೋಷಗಳನ್ನು ತನ್ನ ಮಾತುಗಳ ಮೊನೆಯಿಂದ ಚುಚ್ಚಿ ತೋರಿಸುತ್ತಾನೆ; ಅವನನ್ನು ಎಚ್ಚರಿಸುತ್ತಾನೆ. ಈ ಮೊನಚಾದ ವಾಗ್ಬಾಣಗಳೆಸೆವ, ನಾಲಗೆಯನ್ನಾಡಿಸುವ, ಮಮತೆ ತುಂಬಿದ ಹೃದಯ ವಿದೂಷಕರದಾಗಿದೆ. ವಿದೂಷಕರಲ್ಲಿ ಕಾಣುವದು ತಮ್ಮ ಲೋಕ ವ್ಯವಹಾರದ ಜಾಣ್ಮೆಯೊಡನೆ ತಮ್ಮ ಅಭಿವೃದ್ಧಿಯನ್ನು ಲೆಕ್ಕಿಸದ ನಿಷ್ಠೆ. ಲಿಯರ್‌ನ ವಿದೂಷಕನು ಮಮತೆ, ನಿಷ್ಠೆಗಳು ಬೆರೆತ ಸೇವಕ ಮಾತ್ರವಲ್ಲ; ಒಂದು ರೀತಿಯಲ್ಲಿ ಲಿಯರ್‌ನ ಮೂರ್ಖತನಕ್ಕೆ ನುಡಿಗನ್ನಡಿಯನ್ನು ಹಿಡಿಯುವ ವಿವೇಕಿಯೆಂದೇ ಹೇಳಬಹುದು.

# ೫. ಹದಿನೇಳನೆಯ ಶತಕದ ಇಂಗ್ಲೀಷ ಹಾಸ್ಯ ಸಾಹಿತ್ಯ ಮತ್ತು ವಿಡಂಬನ ಸಾಹಿತ್ಯ

ಈ ಶತಕಕ್ಕೆ ಇನ್ನೊಂದು ಹೆಸರು "ಮಿಲ್ಟನ್ ಮತ್ತು ಡ್ರಾಯಡನ್"ರ ಸಾಹಿತ್ಯಯುಗ. ಈ ಯುಗದ ಹಾಸ್ಯ ಹಾಗೂ ವಿಡಂಬನ ಸಾಹಿತ್ಯದಲ್ಲಿ ಹೆಚ್ಚಿನ ಲವಲವಿಕೆ, ಮಾನವೀಯತೆಗಳು ಕಂಡು ಬರುವದಿಲ್ಲ. ಇಂಗ್ಲೆಂಡಿನಲ್ಲಿ ಆದ ರಾಜಕೀಯ ಏರುಪೇರುಗಳು ಸಾಹಿತ್ಯದ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಿದವು. ಇದೇ ಕಾಲಕ್ಕೆ ನಿರಂತರವಾಗಿ ಸಾಗಿದ ಇಂಗ್ಲೆಂಡಿನ ಯಾದವೀ ಕಲಹ ಇಂಗ್ಲೀಷ್ ಹಾಸ್ಯ ಸಾಹಿತ್ಯದ ಪ್ರಗತಿಗೆ ಅಡ್ಡಿಯನ್ನುಂಟುಮಾಡಿತು. ಇಂಗ್ಲೆಂಡಿನಲ್ಲಿ ಜನತಂತ್ರದ ದಿನಗಳು ಮುಗಿದು ಹೋಗಿ ಅರಸೊತ್ತಿಗೆ ಪುನಃ ಪ್ರತಿಷ್ಠಾಪನೆಯಾದಾಗ ಇಂಗ್ಲೀಷ್ ಹಾಸ್ಯ ಸಾಹಿತ್ಯದ ಬೆಳವಣಿಗೆ ಮತ್ತಷ್ಟು ಕುಂಠಿತವಾಯಿತು. ಈ ಶತಕದ ಸಾಹಿತ್ಯದಲ್ಲಿ ಹಾಸ್ಯಕ್ಕಿಂತ ವಿಡಂಬನೆಯೇ ಹೆಚ್ಚು.

ಇದೇ ಯುಗದಲ್ಲಿ ಬೆಳೆದು ಬಂದ ಆಧ್ಯಾತ್ಮಿಕ ಸಂಪ್ರದಾಯದ ಕಾವ್ಯದಲ್ಲಿ ಚತುರೋಕ್ತಿಗಳನ್ನು ಧಾರಾಳವಾಗಿ ಉಪಯೋಗಿಸಲಾಗಿದೆ. ಈ ಸಂಪ್ರದಾಯದ ಅಗ್ರಗಣ್ಯ ಕವಿ ಜಾನ್ ಡನ್. ಅವನ "ಆಧ್ಯಾತ್ಮಿಕ" ಭಾವಗೀತೆಗಳಲ್ಲಿ ಚತುರೋಕ್ತಿ, ವಿನೋದಪೂರ್ಣ ಹಾಗೂ ಚಮತ್ಕಾರಿಕ ವಿಚಿತ್ರ ಕಲ್ಪನೆಗಳು

ಕಂಡುಬರುವವು. ಅವನು ಕೆಲವು ವಿಡಂಬನಾತ್ಮಕ ಪದ್ಯಗಳನ್ನೂ ಬರೆದಿದ್ದಾನೆ. ಈ ವಿಡಂಬನೆಗಳು ಧಾರ್ಮಿಕ ಸ್ವಾತಂತ್ರ್ಯ ಅರಮನೆಗಳಲ್ಲಿಯ ಹುಡುಗಾಟದ ಜೀವನ ವ್ಯವಹಾರ, ಪಟ್ಟಣಿಗರ ಹವ್ಯಾಸಿ ಜೀವನ, ಬಡಜನರ ತಕರಾರುಗಳ ಬಗ್ಗೆ ಬರೆಯಲ್ಪಟ್ಟಿವೆ. "ಆಧ್ಯಾತ್ಮಿಕ" ಶೈಲಿಯ ಕವಿಗಳೂ ಕೂಡ ತಮ್ಮ ಪದ್ಯಸಾಹಿತ್ಯದಲ್ಲಿ ವಿಡಂಬನೆ ಹಾಗೂ ಚತುರೋಕ್ತಿಗಳನ್ನು ಪ್ರಯೋಗಿಸಿದ್ದಾರೆ. ಅಂಡ್ರ್ಯೂ ಮಾರ್ವೆಲ್‌ನ ಕವಿತೆಗಳಲ್ಲಿ ವಿಡಂಬನೆ ಹೆಚ್ಚಾಗಿದ್ದಂತೆ, ಹೆನ್ರಿ ವಾಂಘಾನ್‌ನ ಕವಿತೆಗಳಲ್ಲೂ ಕೂಡ ವಿಡಂಬನೆ ಸಾಕಷ್ಟಿದೆ. ಈ ಶತಕಕ್ಕೆ ಸೇರಿದ ಫಿಲಿಫ್ ಮ್ಯಾಸಿಂಜರ್ ವಿನೋದ ನಾಟಕಕಾರ. ಈತನ ಜಾಕೋಬಿಯನ್, ಸಾಂಪ್ರದಾಯಕ ವೈನೋದಿಕೆಗಳು ಮನುಷ್ಯನ ವೈಲಕ್ಷಣಗಳನ್ನು ತೋರಿಸುತ್ತವೆ.

ಈ ಯುಗದ ಶ್ರೇಷ್ಠ ಕವಿ ಜಾನ್ ಮಿಲ್ಟನ್‌ನ ರಚನೆಗಳಲ್ಲಿ ಹಾಸ್ಯ ಸಾಹಿತ್ಯವನ್ನೇನೂ ಕಾಣಲಾರೆವು. ಆದರೆ ಈತ ರಚಿಸಿದ "ಪದ್ಯರೂಪಿ ಹರ್ಷ ನಾಟಕ" "comus" ತಕ್ಕಮಟ್ಟಿಗೆ ಅವನ ಗಂಭೀರವಾದ ಹಾಸ್ಯ ಶೈಲಿಯನ್ನು ಪ್ರಕಟಪಡಿಸುತ್ತದೆ. ಇವನು ಬರೆದ ವಿಡಂಬನಾತ್ಮಕ ಗದ್ಯ ಸಾಹಿತ್ಯದಲ್ಲಿ ಧಾರ್ಮಿಕ ಸಮಸ್ಯೆಗಳು ಚರ್ಚಿಸಲ್ಪಟ್ಟಿವೆ. ಇಂಗ್ಲೆಂಡಿನ ಚರ್ಚುಗಳಲ್ಲಿಯ ಪಾದ್ರಿಗಳ ವಿಲಾಸೀ ಜೀವನವನ್ನು ಮಿಲ್ಟನ್ ತನ್ನ ಗದ್ಯಸಾಹಿತ್ಯದಲ್ಲಿ ವಿಡಂಬನೆಗೈದಿದ್ದಾನೆ. ಈ ಯುಗದ ಗದ್ಯ ಸಾಹಿತಿ ಥಾಮಸ್ ಬ್ರೌನ್‌ನ ಕೃತಿಗಳಲ್ಲಿ ಚತುರೋಕ್ತಿಯೇ ಎದ್ದು ಕಾಣುತ್ತದೆ. ಜಾನ್ ಕ್ಲೀವ್‌ಲ್ಯಾಂಡ್ ಮತ್ತೊಬ್ಬ ವಿಡಂಬನಕಾರ. ಈತನ ಪದ್ಯ ಸಾಹಿತ್ಯದಲ್ಲಿ ವಿಡಂಬನದ ಜೊತೆಗೆ ಚತುರೋಕ್ತಿಯು

ಉಪಯೋಗಿಸಲ್ಪಟ್ಟಿದೆ. ಸಕಲಿಂಗ್, ಹೆರಿಕ್ ಹಾಗೂ ಕ್ಯಾರ್ಲ್ಯೂರ ಭಾವಗೀತೆಗಳಲ್ಲಿ ವಿನೋದ ಹಾಗೂ ಹಾಸ್ಯಗಳು ಸ್ವಲ್ಪ ಪ್ರಮಾಣದಲ್ಲಿ ಸೇರಿಕೊಂಡಿವೆ. ಸರ್ ಥಾಮಸ್ ಉರಖಾರ್ಟನ ಗದ್ಯದಲ್ಲಿ ವ್ಯಂಗ್ಯ ಹಾಗೂ ವಿಡಂಬನೆಗಳು ಉಪಯೋಗಿಸಲ್ಪಟ್ಟಿವೆ.

ಜೇಮ್ಸ್ ಶರ್ಲೆ ಹದಿನೆಂಟನೆಯ ಶತಕದ ಹರ್ಷನಾಟಕಕಾರ. ಇವನು ರಚಿಸಿದ ವಿನೋದ ನಾಟಕಗಳ ತುಂಬ ವಾಸ್ತವಿಕತೆ ತುಂಬಿ ಮನುಷ್ಯನ ವೈಲಕ್ಷಣ ತೋರುತ್ತವೆ.

i) ಡ್ರೈಡನ್ : ಹದಿನೇಳನೆಯ ಶತಕದ ದ್ವಿತೀಯಾರ್ಧದ ಸಾಹಿತ್ಯಲೋಕದ ಧ್ರುವತಾರೆ ಜಾನ್ ಡ್ರೈಡನ್. ಈತ ಈ ಯುಗದ ಖ್ಯಾತ ವಿಡಂಬನಕಾರ. ತನ್ನ ವಿಖ್ಯಾತ ಪದ್ಯಕೃತಿ "ಅಬ್ಸಲಮ್ ಆ್ಯಂಡ್ ಅಚಿಟೋ ಫೆಲ್"ದಲ್ಲಿ ಸಮಕಾಲೀನ ರಾಜಕೀಯ ಚದುರಂಗದ ದಾಳಗಳಾದ ಲಾರ್ಡ ಶಾಫ್ಟಬರಿ ಹಾಗೂ ಡ್ಯೂಕ್ಆಫ್ ಮನ್‌ಮಥ್‌ರ ಸ್ವಾರ್ಥ ಲೋಲುಪ ಚಟುವಟಿಕೆಗಳನ್ನು ವಿಡಂಬನೆಗೈದಿದ್ದಾನೆ. "ಮ್ಯಾಕ್ ಫ್ಲ್ಯಾಕನೋ" ಇವನ ಇನ್ನೊಂದು ವಿಡಂಬನಾತ್ಮಕ ಕಾವ್ಯ. ಈ ಕೃತಿಯಲ್ಲಿ ವೈಯಕ್ತಿಕ ವಿಡಂಬನೆ ಇದೆ. ತನ್ನ ಸಮಕಾಲೀನ ಕವಿ ಥಾಮಸ್ ಶಾಡವೆಲ್‌ನನ್ನು ಕಟುವಾಗಿ ವಿಡಂಬನೆಗೈದಿದ್ದಾನೆ. ಈತನು ತನ್ನ ಇನ್ನೊಂದು ವಿಡಂಬನಕಾವ್ಯ "ದಿ ಮೆಡಲ್"ದಲ್ಲಿ ಶಾಫ್ಟಬರಿಯ ವಿಷಯವಾಗಿ ತನಗಿದ್ದ ದ್ವೇಷದ ಕಿಡಿಯನ್ನು ಕಾರಿದ್ದಾನೆ. ತನ್ನ ಇನ್ನೊಂದು ವಿಡಂಬನ ಕಾವ್ಯ "ದಿ ಹೌಂಡ್ ಆ್ಯಂಡ್ ದಿ ಪ್ಯಾಂಥರ್"ದಲ್ಲಿ ದಂತಕಥೆಯ ಮೂಲಕ ಪ್ಯೂರಿಟನ್ ಧರ್ಮ

ದವರನ್ನು ವಿಡಂಬನಗೈದಿದ್ದಾನೆ. ಡ್ರೈಡನ್‌ನ ವಿಡಂಬನ ಕಲೆಯಲ್ಲಿ ನಿಷ್ಣಾತ. ಈತನ ವಿಡಂಬನ ಶೈಲಿ ಕೀಳುಮಟ್ಟದ ಹಾಸ್ಯಕ್ಕಿಳಿದಿಲ್ಲ. ಏಕೆಂದರೆ ಅದರಲ್ಲಿ ಮಾನವೀಯತೆ ಅಡಗಿದೆ; ಹಾಗೂ ಜುವೆನಾಲ್‌ನ ವಿಡಂಬನ ಯುಕ್ತಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಇವನ ವಿಡಂಬನಾತ್ಮಕ ಪಾತ್ರಗಳು ನಿಜಕ್ಕೂ ನಮ್ಮ ಮನಸೆಳೆಯುತ್ತವೆ. ನ್ಯಾಯಾನ್ಯಾಯಗಳ ಪರಿಶೀಲನೆ ಹಾಗೂ ದೃಷ್ಟಿಗಳೇ ಡ್ರೈಡನ್‌ನ ಶೈಲಿಯ ವೈಶಿಷ್ಟ್ಯಗಳು ಕ್ಲಾಸಿಕಲ್ ಸಂಪ್ರದಾಯಕ್ಕಿಂತಲೂ ರೊಮ್ಯಾಂಟಿಕ್ ಸಂಪ್ರದಾಯದ ಛಾಯೆಯನ್ನು ಇವನಲ್ಲಿ ಕಾಣಬಹುದು. ಇಂಗ್ಲೀಷ್ ಸಾಹಿತ್ಯ ಕ್ಷೇತ್ರದಲ್ಲಿ ವಿಡಂಬನೆಗೆ ಮಹತ್ವದ ಸ್ಥಾನ ದೊರಕಿಸಿ ಕೊಟ್ಟವರಲ್ಲಿ ಡ್ರೈಡನ್ ಮೊದಲಿಗ. ವಿಡಂಬನ ಕಲೆಯನ್ನು ಹೆಚ್ಚು ಸುಸಂಸ್ಕೃತವನ್ನಾಗಿಯೂ ಹೊಳಪಿನದಾಗಿಯೂ ಮಾಡಿದವರಲ್ಲಿ ಡ್ರೈಡನ್ ಪ್ರಮುಖ. "ಮ್ಯಾಕ್ ಫ್ಲ್ಯಾಕನೋ" ಉದಾತ್ತ ಶೈಲಿಯ ವಿಕಟಾನುಕರಣವಾಗಿದೆ. ಈ ವಿಕಟ ಕವಿ ನಾಟಕಕಾರನೂ ಕೂಡ ಆಗಿದ್ದಾನೆ. ಈತನು ಬರೆದ "ಮ್ಯಾರೇಜ್ ಎ.ಲಾ. ಮೋಡ್" ಪ್ರೇಮಾಲಾಪಗಳ ವಿನೋದಪೂರ್ಣ ಕಲಸು ಮೇಲೋಗರ. ರೋಮ್ ಸಾಮ್ರಾಜ್ಯದ ಕಾಲದಲ್ಲಿ ವಿಡಂಬನೆಗಿದ್ದ ಉಚ್ಚಸ್ಥಾನವನ್ನು ಡ್ರೈಡನ್ ಹದಿನೇಳನೆಯ ಶತಕದಲ್ಲಿ ತಿರುಗಿ ದೊರಕಿಸಿ ಕೊಟ್ಟಿದ್ದಾನೆ.

ii) **ವಿಲಿಯಂ ಕಾಂಗ್ರೀವ್** :ಈತನು ರಾಜಪ್ರಭುತ್ವದ ಪುನರುತ್ಥಾನದ ಕಾಲದಲ್ಲಿ ವೈನೋದಿಕೆಗಳನ್ನು ಜನಪ್ರಿಯಗೊಳಿಸಿದ ವಿನೋದ ನಾಟಕಕಾರ. ಮೇಲ್ದರ್ಜೆಯ, ಮಧ್ಯಮ ವರ್ಗದ ಜನರ ಜೀವನವನ್ನು ಇವನ ನಾಟಕಗಳು ಪ್ರತಿಬಿಂಬಿ

ಸುತ್ತವೆ. ಮನುಷ್ಯನ ವಿಲಕ್ಷಣ ಸ್ವಭಾವ ತೋರುವ ಹರ್ಷ ನಾಟಕಗಳನ್ನು ಕಾಂಗ್ರೀವ್ ಉನ್ನತ ಮಟ್ಟಕ್ಕೆ ಒಯ್ದನು. ತನ್ನ ವೈನೋದಿಕೆಗಳಲ್ಲಿ ಅವನು ಚತುರೋಕ್ತಿಗಳನ್ನು ಧಾರಾಳವಾಗಿ ಉಪಯೋಗಿಸಿದ್ದಾನೆ. ಅವನ ಇನ್ನೂ ಕೆಲವು ನಾಟಕಗಳಲ್ಲಿ ತಮಾಷೆಯು ಕೂಡ ಕಂಡುಬರುತ್ತದೆ. ಅದೂ ಅಲ್ಲದೆ ಕೆಲವು ವೈನೋದಿಕೆಗಳಲ್ಲಿ "ಸೋಫೋಕ್ಲೀಸ್" ಮಾದರಿಯ ವ್ಯಂಗ್ಯ ಕೂಡಿ ಕೊಂಡಿದೆ. ಫ್ರೆಂಚ್ ಹಾಸ್ಯ ಸಾಹಿತ್ಯದಲ್ಲಿ "ವ್ಹಿಸ್ ಕಾಮಿಕ್" ಅಂಶವನ್ನು ಕೂಡ ಇವನ ವೈನೋದಿಕೆಗಳಲ್ಲಿ ಕಾಣಬಹುದು.

ರಾಜ ಪ್ರಭುತ್ವದ ಪುನರುತ್ಥಾನ ಕಾಲದಲ್ಲಿ ಪ್ರಚಲಿತವಾಗಿದ್ದ ವಿಲಕ್ಷಣ ತೋರುವ ಹರ್ಷ ನಾಟಕಗಳಲ್ಲಿ ಪ್ರಣಯದ ಸಮಸ್ಯೆ ಗಳೇ ಬಹುವಾಗಿ ತುಂಬಿವೆ. ಈ ಹರ್ಷ ನಾಟಕಗಳಲ್ಲಿ ಚತು ರೋಕ್ತಿಯಿಂದ ಕೂಡಿದ ಗದ್ಯವು ಕಂಡು ಬರುತ್ತದೆ. ವ್ಯಂಗ್ಯ ಹಾಗೂ ವಿಡಂಬನೆಗಳು ಈ ಹರ್ಷ ನಾಟಕಗಳ ಅವಿಭಾಜ್ಯ ಅಂಗಗಳು. ಇವುಗಳಲ್ಲಿ ಕಂಡುಬರುವ ಪಾತ್ರಗಳು ಸಮಾಜದ ಪ್ರತಿನಿಧಿರೂಪಗಳು. ಅಲ್ಲದೆ ಈ ನಾಟಕಗಳು ಕೀಳುಮಟ್ಟದವು; ಅನೀತಿ ವಿಷಯಗಳಿಂದ ಹಾಗೂ ಅಶ್ಲೀಲತೆಗಳಿಂದ ಕೂಡಿ ದ್ದಾಗಿವೆ ಎಂಬ ಟೀಕೆಯೂ ಕೇಳಿಬರುತ್ತದೆ. ವಿಲಿಯಂ ವೈಕರ್ಲೀ, ಸರ್ ಜಾನ್ ವಾನ್‌ಬ್ರಗ್, ಜಾರ್ಜ ಫಾಕನರ್, ಹಾಗೂ ಥಾಮಸ್ ಶಾಡ್‌ವೆಲ್‌ರು ಈ ಯುಗದ ಹರ್ಷ ನಾಟಕ ಗಳ ಆದ್ಯ ಪ್ರವರ್ತಕರು. ಶಾಡ್‌ವೆಲ್‌ನ ನಾಟಕಗಳಲ್ಲಿ ಚತು ರೋಕ್ತಿ ಬಳಸಲ್ಪಟ್ಟಿದೆ. ವೈಕರ್ಲೀನ ಹರ್ಷ ನಾಟಕಗಳಲ್ಲಿಯು ಹಾಸ್ಯವು ಒರಟಾಗಿದೆ. ಅವನು ಜಾನ್‌ಸನ್‌ನ ನಾಟಕಗಳನ್ನೇ

ಅನುಕರಿಸಿದ್ದಾನೆ. ಅವನ ವಿನೋದ ನಾಟಕಗಳಲ್ಲಿ ಗಾಂಭೀರ್ಯವೇ ಹೆಚ್ಚಾಗಿ ಕಂಡುಬರುತ್ತದೆ.

ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಈ ಬಗೆಯ ವೈನೋದಿಕೆಗಳು ಮಹತ್ವದ ಮೈಲುಗಲ್ಲುಗಳು. ಚತುರೋಕ್ತಿಯುಕ್ತ ಈ ಹರ್ಷ ನಾಟಕಗಳು ಬೌದ್ಧಿಕ ಹಾಸ್ಯ ಶೈಲಿಯನ್ನು ಬಿಂಬಿಸುತ್ತಿವೆ. ಇವುಗಳಲ್ಲಿ ಭಾವನೆಗಳಿಗೆ ಸ್ಥಾನವೇ ಇಲ್ಲ. ಶ್ರೀಮಂತ ವರ್ಗದ ಜನರ ಆಮೋದ, ಪ್ರಮೋದ ಹಾಗೂ ಕಾಮಕೇಳಿಗಳನ್ನು ವ್ಯಂಗ್ಯವಾಗಿ ಇವುಗಳಲ್ಲಿ ಟೀಕಿಸಲಾಗಿದೆ. ವಿಶೇಷವಾಗಿ ಇಂಗ್ಲೀಷ್ ಹಾಸ್ಯ ನಾಟಕಗಳು ಆ ದೇಶದ ಸಾಮಾಜಿಕ ಸ್ಥಿತ್ಯಂತರಗಳ ಪ್ರತಿಬಿಂಬಗಳಾಗಿವೆಯೆಂದೇ ಹೇಳಬಹುದು. ಈ ಮಾತು ಪುನರುತ್ಥಾನ ಯುಗದ ವೈನೋದಿಕೆಗಳಿಗೂ ಅನ್ವಯವಾಗುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಈ ಯುಗಕ್ಕೆ ಸೇರಿದ ಜಾರ್ಜ ಎಥರೀಜ್ ಒಬ್ಬ ಹರ್ಷ ನಾಟಕಕಾರ. ಇವನ ನಾಟಕಗಳು ವಿಡಂಬನಾತ್ಮಕವಾಗಿವೆ ಹಾಗೂ ಸಮಕಾಲೀನ ಸಮಾಜಕ್ಕೆ ಕನ್ನಡಿಗಳಾಗಿವೆ. ವಿಲಿಯಂ ವೈಕರ್ಲೀ ತನ್ನ ವೈನೋದಿಕೆಗಳಲ್ಲಿ ವಿಡಂಬನೆ ಬಳಸಿದ್ದಾನೆ. ಸಮಕಾಲೀನ ಫ್ರೆಂಚ್ ಹಾಗೂ ಸ್ಪೇನ್ ದೇಶಗಳ ಹಾಸ್ಯ ನಾಟಕಗಳು ಇಂಗ್ಲೀಷ್ ನಾಟಕಕಾರರ ಮೇಲೆ ಪರಿಣಾಮವನ್ನುಂಟು ಮಾಡಿದವು. ಅದರಲ್ಲಿಯೂ ಮೊಲಿಯರ್‌ನ ಪ್ರಭಾವ ಇಂಗ್ಲೀಷ್ ಹಾಸ್ಯ ನಾಟಕಕಾರರ ಮೇಲೆ ಆದದ್ದು ಕಂಡುಬರುತ್ತದೆ ಮನುಷ್ಯನ ವಿಲಕ್ಷಣ ಸ್ವಭಾವ ತೋರುವ ಈ ಹರ್ಷ ನಾಟಕಗಳ ಕಥಾವಸ್ತು ಬಹಳೇ ಶಿಥಿಲವಾದದ್ದಾಗಿರುತ್ತದೆ; ಹಾಗೂ ಒಂದೇ ಬಗೆಯ ಪಾತ್ರಗಳಿಂದ ತುಂಬಿರುತ್ತದೆ. ಹಾಜರಿ ಜವಾಬಿ ಅಥವಾ ಸಿದ್ಧ ಚತುರ

ಪ್ರತ್ಯುತ್ತರಗಳು ಪಾತ್ರಗಳ ಚತುರ ಸಂಭಾಷಣೆಗಳಲ್ಲಿ ಹೆಣೆಯಲ್ಪಟ್ಟಿವೆ. ಈ ವೈನೋದಿಕೆಗಳಲ್ಲಿ ಕಂಡು ಬರುವ ಗದ್ಯವು ನೀರಸ ಹಾಗೂ ಕೃತ್ರಿಮವಾಗಿದೆ. ಕಾಂಗ್ರೀವ್‌ನ ವೈನೋದಿಕೆಗಳಲ್ಲಿರುವ ಪಾತ್ರಗಳು ಜಾನ್‌ಸನ್‌ನ ನಾಟಕಗಳ ಪಾತ್ರಗಳಂತೆ ವೈಲಕ್ಷಣಗಳನ್ನು ಪ್ರಕಟಪಡಿಸುತ್ತವೆ. ಆ ಪಾತ್ರಗಳ ಹೆಸರುಗಳೇ ಅವುಗಳ ಗುಣಗಳನ್ನು ಎತ್ತಿ ತೋರಿಸುತ್ತವೆ. ಈ ಕಾಲಕ್ಕೆ ಸಂಬಂಧಿಸಿದ ಜಾನ್ ಒಲ್ಡಾಮ್ ಖ್ಯಾತ ವಿಡಂಬನಕಾರ. ಇವನು ಜುವೆನಾಲ್‌ನ ಸಂಪ್ರದಾಯಕ್ಕೆ ಸೇರಿದವನು. ಇದೇ ಸಾಲಿಗೆ ಸೇರಿದ ವಿಡಂಬನಕಾರ ಸ್ಯಾಮುಯಲ್ ಬಟ್ಲರನು ಪ್ಯುರಿಟನ್ ಪಂಥವನ್ನು ತನ್ನ ಪ್ರಸಿದ್ಧ ಕಾವ್ಯ “ಹುಡಿಬ್ರಾಸ್”ದಲ್ಲಿ ವಿಡಂಬನಗೈದಿದ್ದಾನೆ. ಈ ಕೃತಿ ಉದಾತ್ತ ಶೈಲಿಯ ವಿಕಟಾನುಕರಣ. ಸ್ಪೇನ್ ದೇಶದ ವಿಡಂಬನಕಾರ ಸರ್ವಂಟೀಸ್‌ನ “ಡಾನ್ ಕ್ವಿರ್ಷೋಟ್”ದ ವಿಡಂಬನ ಶೈಲಿಯನ್ನೇ ಇದು ಹೋಲುತ್ತದೆ. ವ್ಯಕ್ತಿತ್ವ, ವೈಚಿತ್ರ್ಯ ತೋರುವ ಹರ್ಷ ನಾಟಕಗಳ ರಚನೆ ಹಾಗೂ ಬೆಳವಣಿಗೆಗೆ ಡ್ರೈಡನ್‌ನ ಕಾಲ ಪ್ರೋತ್ಸಾಹಕರವಾಗಿತ್ತು. ಎಥ್ರೀಜ್‌ನ ವೈನೋದಿಕೆಗಳು ಅನೀತಿ ಹಾಗೂ ಅಶ್ಲೀಲ ಕಥಾವಸ್ತು, ಕ್ಷುಲ್ಲಕ ವಿನೋದ ದೃಶ್ಯಗಳಿಂದ ತುಂಬಿವೆ. ವೈಕರ್ಲೀನ ವಿನೋದ ನಾಟಕಗಳಲ್ಲಿ ಪರಿಹಾಸ ಹಾಗೂ ಹುಚ್ಚು ತಮಾಷೆಗಳು ಕಂಡು ಬರುತ್ತವೆ. ಕಾಂಗ್ರೀವ್‌ನ ನಾಟಕಗಳಲ್ಲಿ ವ್ಯಂಗ್ಯ ಚತುರೋಕ್ತಿಗಳು ತುಂಬಿಕೊಂಡಿವೆ. ಈ ಯುಗದ ವೈನೋದಿಕೆಗಳಲ್ಲಿ ಕಂಡು ಬರುವ ಪಾತ್ರಗಳು ವಿಕಟ ಚಿತ್ರಗಳಾಗಿವೆ.

## ೬. ಹದಿನೆಂಟನೆಯ ಶತಕದ ಹಾಸ್ಯ ಮತ್ತು ವಿಡಂಬನ ಸಾಹಿತ್ಯ

ಈ ಶತಕದ ಹಾಸ್ಯ ಮತ್ತು ವಿಡಂಬನ ಸಾಹಿತ್ಯದಲ್ಲಿ ಪ್ರಭೇದಗಳನ್ನು ಮಾಡಲಾಗಿದೆ. ಮೊದಲನೆಯದಾಗಿ ೧೭೦೦–೧೭೫೦ರ ವರೆಗಿನ ಕಾಲಮಾನವನ್ನು ಅಗಸ್ಟನ್‌ಯುಗ ಅಥವಾ ಪೋಪ್‌ನ ಕಾಲದ ಹಾಸ್ಯ ಮತ್ತು ವಿಡಂಬನ ಸಾಹಿತ್ಯ ವೆಂದು ಹೆಸರಿಸಲಾಗಿದೆ. ಎರಡನೆಯದಾಗಿ ೧೭೫೦–೧೮೪೮ರ ವರೆಗಿನ ಕಾಲಮಾನವನ್ನು ಸಂಧಿಕಾಲ ಅಥವಾ ಜೋನ್‌ಸನ್‌ನ ಯುಗದ ಹಾಸ್ಯ ಮತ್ತು ವಿಡಂಬನ ಸಾಹಿತ್ಯವೆಂದು ಕರೆಯಲಾಗಿದೆ.

### I) ಅಗಸ್ಟನ್ ಮತ್ತು ಪೋಪನ ಕಾಲದ ಹಾಸ್ಯ ಮತ್ತು ವಿಡಂಬನ ಸಾಹಿತ್ಯ

ಈ ಸಾಹಿತ್ಯವು ಹದಿನೆಂಟನೆಯ ಶತಕದ ಮೊದಲ ಭಾಗದ ಇಂಗ್ಲಂಡಿನ ಸಮಾಜದಲ್ಲಿಯ ಲೋಪ–ದೋಷಗಳನ್ನು ಎತ್ತಿ ತೋರಿಸುವದಲ್ಲದೆ, ಜನಸಾಮಾನ್ಯರಿಗೆ ಜ್ಞಾನ, ಸಂಸ್ಕೃತಿ, ನಡೆ ನುಡಿಗಳ ನಯ, ಜೀವನದ ಸರಳತೆ ಮುಂತಾದವುಗಳನ್ನು ವಿದಿತಪಡಿಸುವ ಕಾರ್ಯವನ್ನು ಕೂಡ ಕೈಕೊಂಡಿತು. ಸಮಾಜ ಸುಧಾರಣೆಯ ಕಾರ್ಯವನ್ನು ಈ ಕಾಲದಲ್ಲಿ ಬೆಳೆದು ಬಂದ ಪ್ರಬಂಧ ಹಾಗೂ ಲಲಿತ ಪ್ರಬಂಧಗಳು ಪ್ರಾರಂಭಿಸಿದವು. ಈ

ಸಾಹಿತ್ಯ ಯುಗದ ಧೃಷ್ಟಾರ ಹಾಗೂ ಪ್ರತಿನಿಧಿಯೇ ಅಲೆಕ್ಝಾಂಡರ್ ಪೋಪ್. ಪದ್ಯ ಸಾಹಿತ್ಯಕ್ಕಿಂತಲೂ ಗದ್ಯ ಸಾಹಿತ್ಯವೇ ಹೆಚ್ಚಿನ ಸ್ಥಾನಮಾನ ಹಾಗೂ ಜನಪ್ರಿಯತೆ ಪಡೆದ ಕಾಲವಿದು. ಹಾಸ್ಯಶೈಲಿಗಿಂತಲೂ ವಿಡಂಬನಾ ಶೈಲಿಯೇ ಈ ಯುಗದ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿದೆ. ಅಲೆಕ್ಝಾಂಡರ್ ಪೋಪ್ ಈ ಸಾಹಿತ್ಯ ಯುಗದ ಖ್ಯಾತ ವಿಡಂಬನಕಾರ.

ಈ ಕಾಲದ ಸಾಹಿತ್ಯದಲ್ಲಿ ವಿವಿಧ ಪ್ರಕಾರದ ಗದ್ಯ ಸಾಹಿತ್ಯ ಬೆಳೆದು ಬಂದಿತು. ಧಾರ್ಮಿಕ, ರಾಜಕೀಯ ಹಾಗೂ ತತ್ವಜ್ಞಾನ ಪ್ರೇರಿತ ಗದ್ಯಸಾಹಿತ್ಯ ಪ್ರಕಾರಗಳು ಇದರಲ್ಲಿ ಮುಖ್ಯವಾದವು ಗಳು. ಈ ಎಲ್ಲ ಗದ್ಯಸಾಹಿತ್ಯ ವಿಡಂಬನೆಯಿಂದ ಹರಿತ ವಾಗಿದೆ. ಜೊನಾಥನ್ ಸ್ವಿಫ್ಟ್ ಬರೆದ "ದಿ ಡ್ರೇಪಿಯರ್ಸ್ ಲೆಟರ್ಸ್" ಎಂಬುದು ರಾಜಕೀಯ ವಿಷಯಕ್ಕೆ ಸಂಬಂಧಿಸಿದ ವಿಡಂಬನಾಗದ್ಯ. "ಟೇಲ್ ಆಫ್ ದಿ ಟಬ್" ಕೂಡ ಇದೇ ಲೇಖಕನ ವಿಡಂಬನಾಪೂರಿತ ಧಾರ್ಮಿಕ ವಿಚಾರಗಳನ್ನು ಪ್ರತಿ ಬಿಂಬಿಸುವ ಗ್ರಂಥ. ಜೊಸೆಫ್ ಆಡಿಸನ್, ರಿಚರ್ಡ್ ಸ್ಟೀಲ್, ಡೇನಿಯಲ್ ಡಿಫೋ, ಸ್ಯಾಮ್ಯುಯಲ್ ಬಟ್ಲರ್ ಮೊದಲಾದ ಲೇಖಕರು ಇಂಗ್ಲೀಷ್ ಗದ್ಯ ಸಾಹಿತ್ಯವನ್ನು ಬೆಳೆಸಿದರು; ಹಾಗೂ ವಿಡಂಬನಾ ಉಪಯೋಗವನ್ನು ಮಾಡಿತೋರಿಸಿದರು. ಈ ಯುಗದಲ್ಲಿ ಬರೆಯಲ್ಪಟ್ಟ ಕೆಲವು ನಾಟಕಗಳೂ ಇವೆ. ಅವು ಅಷ್ಟು ಜನಪ್ರಿಯವಾಗಿಲ್ಲ.

ಆಗಸ್ಟನ್ ಯುಗದ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನ ಶೈಲಿಗಳು ಬೆಳೆದು ಬಂದ ರೀತಿ ವೈಶಿಷ್ಟ್ಯಪೂರ್ಣವಾಗಿದೆ. ಹಾಸ್ಯ

ಸಾಹಿತ್ಯವು ವೈವಿಧ್ಯಮಯ ವೈಖರಿ ಮತ್ತು ಮೇಲ್ಮೆಗಳನ್ನು ಪ್ರಕಟಿಸಿದ ಯುಗವಿದು. ಪೋಪ್‌ನ ಕಾಲದಲ್ಲಿ ಲಂಡನ್ನಿನಲ್ಲಿದ್ದ "ಗ್ರಬ್ ಸ್ಟ್ರೀಟ್ ಕ್ಲಬ್" ಅವನ ಸಮಕಾಲೀನ ಲೇಖಕರ, ಕವಿಗಳ ಹಾಗೂ ರಾಜಕೀಯ ಧುರೀಣರ ವಿಲಾಸಿ ತಂಗುಮನೆ; ಅವರೆಲ್ಲರೂ ಅಲ್ಲಿಕಲೆತು ರಾಜಕೀಯ, ಸಾಹಿತ್ಯಿಕ ವಿಷಯಗಳ ಕುರಿತು ಚರ್ಚಿಸುತ್ತಿದ್ದರು. ಸ್ಟೀಲ್, ಆಡಿಸನ್, ಡಿಫೋ ಮೊದಲಾದವರು ವೃತ್ತ ಪತ್ರಿಕಾ ಕರ್ತರಾಗಿ ಹಾಸ್ಯಕಾರ ಹಾಗೂ ವಿಡಂಬನಕಾರರಾಗಲು ಈ "ಗ್ರಬ್ ಸ್ಟ್ರೀಟ್ ಕ್ಲಬ್" ತನ್ನದೇ ಆದ ಪ್ರಮುಖ ಪಾತ್ರವನ್ನು ವಹಿಸಿತ್ತು. ಇಂಗ್ಲೀಷ್ ಸಾಹಿತ್ಯದಲ್ಲಿ ಹಾಸ್ಯದ ಹೊಸ ಸಂಶೋಧನೆಗಳು ಹಾಗೂ ವಿಚಾರಧಾರೆಗಳು ಈ ಕ್ಲಬ್‌ನಿಂದಲೇ ಉಗಮವಾದವು.

ಇಂಗ್ಲಂಡಿನ ರಾಜಕೀಯ ವಿದ್ಯಮಾನಗಳು ಕೂಡ ಇಂಗ್ಲೀಷ್ ಹಾಸ್ಯ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಇಂಗ್ಲಂಡಿನ ರಾಜಕೀಯ ಪಕ್ಷಗಳಾದ ವ್ಹಿಗ್ಸ್ ಮತ್ತು ಟೋರಿಗಳ ವೈರತ್ವ, ಮೂರ್ಖತನದ ಪೈಪೋಟಿ ಹಾಗೂ ಧುರೀಣರ ಪರಸ್ಪರ ಅಟ್ಟಹಾಸಗಳ ನಿಂದೆಯನ್ನು ಮತ್ತು ವಿಡಂಬನವನ್ನು ಈ ಕಾಲದ ಹಾಸ್ಯ ಸಾಹಿತಿಗಳು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ. ಈ ಯುಗದ ಹಾಸ್ಯ ಮತ್ತು ವಿಡಂಬನೆಗಳು ಅಗಾಧ ವಿಕಾಸವನ್ನು ಹೊಂದಿದವು. ಈ ಯುಗದ ಹಾಸ್ಯ ಸಾಹಿತ್ಯ ಆ ಕಾಲದ ಸಂಸ್ಕೃತಿ ಮತ್ತು ಸಾಮಾನ್ಯ ಜನ ಜೀವನಗಳನ್ನು ಮೈಗೂಡಿಸಿಕೊಂಡು ವಿಕಾಸ ಹೊಂದಿತ್ತೇ ಹೊರತು ಬೇರೆ ದೇಶಗಳಿಂದ ಪ್ರಭಾವಿತವಾಗಿ ಬೆಳೆದದ್ದಲ್ಲ.

i) **ಡೇನಿಯಲ್ ಡಿಫ್ರೋ:** ಕೆಲಮಟ್ಟಿಗೆ ಇವನು ವಿಡಂಬನಕಾರ. ಇವನು ಬರೆದ "ದಿ ಬೊರ್ನ ಇಂಗ್ಲೀಷ್ ಮನ್" ವಿಡಂಬನಕಾವ್ಯ. ಇವನದೇ ಇನ್ನೊಂದು ಕೃತಿ "ಶಾರ್ಟಸ್ಟ್ ವೇ ವಿಥ್ ಡಿ ಸೆಂಟರ್ಸ್" ಕೂಡ ಇಂಗ್ಲೆಂಡಿನ ಚರ್ಚಿನ ವಿಡಂಬನೆ ಗೈದ ಗ್ರಂಥವಾಗಿದೆ. "ದಿ ಲಿಟಲ್ ರೆವ್ಯೂ" ಎಂಬ ಹೆಸರಿನ ನಿಯತಕಾಲಿಕವನ್ನು ಪ್ರಾರಂಭಿಸಿ ತನ್ನ ಕಾಲದ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳ ಲೋಪದೋಷಗಳ ವಿಡಂಬನೆ ಗೈದಿದ್ದಾನೆ. ಈ ನಿಯತಕಾಲಿಕತೆಯೇ ಸ್ಟೀಲ್ ಮತ್ತು ಆಡಿಸನ್‌ರಿಗೆ ಅವರು ಪ್ರಾರಂಭಿಸಿದ ಪತ್ರಿಕೆಗಳಿಗೆ ದಾರಿದೀಪವಾಯಿತು.

ಮನೋವಿಕಾರ, ಉದ್ರೇಕರಹಿತವಾದ ಈ ಯುಗದ ಸಾಹಿತ್ಯ ವಿವೇಚನಾ ಶಕ್ತಿಯಿಂದ ಕೂಡಿದ್ದಾಗಿದೆ. ಈ ತರ್ಕ ಸಮ್ಮತವಾದ ಸಾಹಿತ್ಯ ಯುಗಕ್ಕೆ ವಿಮರ್ಶಕರು "ಶ್ರೇಷ್ಠ ಸಾಹಿತ್ಯಯುಗ" ಎಂದು ಕರೆದಿದ್ದಾರೆ. ಆದ್ದರಿಂದ ಈ ಯುಗದ ಗದ್ಯಸಾಹಿತ್ಯದಲ್ಲಿ ಕಂಡುಬರುವ ವಿಡಂಬನ ಹಾಗೂ ಹಾಸ್ಯ ಶೈಲಿಗಳೆರಡೂ ಶ್ರೇಷ್ಠಮಟ್ಟದ್ದಾಗಿವೆ.

ii) **ರಿಚರ್ಡ ಸ್ಟೀಲ್:** ಡೇನಿಯಲ್ ಡಿಫೋವಿನ "ಲಿಟಲ್ ರೆವ್ಯೂ" ಪ್ರಬಂಧಗಳಿಂದ ಸ್ಫೂರ್ತಿಗೊಂಡು ಈ ಇಂಗ್ಲೀಷ್ ಹಾಸ್ಯ ಮತ್ತು ಲಲಿತ ಪ್ರಬಂಧಕಾರನು "ಟಾಟ್ಲರ್", ಎಂಬ ವರ್ತಮಾನ ಪತ್ರಿಕೆಯನ್ನು ಆರಂಭಿಸಿದನು. ತನ್ನ ಲಲಿತ ಪ್ರಬಂಧಗಳ ಉದ್ದೇಶವನ್ನು ಕೂಡ ಅವನು ಹೀಗೆ ವರ್ಣಿಸಿರು

ವನು– "ಈ ಪತ್ರಿಕೆಯಲ್ಲಿಯ ಲಲಿತಪ್ರಬಂಧಗಳ ಮುಖ್ಯಗುರಿ ಜೀವನದ ಕೃತಕ ಅಂಶಗಳನ್ನು ಬಹಿರಂಗ ಮಾಡುವದು; ಮೋಸ, ಒಣಜಂಭ, ನಟನೆಗಳ ಮುಸುಕುಗಳನ್ನು ಕಿತ್ತೆಸೆಯುವದು; ಉಡುಪು ನಡೆನುಡಿಗಳಲ್ಲಿ ಸಾಮಾನ್ಯವಾದ ಸರಳತೆಯನ್ನು ಬೆಳೆಸುವದು". ಸ್ಟೀಲ್ ಸೌಮ್ಯವಾದೀ ಹಾಸ್ಯಕಾರ. ತನ್ನ ಪ್ರಬಂಧಗಳಲ್ಲಿ ಮಾನವೀಯತೆಯ ಅಂತಃಕರಣ ಭಾವನೆಗಳನ್ನು ಸ್ಫುಟವಾಗಿ ಪ್ರಕಟಿಸಿದ್ದಾನೆ. ರಿಚರ್ಡ್ ಸ್ಟೀಲ್ ಮತ್ತು ಅಡಿಸನ್‌ರು ಲಲಿತಪ್ರಬಂಧರೂಪೀ ನೀತಿಪಾಠಗಳಿಂದ ನೀತಿ ಬೋಧಕರೆಂದೇ ಹೆಸರಾಗಿದ್ದಾರೆ. ಸ್ಟೀಲ್‌ನ ಲಲಿತಪ್ರಬಂಧಗಳಲ್ಲಿ ಕುಚೇಷ್ಟೆ, ಗಂಭೀರವಾದ ನೀತಿ ಬೋಧಕತೆ ಕಂಡು ಬರುತ್ತವೆ. ಅವನು ಬರೆದ ನಾಟಕಗಳು ಭಾವ ವೈನೋದಿಕೆಗಳು. ಅವುಗಳಲ್ಲಿ ತಿಳಿಯಾದ ಹಾಸ್ಯಕ್ಕಿಂತಲೂ ಭಾವಾತಿರೇಕವುಳ್ಳ ನೀತಿಪರತೆಯೇ ಹೆಚ್ಚು ಕಂಡು ಬರುತ್ತದೆ.

ii) **ಜೋಸೆಫ್ ಅಡಿಸನ್ :** ರಿಚರ್ಡ್ ಸ್ಟೀಲ್‌ನಿಂದ ಪ್ರಬಂಧದ ಜೀವಾಳವನ್ನು ಕಂಡುಕೊಂಡು ನೂರಾರು ಪ್ರಬಂಧ ಗಳನ್ನು ಬರೆದ ಪ್ರಭಾವೀ ಹಾಸ್ಯಕಾರನಿವನು. ಒಳ್ಳೆಯ ನೀತಿಯನ್ನು ಉಪದೇಶಿಸುವದರಲ್ಲಿ ಅವನು ಉಪಯೋಗಿಸಿದ ಹಾಸ್ಯ ಸಂಭಾವಿಕತನದ ಹಾಸ್ಯ. ಅವನ ಯಾವ ಒಂದು ಲೇಖನವೂ ಯಾರೊಬ್ಬರ ಮನಸ್ಸನ್ನು ನೋಯಿಸಲಿಲ್ಲ ಎನ್ನು ವದು ಅವನ ಕೀರ್ತಿಯ ಕುರುಹು. ತನ್ನ ಸ್ನೇಹಿತ ಸ್ಟೀಲ್‌ನೊಡ ಗೂಡಿ "ಸ್ಪೆಕ್ಟೇಟರ್" ಪತ್ರಿಕೆಯನ್ನು ಪ್ರಾರಂಭಿಸಿದ. ಅವನ ಹಾಸ್ಯ ಶೈಲಿ ರಮ್ಯ ಹಾಗೂ ಮನೋರಂಜಕವಾದದ್ದು.

ಪಟ್ಟಣ, ಹಳ್ಳಿ, ಸಿಪಾಯಿಗಳ ಗುಂಪು, ವರ್ತಕರ ಸಭೆ, ಪಾದ್ರಿಗಳ ಚರ್ಚ ಮುಂತಾಗಿ ಎಲ್ಲೆಲ್ಲಿ ಅವನು ಹೋದಾಗ ಯಾವ ದೋಷ ಗಳನ್ನು ಕಂಡನೋ ಅವೆಲ್ಲವನ್ನು ಕುರಿತು ತನ್ನ ಪತ್ರಿಕೆಗಳಲ್ಲಿ ವಿವರವಾಗಿ ವಿಶ್ಲೇಷಿಸಿದ್ದಾನೆ. ಹೆಂಗಸರ ಉಡುಪಿನಲ್ಲಿ ಅಸಭ್ಯ ವಾದ ಮಾರ್ಪಾಟಾದರೆ ಅದು ಅವನ ದೃಷ್ಟಿಯಿಂದ ಪಾರಾಗಿ ಹೋಗಲಾರದು. ಈತನು ಮಾಡಿದ ಮೆಚ್ಚುಗೆಯ ಕೆಲಸ ವೆಂದರೆ "ಸರ್ ರೋಜರ್ ಡಿಕವರ್ಲಿ", ಎಂಬ ಕಾಲ್ಪನಿಕ, ಮನೋ ರಂಜಕ ಪಾತ್ರದ ಪರಿಚಯ. ಗಂಭೀರವಾದ ಹಾಸ್ಯ ಶೈಲಿಯಲ್ಲಿ ಈ ಪಾತ್ರ ಅದ್ದಿದಂತಿದೆ. ತನ್ನ ವೈಶಿಷ್ಟ್ಯಪೂರ್ಣ ಹಾಸ್ಯ ಶೈಲಿಯಿಂದ ಈ ಪಾತ್ರದಲ್ಲಿ ಜೀವಕಳೆಯನ್ನು ತುಂಬಿದ್ದಾನೆ. ಕವರ್ಲಿ ಪಾತ್ರಕ್ಕೆ ಸಂಬಂಧಿಸಿದಂತೆ ಸುಮಾರು ಮೂವತ್ತೈದು ಪ್ರಬಂಧಗಳಿವೆ. ಅವನು ಬರೆದ ಲಲಿತ ಪ್ರಬಂಧಗಳು ಲಾಲಿತ್ಯ ಪೂರ್ಣವಾಗಿವೆ; ವೈವಿಧ್ಯಮಯವಾಗಿದ್ದು ಕುತೂಹಲವನ್ನು ಕೆರಳಿಸುವಂಥವುಗಳಾಗಿವೆ. ಅವನು ಬರೆದ ಹರ್ಷನಾಟಕ "ದಿ ಡ್ರುಮರ್" ಬಹಳ ಜನಪ್ರಿಯವಾಗಿದೆ. ಇದೇ ಯುಗದವರಾದ ಜಾರ್ಜ ಬರ್ಕಲೇ, ಲೇಡಿ ಮೇರಿ ವರ್ಟಲೇ ಮಾಂಟೇಗ್, ಅರ್ಲ್ ಆಫ್ ಶಾಫ್ಟಬರಿ ಮೊದಲಾದವರು ತಮ್ಮ ತಿಳಿಹಾಸ್ಯ ಹಾಗೂ ಚತುರೋಕ್ತಿಗಳಿಂದೊಡಗೂಡಿದ ಶೈಲಿಗಳ ಲಲಿತ ಪ್ರಬಂಧ ಹಾಗೂ ಕಥೆಗಳ ಮೂಲಕ ಸಾಹಿತ್ಯ ಕೃಷಿ ಮಾಡಿ ಇಂಗ್ಲೀಷ್ ಹಾಸ್ಯ ಸಾಹಿತ್ಯಕ್ಕೆ ತಮ್ಮ ಕಾಣಿಕೆಗಳನ್ನು ಸಮರ್ಪಿಸಿ ದ್ದಾರೆ. ಅವರ ಕೃತಿಗಳಲ್ಲಿ ಹಾಸ್ಯ ವ್ಯಂಗ್ಯ ಸ್ವಲ್ಪಮಟ್ಟಿಗೆ ಬೆರೆತಿದೆ.

vi) **ಅಲೆಕ್ಸಾಂಡರ್ ಪೋಪ್ :** ಈ ಸಾಹಿತ್ಯ ಯುಗದ ಮುಖ್ಯಕವಿ ಭಾಷ್ಯಕಾರ, ವಿಡಂಬನಕಾರನಾದ ಅಲೆಕ್ಸಾಂಡರ್ ಪೋಪ್ ಬರೆದ "ದಿ ರೇಪ್ ಆಫ್ ದಿ ಲಾಕ್" ಎಂಬ ಅಣಕ ಕಾವ್ಯದಲ್ಲಿ ತನ್ನ ಕಾಲದ ಲಂಡನ್ನಿನ ಜನರ ಕೃತ್ರಿಮ ಜೀವನ ಕ್ರಮವನ್ನು ತೀಕ್ಷ್ಣವಾಗಿ ವಿಡಂಬನಗೈದಿದ್ದಾನೆ. ಇವನು ತಾರ್ಕಿಕ, ವಿವೇಚಕ ಬುದ್ಧಿಮತ್ತೆಯಿಂದ ಕೂಡಿದವನಾದ್ದರಿಂದಲೇ ಅವನ ಕೃತಿಗಳಲ್ಲಿ ಕಂಡುಬರುವ ವಿಡಂಬನ ಶೈಲಿ ಹೆಚ್ಚು ತರ್ಕ ಬದ್ಧವಾಗಿದೆ ಹಾಗೂ ವೈಚಾರಿಕವಾಗಿದೆ. "ದಿ ಡನ್ಸಿಯಡ್" ಇವನ ಇನ್ನೊಂದು ಪ್ರಚಲಿತವಾದ ವಿಡಂಬನಾತ್ಮಕ ಶೈಲಿಯಿಂದ ಕೂಡಿದ ಪದ್ಯಕೃತಿ. ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಎದುರಾಳಿ ಗಳಾದ ಥಿಯೋಬಾಂಡ ಹಾಗೂ ಕೂಲಿಸಿಬರ್‌ರನ್ನು ವಿಡಂಬನೆ ಗೈದಿದ್ದಾನೆ. ಈ ಕೃತಿ ಡ್ರೈಡನ್‌ನ ವಿಡಂಬನ ಕಾವ್ಯ "ಮ್ಯಾಕ್ ಫ್ಲೆಕ್ನೋ"ವನ್ನು ಹೋಲುತ್ತದೆ.

ಪ್ರಾಚೀನ ಕವಿಗಳಾದ ಜುವೆನಾಲ್ ಮತ್ತು ಹೋರೇಸ್‌ರ ವಿಡಂಬನ ಕಾವ್ಯಗಳನ್ನೇ ಮಾದರಿಯನ್ನಾಗಿಟ್ಟುಕೊಂಡು ಪೋಪ್‌ನು ತನ್ನ ಕೃತಿಗಳನ್ನು ರಚಿಸಿದ್ದಾನೆ. ಅವನ ಮತ್ತೊಂದು ವಿಡಂಬನ ಕೃತಿ "ಎಪಿಸ್ಟಲ್ ಟು ಡಾ॥ ಅರ್ಬಥ್ ನಾಟ್" ಅವನ ಕಾಲದ ಪ್ರಮುಖ ವ್ಯಕ್ತಿಗಳ, ಕವಿಗಳ ಹಾಗೂ ಲೇಖಕರ ವಿಡಂಬನಾತ್ಮಕ ವ್ಯಕ್ತಿಚಿತ್ರಗಳಿಂದ ತುಂಬಿದೆ. ಈತನ ವಿಡಂಬನಾ ಶೈಲಿಗೆ ಮೆರುಗುಕೊಟ್ಟದ್ದು ಅವನೇ ಆಯ್ದುಕೊಂಡ ಹಿರೋ ಯಿಕ್ ದ್ವಿಪದಿ. ಇಂಥ ಹಿರೋಯಿಕ್ ದ್ವಿಪದಿಗಳನ್ನು ತನ್ನ ವಿಡಂಬನ ಕೃತಿಗಳಾದ "ದಿ ಎಸ್ಸೆ ಆನ್ ಮ್ಯಾನ್" ಹಾಗೂ "ದಿ

ಡನ್ಸಿಯಡ್"ಗಳಲ್ಲಿ ಧಾರಾಳವಾಗಿ ಉಪಯೋಗಿಸಿದ್ದಾನೆ. "ದಿ ಡನ್ಸಿಯಡ್"ದಲ್ಲಿ ಕೀಳುದರ್ಜೆಯ, ಮುದ್ದಾಮ ಕವಿಗಳ, ಮೂರ್ಖರ, ಕ್ರೂರ ವಿಮರ್ಶಕರ ವಿಡಂಬನೆ ಗೈದಿದ್ದಾನೆ. ತನ್ನ ನಿಜ ಜೀವನದಲ್ಲಿ ಸಮಕಾಲೀನ ಕವಿಗಳೊಂದಿಗಿದ್ದ ಭಿನ್ನಾಭಿಪ್ರಾಯ, ವೈರತ್ವಗಳನ್ನೇ ಪೋಪ್ ತನ್ನ ಕೃತಿಯಲ್ಲಿಳಿಸಿದ್ದಾನೆ.

ಇದೇ ಸಾಹಿತ್ಯಯುಗಕ್ಕೆ ಸೇರಿದವನಾದ ಮ್ಯಾಥ್ಯೂ ಪ್ರಾಯರ್ ಚತುರೋಕ್ತಿಯಿಂದೊಡಗೂಡಿದ ಕೆಲವು ಪದ್ಯಗಳನ್ನು ಬರೆದಿದ್ದಾನೆ. ಜಾನ್ ಗೇ ಎಂಬ ಕವಿ ಪ್ರಹಸನದ ಪದ್ಯ ಕೃತಿಗಳನ್ನು ರಚಿಸಿದ್ದಾನೆ. ಪೋಪ್‌ನ ವಿಡಂಬನ ಶೈಲಿಯ ಜಾಡನ್ನೇ ಹಿಡಿದು ಇದೇ ಯುಗದ ಎಡ್ವರ್ಡ್ ಯಂಗ್ ಮತ್ತು ರಾಬರ್ಟ್ ಬ್ಲೇರ್ ಮುಂತಾದವರು ವಿಡಂಬನ ಶೈಲಿಯನ್ನು ಪದ್ಯ ಸಾಹಿತ್ಯದಲ್ಲಿ ಹೆಚ್ಚು ಪ್ರಚಾರಕ್ಕೆ ತಂದರು.

v) **ಜೊನಾಥನ್ ಸ್ವಿಫ್ಟ್ :** ಹದಿನೆಂಟನೆಯ ಶತಕದ ಪ್ರಮುಖ ವಿಡಂಬನಕಾರನೀತನು. ಇವನು ಬಹು ದೊಡ್ಡ ಮೇಧಾವಿ. ತನ್ನ ಯೋಗ್ಯತೆಗೆ ತಕ್ಕ ಸ್ಥಾನ ಸಿಕ್ಕಲಿಲ್ಲವೆಂದು ಜಿಗುಪ್ಸೆ ಹೊಂದಿ ಅವನ ಮನಸ್ಸು ಕಹಿಯಾಯಿತು; ಆದರಿಂದ ಮಾನವದ್ವೇಷಿಯಾಗಿಬಿಟ್ಟನು. ಅವನ ಕೃತಿಗಳಲ್ಲಿ ಕಟುವಾದ ವಿಡಂಬನೆಯೇ ಹೆಚ್ಚು. ಆದರೆ ಅವು ಉತ್ತಮದರ್ಜೆಯ ಕೃತಿಗಳು. ಈತನು ಇಂಗ್ಲೀಷ್ ವಿಡಂಬನಕಾರರಲ್ಲೇ ಕಟು ವಿಡಂಬನಕಾರ. ಇವನ ಮುಖ್ಯ ಕೃತಿಗಳು ಇಂದಿಗೂ ಬಹು ಜನಪ್ರಿಯವಾಗಿವೆ.

ಇವನ ಮೊದಲ ವಿಡಂಬನಕೃತಿ "ಗ್ರಂಥಗಳ ಕಾಳಗ"ದಲ್ಲಿ ಆತ ಶಾಸ್ತ್ರಬದ್ಧವಾದ ಪ್ರಾಚೀನ ಸಾಹಿತ್ಯವನ್ನು ಬೆಂಬಲಿಸುತ್ತಾನೆ. ಆಧುನಿಕ ಸಾಹಿತ್ಯಕಾರರ ನವೀನ ವಿಕೃತ ಕೃತಿಗಳನ್ನು ವಿಡಂಬನಗೈದಿದ್ದಾನೆ. "Tale of Tub" ಇವನ ಲಾಕ್ಷಣಿಕ ಕೃತಿ. ಈ ಗ್ರಂಥದಲ್ಲಿ ರೋಮನ್ ಕ್ಯಾಥೋಲಿಕ್ ಹಾಗೂ ಕ್ಯಾಲ್ವಿನಿಸ್ಟರನ್ನು ಕಟುವಾಗಿ ಟೀಕಿಸಿದ್ದಾನೆ. ಮೇಲಾಗಿ ತನ್ನ ಪಂಗಡದವರಾದ ಪ್ರೊಟೆಸ್ಟಂಟರನ್ನೂ ಹೀಗಳೆದಿದ್ದನೆ. ಡಬ್ಲಿನ್ನಿನ ಸಂತ ಪ್ಯಾಟ್ರಿಕ್ ಚರ್ಚಿನ ಡೀನ್‌ನಾಗಿ ಕೆಲಸ ಮಾಡುತ್ತಿದ್ದಾಗಲೇ ಈತ ತನ್ನ ಕಾಲದ ರಾಜಕೀಯ ಹಾಗೂ ಧಾರ್ಮಿಕ ತುಮುಲದಲ್ಲಿ ಸಕ್ರಿಯವಾಗಿ ಭಾಗವಹಿಸಲಾರಂಭಿಸಿದನು. ಲಘು ಪತ್ರಿಕಾ ಕರ್ತನಾಗಿ ಕಟು ವ್ಯಂಗ್ಯದಿಂದೊಡಗೂಡಿದ ಧಾರ್ಮಿಕ ಲೇಖನಗಳನ್ನು ಪ್ರಕಟಪಡಿಸಿದ. ಇವನು ಬರೆದ "ಗಲಿವ್ಹರ್‌ನ ಪ್ರವಾಸ"ದ ದಂತ ಕಥೆಯು ಬಹು ಸ್ವಾರಸ್ಯಪೂರ್ಣವಾಗಿದೆ. ಹಾಗೂ ವಿಡಂಬನಾತ್ಮಕವಾಗಿದೆ. ಅದರಲ್ಲಿ ಲ್ಯಾಮ್ಯುಯಲ್ ಗಲಿವ್ಹರ್ ಎಂಬ ಕಾಲ್ಪನಿಕ ಪ್ರವಾಸಿಯ ಸಾಹಸದ ಕಾರ್ಯಗಳನ್ನು ವರ್ಣಿಸುವ ನೆಪದಲ್ಲಿ ಸ್ವಿಫ್ಟ್ ಮಾನವ ಜನಾಂಗದ ಅವಿವೇಕತನ ಹಾಗೂ ನೀಚತನಗಳನ್ನು ಮನಸ್ವೀ ಟೀಕಿಸಿದ್ದಾನೆ. ಇದೊಂದು ಸ್ವಿಫ್ಟ್‌ಬರೆದ ಅದ್ಭುತ ಚಮತ್ಕೃತಿ. ಇಲ್ಲಿ ಬರುವ ಒಂದೊಂದು ವಸ್ತುವೂ ಕೂಡ ಚಿತ್ರ ವಿಚಿತ್ರವಾಗಿದ್ದು ನಮ್ಮನ್ನು ಕಲ್ಪನಾ ಲೋಕದಲ್ಲಿ ವಿಹರಿಸುವಂತೆ ಮಾಡುತ್ತದೆ. ಈ ಕೃತಿಯ ಮೂಲಕವಾಗಿ ಇವನು ರಾಜಕೀಯ ಧುರೀಣರನ್ನು, ತತ್ವಜ್ಞಾನಿಗಳನ್ನು, ವಿಜ್ಞಾನಿಗಳನ್ನು, ಸೈನಿಕರನ್ನು ಹಾಗೂ ಸಮಾಜದ ಜನರನ್ನು ವ್ಯಂಗ್ಯವಾಗಿ ಟೀಕಿಸಿದ್ದಾನೆ.

## ೨. ಸ್ಯಾಮ್ಯುಯಲ್ ಜಾನ್ಸನ್‌ನ ಕಾಲದ ಅಥವಾ ಸಂಧಿಕಾಲದ ಹಾಸ್ಯ ಮತ್ತು ವಿಡಂಬನ ಸಾಹಿತ್ಯ ೧೭೫೦–೯೮

ಜಾನ್ಸನ್‌ನ ಕಾಲದಲ್ಲಿ ಇಂಗ್ಲೀಷ್ ಹಾಸ್ಯ ಮತ್ತು ವಿಡಂಬನ ಸಾಹಿತ್ಯವು ಮತ್ತಿಷ್ಟು ವಿಕಾಸಗೊಂಡು ಜನಪ್ರಿಯ ವಾಯಿತು. ಈ ಯುಗದಲ್ಲಿ ಹಾಸ್ಯ ಮತ್ತು ವಿಡಂಬನ ಸಾಹಿತ್ಯ ವನ್ನು ಹೆಚ್ಚು ಶ್ರೀಮಂತಗೊಳಿಸಿದವರಲ್ಲಿ ಆಲಿವ್ಹರ್ ಗೋಲ್ಡ ಸ್ಮಿಥ್, ಶೆರಿಡಾನ್, ಫೀಲ್ಡಿಂಗ್, ರಿಚರ್ಡಸನ್ ಹಾಗೂ ಸ್ಯಾಮ್ಯು ಯಲ್ ಜಾನ್ಸನ್ ಮುಂತಾದವರು ಮುಖ್ಯರು. ವಿಮರ್ಶಕ ಥ್ಯಾಕರೇ ಹೇಳಿದಂತೆ ಈ ಹದಿನೆಂಟನೆಯ ಶತಮಾನದಲ್ಲಿಯ ಲೇಖಕರು, ಕವಿಗಳು ಮತ್ತು ಕಾದಂಬರಿಕಾರರು ತಮ್ಮ ಸಾಹಿತ್ಯದ ಉದ್ಯೋಗಕ್ಕಾಗಿ ದೊಡ್ಡ ಶ್ರೀಮಂತರ ಆಶ್ರಯವನ್ನು ಹುಡು ಕುತ್ತ ಹೋಗುವದು ಸಾಮಾನ್ಯವಾಗಿತ್ತು. ಸ್ಯಾಮ್ಯುಯಲ್ ಜಾನ್ಸನ್‌ನು “ಕ್ಲಾಸಿಕಲ್” ಸಂಪ್ರದಾಯವನ್ನೇ ಅನುಕರಿಸಿ ವಿಕಟ ವಿಡಂಬನಕಾರನಾಗಿ ತನ್ನ ಪದ್ಯ ಕೃತಿಗಳನ್ನು ರಚಿಸಿದ. ಈ ಯುಗದ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನಗಳು ಸಮವಾಗಿ ವಿಕಾಸ ಹೊಂದಿದವು. ಜುವೆನಾಲ್ ಧಾಟಿಯ ವಿಡಂಬನ ಸಾಹಿತ್ಯ ಮುಖ್ಯವಾಗಿ ಈ ಯುಗದ ವೈಶಿಷ್ಟ್ಯ. ಜಾನ್ ವಾಲ್ಕಾಟ್, ವಿಲಿಯಂ ನಿಫೊರ್ಡ್ ಮತ್ತು ಚರ್ಚಿಲ್ ಮುಂತಾದ ಕವಿಗಳು ವಿಡಂಬನಯುಕ್ತ ಪದ್ಯಸಾಹಿತ್ಯವನ್ನು ಬೆಳೆಸಿದರು. ಈ ವಿಡಂಬನಾತ್ಮಕ ಪದ್ಯಸಾಹಿತ್ಯದಲ್ಲಿ ಸಮ ಕಾಲೀನ, ಸಾಮಾಜಿಕ ರಾಜಕೀಯ ಸಮಸ್ಯೆಗಳ ವಿಡಂಬನೆಯನ್ನು ಕಾಣುತ್ತೇವೆ.

ಈ ಯುಗಕ್ಕೆ ಸೇರಿದ ಸ್ಮಾಲೆಟ್ ಮತ್ತು ಸ್ಟರ್ನರು ತಮ್ಮ ಹಾಸ್ಯಭರಿತ ಕಾದಂಬರಿಗಳಲ್ಲಿ ತಮ್ಮ ಕಾಲದ ಜೀವನದ ಎಲ್ಲ ರಂಗಗಳ ಪರಿಚಯುವನ್ನು ಮಾಡಿಕೊಟ್ಟಿದ್ದಾರೆ. ಸಮಾಜ ದಲ್ಲಿಯ ನ್ಯೂನತೆಗಳನ್ನು ಗೋಲ್ಡ್‌ಸ್ಮಿಥ್ ತನ್ನ ಹಾಸ್ಯಭರಿತ ಲಲಿತ ಪ್ರಬಂಧಗಳ ಮೂಲಕ ಎತ್ತಿ ತೋರಿಸಿ ಸಮಾಜ ಸುಧಾ ರಣೆಯ ಕಾರ್ಯವನ್ನು ಕೈಕೊಂಡನು. ಇಂಗ್ಲೀಷ್ ಜನರಿಗೆ ಪ್ರಪ್ರಥಮವಾಗಿ ಕಾದಂಬರಿಗಳ ಪರಿಚಯು ಮಾಡಿಕೊಟ್ಟ ಶ್ರೇಯುಸ್ಸು ರಿಚರ್ಡ್‌ಸನ್ ಹಾಗೂ ಹೆನ್ರಿ ಫೀಲ್ಡಿಂಗ್‌ರಿಗೆ ಸಲ್ಲ ತಕ್ಕದ್ದು. ಇಂಗ್ಲೀಷ್ ಜನರ ಮನೋಭಾವಕ್ಕೆ ಒಗ್ಗುವಂಥ ಹಾಗೂ ಅವರ ಸಂಸ್ಕೃತಿಯಲ್ಲಿ ಅದ್ದಿ ತೆಗೆದ ತಿಳಿಹಾಸ್ಯ ಶೈಲಿಯು ಫೀಲ್ಡಿಂಗ್‌ನ ಕಾದಂಬರಿಗಳನ್ನೇ ಅನುಕರಿಸಿ ಗೋಲ್ಡ್‌ಸ್ಮಿಥ್ ಭಾವಾತಿರೇಕವುಳ್ಳ ಹಾಸ್ಯಶೈಲಿಯ "ವ್ಹಿಕಾರ್ ಆಫ್ ದಿ ವೇಕ್ ಫೀಲ್ಡ್" ಕಾದಂಬರಿಯುನ್ನು ಬರೆದಿದ್ದಾನೆ. ಗೋಲ್ಡ್‌ಸ್ಮಿಥ್‌ನ ಕಾದಂಬರಿಯುಲ್ಲಿದ್ದಂತೆ ಪದ್ಯ ಹಾಗೂ ನಾಟಕಗಳಲ್ಲಿ ಕೂಡ ಭಾವಾತಿರೇಕವುಳ್ಳ ಹಾಸ್ಯದ ಹೊನಲನ್ನು ಕಾಣಬಹುದು.

ಈ ಕಾಲದಲ್ಲಿ ಕೂಡ ಸಾಹಿತ್ಯಕ ವೃತ್ತಪತ್ರಿಕೆ ಹಾಗೂ ಲಲಿತ ಪ್ರಬಂಧಗಳು ತಮ್ಮ ಶ್ಲಾಘನೀಯುವಾದ ಕಾರ್ಯಗಳಾದ ಜನರ ಜೀವನ ಮಟ್ಟವನ್ನು ಸುಧಾರಿಸುವದನ್ನು ಹಾಗೂ ಇಂಗ್ಲೀಷ್ ಹಾಸ್ಯ ಸಾಹಿತ್ಯದ ಪರಿಧಿಯುನ್ನು ವಿಸ್ತರಿಸುವದನ್ನು ಮುಂದುವರಿಸಿದವು. ಈ ಯುಗದಲ್ಲಿಯು ಹಾಸ್ಯ ಸಾಹಿತ್ಯ ಇಂಗ್ಲೀಷ್ ಜನರ ನಿತ್ಯ ಸಂಸ್ಕೃತಿ ಹಾಗೂ ಹಾವಭಾವಗಳಿಂದಲೇ ಸ್ಫೂರ್ತಿಯುನ್ನು ಪಡೆದು ಹೊಸರೂಪವನ್ನು ಪಡೆದಿದೆ.

ಇಂಗ್ಲೀಷ್ ಜನರ ಜೀವನದಲ್ಲಿಯ ಬದಲಾವಣೆಗಳೂ, ರಾಜಕೀಯ ಹಾಗೂ ಸಾಮಾಜಿಕ ರಂಗದಲ್ಲಾದ ಸ್ಥಾನಪಲ್ಲಟಗಳೂ ಕೂಡ ಇಂಗ್ಲೀಷ್ ಹಾಸ್ಯ ಸಾಹಿತ್ಯದ ರಚನೆಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟವು. ಈ ಯುಗದ ಹಾಸ್ಯ ಸಾಹಿತ್ಯಕ್ಕೆ ಇಂಗ್ಲೆಂಡಿನ ಭೂಮಿಕೆಯೇ ಮುಖ್ಯವಾದ ಹಿನ್ನೆಲೆಯಾಗಿದೆ. ಕ್ಲಾಸಿಕಲ್ ಸಂಪ್ರದಾಯದ ವಿರುದ್ಧ "ರೊಮ್ಯಾಂಟಿಕ್" ಸಂಪ್ರದಾಯಕ್ಕೆ ಸೇರಿದ ಈ ಯುಗದ ಕೆಲವು ಕವಿಗಳು ಹಾಗೂ ಹಾಸ್ಯ ಸಾಹಿತಿ ಗಳು ಪ್ರತೀಕಾರವನ್ನು ಪ್ರಾರಂಭಿಸಿದರು.

ಈ ಹೊಸ ರೊಮ್ಯಾಂಟಿಕ್ ಸಂಪ್ರದಾಯದ ಕವಿಗಳು ಹಾಗೂ ಸಾಹಿತಿಗಳಿಂದಲೇನೂ ಇಂಗ್ಲೀಷ್ ಹಾಸ್ಯ ಸಾಹಿತ್ಯಕ್ಕೆ ಹೊಸ ಬಳುವಳಿ ಸಿಕ್ಕಿಲಿಲ್ಲವೆಂದೇ ಹೇಳಬಹುದು. ಈ ಸಾಹಿತ್ಯ ಯುಗದಲ್ಲಿ ಕೆಲವು ಸಾಹಿತಿಗಳು ತಮ್ಮ ಸ್ವಾನುಭವದ ಇತಿಹಾಸ ವನ್ನು "ಸಣ್ಣ ಆತ್ಮಕಥೆ"ಗಳಲ್ಲಿ ಬರೆದಿಟ್ಟಿದ್ದಾರೆ. ಅವರಲ್ಲಿ ಲೇಡಿ ಮೇರಿ ಒರ್ಟ್ಲೇ ಮೊಂಟೆಗ್ ಒಬ್ಬಳಾಗಿದ್ದಾಳೆ. ಅವಳ ಸ್ವಾನುಭವಗಳ ಗ್ರಂಥಗಳು ಬಹಳೀ ವಿನೋದಪೂರ್ಣ ಹಾಗೂ ಲಾಲಿತ್ಯಪೂರ್ಣವಾಗಿವೆ. ಅವುಗಳಲ್ಲಿ ಖಾರವಾದ ವಿಡಂಬನೆಯೂ ಕೂಡಿದೆ. ಹೊರೇಸ್ ವಾಲ್‌ಪೋಲ್‌ನ 'memories' ಹಾಗೂ ಆತ್ಮ ಕಥೆಗಳೂ ಕೂಡ ಹಾಸ್ಯ ಮತ್ತು ವಿಡಂಬನೆ ಗಳಿಂದ ಕೂಡಿದ್ದಾಗಿವೆ. ರಾಜಪ್ರಭುತ್ವದ ಜೀವನ ಹಾಗೂ ವೈಭವಗಳನ್ನು ತನ್ನ ಗ್ರಂಥಗಳಲ್ಲಿ ಅವನು ವಿಡಂಬನೆ ಗೈದಿದ್ದಾನೆ. ಫೀಲ್ಡಿಂಗ್‌ನ ಕಾದಂಬರಿಗಳಲ್ಲಿ ವಾಸ್ತವಿಕತೆಯನ್ನು ನಾವು ಕಾಣು ತ್ತೇವೆ. ಸ್ಮಾಲೆಟ್ ತನ್ನ ವಿನೋದಪೂರ್ಣ "Picaresque"

ಕಾದಂಬರಿಗಳ ಮೂಲಕ ಇಂಗ್ಲೀಷ್ ಹಾಸ್ಯ ಸಾಹಿತ್ಯವನ್ನು ಬೆಳೆಸಿದನು. ಮತ್ತೊಬ್ಬ ಇಂಗ್ಲೀಷ್ ಲೇಖಕ ಸ್ಟರ್ನ್ ವಿಕಟ ಕಾದಂಬರಿಕಾರ. ಮಹಿಳಾ ಕಾದಂಬರಿಕಾರರಾದ ಹನ್ನಾಮೋರ್, ಫ್ಯಾನಿ ಬುರ್ನೇ, ಮೇರಿಯಾ ಎಜ್‌ವರ್ಥ, ಮೇರಿ ರಸೆಲ್, ಹಾಗೂ ಮಿಟ್ ಫೋರ್ಡರು ಇಂಗ್ಲೀಷ್ ಕಾದಂಬರಿ ಸಾಹಿತ್ಯದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಅವರ ಕೃತಿಗಳಲ್ಲಿ ವಿಡಂಬನೆ, ತಿಳಿಹಾಸ್ಯ, ಲಾಲಿತ್ಯ, ವಿಕಟ ಹಾಸ್ಯಗಳು ಬೆರೆತಿವೆ. ಸಮಕಾಲೀನ ಸಮಾಜದ ಬಗೆಗೆ ಈ ಮಹಿಳಾ ಕಾದಂಬರಿಕಾರರ ದೃಷ್ಟಿಕೋನ, ವಿಮರ್ಶೆ ಹಾಗೂ ಟೀಕೆಗಳು ಇವರ ಕಾದಂಬರಿಗಳಲ್ಲಿ ಕಾಣಸಿಗುತ್ತವೆ. ಈ ಮಹಿಳಾ ಕಾದಂಬರಿಕಾರರು ಇಂಗ್ಲೀಷ್ ಹಾಸ್ಯ ಸಾಹಿತ್ಯಕ್ಕೆ ಕೊಟ್ಟ ಕಾಣಿಕೆ ಅಮೂಲ್ಯವಾಗಿದೆ.

ಇದೇ ಯುಗಕ್ಕೆ ಸೇರಿದ ಕವಿ ಥಾಮಸ್ ಚಾಟರಟನ್ ತನ್ನ ಜನಪದ ಸಾಹಿತ್ಯದ ಮೂಲಕ ಹಾಸ್ಯ ಶೈಲಿಯನ್ನು ಮತ್ತೆ ಪುನರುತ್ಥಾನ ಮಾಡಿ ಅದನ್ನು ಕವಿತೆಗಳಲ್ಲಿ ಬಳಕೆಗೆ ತಂದನು. ರಾಬರ್ಟ್ ಬರ್ನ್ಸ ತನ್ನ ಕಾವ್ಯದಲ್ಲಿ ಆಷಾಢಭೂತಿ ತನವನ್ನು ಹಾಗೂ ಕೀಳುಮಟ್ಟದ ಚರ್ಚಿನ ಧರ್ಮೋಪದೇಶಕರನ್ನು, ಕಂದಾಚಾರದ ಸಂಪ್ರದಾಯಗಳನ್ನು ಕಟುವಾಗಿ ವಿಡಂಬನೆಗೈದಿದ್ದಾನೆ. ಆಲಿವ್ಹರ್ ಗೋಲ್ಡಸ್ಮಿಥ್ ಕೂಡ ತನ್ನ ಪದ್ಯಸಾಹಿತ್ಯದಲ್ಲಿ ಪೋಪ್‌ನನ್ನು ಅನುಕರಿಸಿ ವಿಡಂಬನ ಶೈಲಿಯನ್ನು ಬಳಸಿದ್ದಾನೆ. ಹಾಸ್ಯ ಹಾಗೂ ಕರುಣರಸಗಳು ರಾಬರ್ಟ್ ಬರ್ನ್ಸ್‌ನ ಪದ್ಯ ಸಾಹಿತ್ಯದ ಬುಗ್ಗೆಗಳಾಗಿವೆ. ಜನರನ್ನು ನಗಿಸುವದೂ ಅವರ ಕಣ್ಣುಗಳಿಂದ ಕರುಣೆಯ ಅಶ್ರುಧಾರೆ ಸುರಿಯುವಂತೆ ಮಾಡು

ವದೂ ರಾಬರ್ಟ್ ಬರ್ನ್ಸ್‌ನಿಗೆ ಕರಗತವಾಗಿತ್ತು. ಇದೇ ಕಲೆಯನ್ನು ಗೋಲ್ಡ್‌ಸ್ಮಿಥ್ ಹಸ್ತಗತ ಮಾಡಿಕೊಂಡಿದ್ದನು.

ಹಾಸ್ಯ ಸಾಹಿತ್ಯದ ವಿವಿಧ ಮುಖಗಳಾದ ಪ್ರಹಸನ, ತಮಾಷಾ, ನಾಟಕಗಳು ಇಂಗ್ಲಂಡ ರಂಗಭೂಮಿಯ ಮೇಲೆ ಕಾಣಿಸಿಕೊಂಡವು. ಈ ಬಗೆಯ ಕೀಳುದರ್ಜೆಯ ವೈನೋದಿಕೆಗಳ ಉದ್ದೇಶ ಅಸಂಬದ್ಧವಾದ ದೃಶ್ಯ ಹಾಗೂ ಪಾತ್ರಗಳ ಜೋಡಣೆಗಳ ಮೂಲಕ ಜನರನ್ನು ನಗಿಸುವದಾಗಿದೆ. ಹೆನ್ರಿ ಫೀಲ್ಡಿಂಗ್ ಇಂತಹ ಕಥೆಗಳನ್ನು ರಚಿಸುವದರಲ್ಲಿ ತನ್ನ ಮೇಲ್ಮೆಯನ್ನು ತೋರಿಸಿದ್ದಾನೆ. ಟೌನ್‌ಲೇ ಸ್ಯಾಮ್ಯುಯಲ್ ಫುಟ್ ಮತ್ತು ಜಾರ್ಜ ಕೋಲ್‌ಮನ್ ಕೂಡ ಇಂತಹ ವಿನೋದ ಪ್ರಹಸನಗಳನ್ನು ರಚಿಸಿದ್ದಾರೆ. ಬೋಧಾತ್ಮಕವಾದ ಭಾವವೈನೋದಿಕೆಗಳೂ ಕೂಡ ಈ ಯುಗದಲ್ಲಿ ರಂಗಭೂಮಿಯ ಮೇಲೆ ಕಾಣಿಸಿಕೊಂಡವು. ಅವುಗಳ ಲೇಖಕರು ಕೂಲೀಸಿಬರ್, ರಿಚರ್ಡ್ ಕಂಬರಲ್ಯಾಂಡ್ ಮುಂತಾದವರು.

ಈ ಹರ್ಷನಾಟಕಗಳಲ್ಲಿ ನೈಜವಾದ ಹಾಸ್ಯ ಶೈಲಿಯ ಅಭಾವ ಎದ್ದುಕಾಣುತ್ತದೆ. ಕರುಣಾರಸದ ಭಾವಾತಿರೇಕತೆಯೇ ಈ ವೈನೋದಿಕೆಗಳ ಮುಖ್ಯ ವೈಖರಿ. ಈ ಭಾವವೈನೋದಿಕೆಗಳು "Comedy of manners ಗಳ" ವಿರುದ್ಧವಾದ ಪ್ರತಿಕ್ರಿಯೆ. ಅದೇ ರೀತಿ ಈ ಭಾವ ವೈನೋದಿಕೆಗಳ ವಿರುದ್ಧ ಮಾನವನ ಸ್ವಭಾವ ವೈಚಿತ್ರ್ಯಗಳನ್ನು ಬಿಂಬಿಸುವ Comedy 'of humours' ಗಳನ್ನು ಗೋಲ್ಡ್‌ಸ್ಮಿಥ್ ಹಾಗೂ ಶೆರಿಡಾನ್‌ರು

ಪುನರುಜ್ಜೀವನಗೊಳಿಸಿದರು. ಭಾವ ವೈನೋದಿಕೆಗಳಲ್ಲಿ ನಾವು ಕಾಣುವದು ಯಾಂತ್ರಿಕವಾದ ಹಾಸ್ಯ. ಕೆಲವೇ ಆಯ್ದುಕೊಂಡ ಶಬ್ದಗಳ ಗುಂಪಿನಿಂದ ಹಾಸ್ಯಭಾವವನ್ನುಂಟು ಮಾಡುವದೇ ನಾಟಕಕಾರರ ಉದ್ದೇಶ.

i) **ಸ್ಯಾಮ್ಯುಯಲ್ ಜಾನ್ಸನ್ :** ಹದಿನೆಂಟನೆಯ ಶತಕದ ಉತ್ತರಾರ್ಧದ ಸಾಹಿತ್ಯಲೋಕದ ಧ್ರುವತಾರೆ, ವಿಮರ್ಶಕ, ಪ್ರವರ್ತಕ, ನಾಟಕಕಾರ, ನೇತಾರ ಹಾಗೂ ಕವಿಯಾದ ಸ್ಯಾಮ್ಯುಯಲ್ ಜಾನ್ಸನ್ ಸಂಪ್ರದಾಯಬದ್ಧವಾದ ಶ್ರೇಷ್ಠ ಸಾಹಿತ್ಯದ ನಿಯಮಗಳನ್ನೇ ಚಾಚೂ ತಪ್ಪದೇ ತನ್ನ ಪದ್ಯ ಕೃತಿಯಾದ "ಲಂಡನ್"ದಲ್ಲಿ ಆ ನಗರದ ನಿಕೃಷ್ಟ ಸ್ಥಿತಿಯನ್ನು ಖಾರವಾಗಿ ಟೀಕಿಸಿದ್ದಾನೆ. ಪ್ರಮಾಣೀಭೂತವಾದ ರೋಮನ್ ಕವಿ ಜುವೆನಾಲ್‌ನ ವಿಡಂಬನ ಕಾವ್ಯಗಳನ್ನು ಅನುಕರಿಸಿ ತನ್ನ ಇನ್ನೊಂದು ಮರ್ಮಭೇದಕ ಕೃತಿ "ದಿ ವ್ಯಾನಿಟಿ ಆಫ್ ಹ್ಯೂಮನ್ ವಿಶಿಸ್" ಎಂಬ ಪದ್ಯ ಕೃತಿಯಲ್ಲಿ ಮನುಷ್ಯನ ಆಶೆ ಆಕಾಂಕ್ಷೆಗಳ ವಿಡಂಬನಗೈದಿದ್ದಾನೆ. ಮಾನವನ ಜೀವನದಲ್ಲಿ ಅವನ ಮಹತ್ವಾಕಾಂಕ್ಷೆಗಳು ಹೇಗೆ ನಿಷ್ಫಲವಾಗುತ್ತವೆಯೆಂಬುದೇ ಈ ಕೃತಿಯ ಮುಖ್ಯ ಸಾರಾಂಶ. "ಸ್ಪೆಕ್ಟೇಟರ್ಸ್" ಹಾಗೂ "ಟ್ಯಾಟ್ಲರ್" ನಿಯತಕಾಲಿಕಗಳ ಮಾದರಿಯಲ್ಲೇ ಇವನೂ ಕೂಡ "ರ್‍ಯಾಂಬ್ಲರ್" ಪತ್ರಿಕೆಯನ್ನು ಪ್ರಾರಂಭಿಸಿದನು. ಜೀವನದ ಅನೇಕ ಸಮಸ್ಯೆಗಳ ಬಗೆಗೆ ನೀತಿಬೋಧಕವಾದ ಪ್ರಬಂಧಗಳಿಂದೊಡಗೂಡಿ ಈ ಪತ್ರಿಕೆ ಪ್ರಚಾರದಲ್ಲಿ ಬಂದಿತು. ಗಂಭೀರವಾದ, ಅಲಂಕೃತವಾದ ಹಾಸ್ಯಶೈಲಿಯೇ ಈ ಪ್ರಬಂಧಗಳ

ವೈಶಿಷ್ಟ್ಯವಾಗಿದೆ. ಅಡಿಸನ್‌ನ ಲಾಲಿತ್ಯ ಹಾಸ್ಯ ಶೈಲಿಯಾಗಲಿ, ಸ್ಟೀಲ್‌ನ ಕುದಿಯುವ ಸರಸೋಕ್ತಿಯಾಗಲಿ ಇವನ ಕೃತಿಗಳಲ್ಲಿಲ್ಲ.

ii) **ಹೆನ್ರಿ ಫೀಲ್ಡಿಂಗ್ :** ಇಂಗ್ಲಂಡಿನ ಉದಯೋನ್ಮುಖ ಕಾದಂಬರಿಕಾರನಾದ ರಿಚರ್ಡ್‌ಸನ್‌ನು ಬರೆದ ಇಂಗ್ಲೀಷ್ ಸಾಹಿತ್ಯದ ಪ್ರಪ್ರಥಮ ಕಾದಂಬರಿಯಿಂದ ಸ್ಫೂರ್ತಿ ಪಡೆದು ಇಂಗ್ಲೀಷ್ ಸಾಹಿತ್ಯದ ಇನ್ನೊಬ್ಬ ಉದಯೋನ್ಮುಖ ಕಾದಂಬರಿಕಾರನಾದ ಇವನು ತನ್ನದೇ ಆದ ಉದಾತ್ತ ಹಾಸ್ಯ ಶೈಲಿಯ "ಜೊಸೆಫ್ ಅಂಡ್ರೂಜ್" ಕಾದಂಬರಿಯನ್ನು ಸಾಹಿತ್ಯಲೋಕಕ್ಕೆ ಕಾಣಿಕೆಯಾಗಿ ನೀಡಿದ. ತನ್ನ ಕಾಲದ ಇಂಗ್ಲಂಡಿನ ಸಾಮಾನ್ಯ ಜನಜೀವನವನ್ನು ಈತ ತನ್ನ ಕಾದಂಬರಿಗಳಲ್ಲಿ ನಿರೂಪಿಸಿದ್ದಾನೆ. ಇವನು ಬರೆದ "ಟಾಮ್ ಜೋನ್ಸ್" ಕೂಡ ಮನೆವಾರ್ತೆಯ ವಿಷಯ ನಿರೂಪಿಸುವ ಕಾದಂಬರಿ. ಇವನ ಕಾದಂಬರಿಗಳಲ್ಲಿ ಉಲ್ಹಾಸಕರವಾದ ಹಾಸ್ಯ, ಈ ಹಾಸ್ಯದಿಂದೊಡಗೂಡಿದ ಮಾನವೀಯತೆ, ಅನುಕಂಪ ಇತ್ಯಾದಿ ವೈಶಿಷ್ಟ್ಯಗಳನ್ನು ನಾವು ಕಾಣುತ್ತೇವೆ. ಹೀನ ಮನೋಭಾವ ಹಾಗೂ ಧೂರ್ತತೆಯನ್ನು ಫೀಲ್ಡಿಂಗ್ ತನ್ನ ಕಾದಂಬರಿಗಳಲ್ಲಿ ಟೀಕಿಸಿದ್ದಾನೆ. ಅವನ ವಿಶಾಲ ಮನೋಭಾವದಷ್ಟೇ ಅವನ ಹಾಸ್ಯಶೈಲಿ ಕೂಡ ಬಹು ಉದಾತ್ತ ಹಾಗೂ ನೈಜವಾಗಿದೆ. ಅವನು ಬರೆದ ಮತ್ತೊಂದು ಕೃತಿ "ಅಮಿಲಿಯಾ" ವಿಶಿಷ್ಟವಾದ ಕಾದಂಬರಿ. ಕೆಲವು ಸಂದರ್ಭಗಳಲ್ಲಿ ಅವನ ಹಾಸ್ಯಶೈಲಿ ಭಾವಾತಿರೇಕದ ಸಮೀಪಕ್ಕೆ ಬರುವದೆಂಬ ಭಾವನೆ ಉಂಟಾಗುತ್ತದೆ. ರೊಮ್ಯಾಂಟಿಕ್ ಸಂಪ್ರದಾಯದ ಛಾಯೆ ಇವನ ಹಾಸ್ಯ ಶೈಲಿಯಲ್ಲಿ ಕಂಡು

ಬರುವದು. ಆ ಸಂಪ್ರದಾಯಕ್ಕನುಗುಣವಾಗಿಯೇ ತನ್ನ ಕಾದಂಬರಿಗಳನ್ನು ರಚಿಸಿದ್ದಾನೆ.

ಮಧ್ಯಮ ಹಾಗೂ ಕೆಳವರ್ಗದ ಜನರು ಸಮಾಜದಲ್ಲಿ ಹಾಗೂ ರಾಜಕೀಯ ವಿಷಯಗಳಲ್ಲಿ ಈ ಯುಗದಲ್ಲಿಯೂ ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳತೊಡಗಿದರು; ಆ ವರ್ಗಗಳ ಮಹತ್ವ ಹೆಚ್ಚತೊಡಗಿತು. ಹೀಗಾಗಿ ಇಂಗ್ಲಂಡಿನ ಜೀವನಕ್ರಮದಲ್ಲಿ ಕ್ರಮೇಣ ಬದಲಾವಣೆಗಳು ಕಂಡುಬಂದವು. ಇಂಗ್ಲಂಡಿನ ವರ್ಣ ಚಿತ್ರಕಾರನ ಹಾಗೆ ಫೀಲ್ಡಿಂಗ್ ಕೂಡ ಸಾಮಾಜಿಕ ವಿಡಂಬನಕಾರ. ಸಮಾಜ ಸುಧಾರಣೆಯ ಕಾರ್ಯವನ್ನು ತನ್ನ ವಿಡಂಬನಾತ್ಮಕ ಹಾಸ್ಯ ಶೈಲಿಯ ಕಾದಂಬರಿಗಳ ಮೂಲಕ ಮಾಡಿದ್ದಾನೆ. ಇವನ ಹಾಸ್ಯಶೈಲಿ ಭೋರ್ಗರೆಯುವಂಥದಾಗಿದ್ದು ಸೂಕ್ಷ್ಮತೆಯ ಅಭಾವ ಎದ್ದುಕಾಣುತ್ತದೆ. ಜನರು ತಮ್ಮ ಹುಚ್ಚು ವಿಚಾರಗಳಿಗಾಗಿ ನಕ್ಕು ನಲಿಯಲಿ ಎಂಬ ಉದ್ದೇಶದಿಂದ ಫೀಲ್ಡಿಂಗ್ ತನ್ನ ಹಾಸ್ಯ ಶೈಲಿಯನ್ನು ಹರ್ಷದ ನೆಲೆಯಲ್ಲಿರಿಸಿದ್ದಾನೆ. ಅಡ್ಯಾಮ್ಸ್‌ನ ಪಾತ್ರಚಿತ್ರಣದಲ್ಲಿಯಂತೂ ಪೂರ್ಣ ಅರಳಿದ ಹಾಸ್ಯವನ್ನು ಗಮನಿಸಬಹುದು. ವಿಡಂಬನೆ ಹಾಗೂ ಹಾಸ್ಯವ್ಯಂಗ್ಯಗಳಿಂದ ಕೂಡಿದ್ದರೂ ಇವನ ಹಾಸ್ಯಶೈಲಿ ಆನಂದ ಸೂಸುವ ಮಾನವೀಯತೆಯಿಂದೊಡಗೂಡಿದೆ.

iii) **ಆಲಿವ್ಹರ್ ಗೋಲ್ಡ್‌ಸ್ಮಿಥ್ :** ಜಾನ್ಸನ್‌ನ ಯುಗದ ಹಾಸ್ಯ ಸಾಹಿತಿಗಳಲ್ಲಿಯೇ ಜನಾನುರಾಗಿಯಾದವನೆಂದರೆ ಚತುರ ವಿನೋದಗಾರ ಆಲಿವ್ಹರ್ ಗೋಲ್ಡ್‌ಸ್ಮಿಥ್. ಈತ ಕಾದಂಬರಿಕಾರ,

ಕವಿ, ಪ್ರಬಂಧಕಾರ ಹಾಗೂ ನಾಟಕಕಾರ. ವಿಮರ್ಶಕ ಥ್ಯಾಕರೆ ಗೋಲ್ಡ್‌ಸ್ಮಿಥ್‌ನನ್ನು ಒಳ್ಳೆಯ ಮನರಂಜಕವಿ ನೋದಗಾರನೆಂದು ಶ್ಲಾಘಿಸಿದ್ದಾನೆ. ಬಡತನದ ಬೇಗೆಯಿಂದ ನೊಂದಿದ್ದ ಅವನಿಗೆ ಜೀವನದ ಆಂತರ್ಯವೆಲ್ಲ ಗೊತ್ತಿತ್ತು. ಬಹಳ ಸುಸ್ವಭಾವದ ದಯಾಮೂರ್ತಿ ಆತ. ಅಂತಲೇ ಕರುಣಾರಸ ಹಾಗೂ ಹಾಸ್ಯ ರಸಗಳು ಇವನ ಕೃತಿಗಳಲ್ಲಿ ಸಮರಸವಾಗಿ ಒಂದಕ್ಕೊಂದು ಹೊಂದಿಕೊಂಡಿವೆ. ಮಾನವಸಹಜ ಗುಣದೋಷಗಳ ಬಗೆಗೆ ಅವನಿಗಿರುವ ಅನುಕಂಪ, ಕ್ಷಮೆ ಹಾಗೂ ಅವುಗಳೆಡೆಗೆ ಹೊಮ್ಮಿರುವ ಅರ್ಥಪೂರ್ಣ ಹೊಂಬಿಸಿಲಿನ ನಗು ಯಾರನ್ನೂ ಸೆರೆ ಹಿಡಿಯದಿರಲಾರವು. ಯಾರ ಮನಸ್ಸನ್ನೂ ನೋಯಿಸದಿರುವ ಸಹಜ, ನೈಜ ಹಾಗೂ ಸೂಕ್ಷ್ಮವಾದ ಹಾಸ್ಯ ಶೈಲಿ ಅವನದು. ಅವನು ಬರೆದ "ವ್ಹಿಕಾರ ಆಫ್ ವೇಕಫೀಲ್ಡ್" ಕಾದಂಬರಿ ಅವನ ಕಾಲದಲ್ಲಿ ಜನರನ್ನು ರಂಜಿಸಿತು. ಇಂದಿಗೂ ಕೂಡ ಅದೊಂದು ಹಾಸ್ಯರಸದಲ್ಲಿ ಭಟ್ಟಿ ಇಳಿಸಿದ ಕೃತಿ. ಅವನ ಕೃತಿಗಳಲ್ಲಿ ಕಾಠಿಣ್ಯತೆ ಕಂಡುಬರಲಾರದು. ವೈವಿಧ್ಯಮಯವಾದ ಹಾಗೂ ವೈಶಿಷ್ಟ್ಯಪೂರ್ಣವಾದ ಹಾಸ್ಯ ಶೈಲಿಯನ್ನು ಅವನ ಕೃತಿಗಳಲ್ಲಿ ನಾವು ಕಾಣುತ್ತೇವೆ. ಇಂಗ್ಲೀಷ್ ಸಾಹಿತ್ಯದ ಎಲ್ಲ ಭಾಗ ಗಳಲ್ಲಿಯೂ ಆತ ಕೈಯಾಡಿಸಿದ್ದಾನೆ.

ನಿಜವಾದ ಅರ್ಥದಲ್ಲಿ ಆತ ಮಹಾನ್ ಹಾಸ್ಯಗಾರ. ತನ್ನ ತಿಳಿಹಾಸ್ಯದ ಮೂಲಕವಾಗಿ ಗೋಲ್ಡ್‌ಸ್ಮಿಥ್ ತನ್ನ ಮೃದು ಸ್ವಭಾವದ ಪರಿಚಯ ಮಾಡಿಕೊಡುತ್ತ ಅದರಿಂದಲೇ ನಮ್ಮ ಮನಸ್ಸನ್ನು ಗೆದ್ದಿದ್ದಾನೆ. ಅವನು ಬರೆದ ಅರ್ಥಪೂರ್ಣ ಕೃತಿ

"ಸಿಟಿಝನ್ ಆಫ್ ದಿ ವರ್ಲ್ಡ" ಓಲೆಗಳ ರೂಪದಲ್ಲಿದೆ. ಹಾಸ್ಯದ ಪ್ರಸಂಗಗಳನ್ನು ಹಾಗೂ ಹಾಸ್ಯ ಪಾತ್ರಗಳ ಪರಿಚಯುವನ್ನು ಕೃತಿಯ ಮೂಲಕ ಅವನು ನಮಗೆ ಮಾಡಿಕೊಟ್ಟಿದ್ದಾನೆ. ಅವನ ಕಾಲದ ಇಂಗ್ಲಂಡ ಜನರ ಜೀವನದ ಏರುಪೇರುಗಳಿಗೆ, ಅವರ ಸ್ವಭಾವಕ್ಕೆ ಅದು ಕೈಗನ್ನಡಿಯಾಗಿದೆ; ಅದರ ಮೂಲಕ ಅವನು ತನ್ನ ಕಾಲದ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತ್ಯಂತರಗಳ ಪರಿಚಯುವನ್ನು ಮಾಡಿಕೊಟ್ಟಿದ್ದಾನೆ. ಇವನು ಸಾಮ್ಯವಾದಿ ಹಾಗೂ ಸ್ನೇಹಪರತೆಯ ವಿಡಂಬನಕಾರ. ಅವನ ಹಾಸ್ಯ ಸಾಹಿತ್ಯ ಎಲ್ಲರನ್ನೂ ನಕ್ಕು ನಗಿಸಿ ಮಧುರ ಭಾವನೆಗಳನ್ನುಂಟು ಮಾಡುತ್ತಸೆಯೋ ಹೊರತು ಕಹಿ ಭಾವನೆ ಗಳನ್ನಲ್ಲ.

"ಗುಡ್ ನೇಚರ್ಡ್ ಮ್ಯಾನ್" ಹಾಗೂ "ಷಿ ಸ್ಟೂಪ್ಸ್ ಟು ಕಾಂಕರ" ಇವು ಗೋಲ್ಡಸ್ಮಿಥ್ ಹರ್ಷನಾಟಕಗಳು. ಕೆಲವು ಪಾತ್ರಗಳ ಸ್ವಭಾವ ವೈಚಿತ್ರ್ಯಗಳ ಪರಿಷ್ಕರಣೆಯೇ ಈ ವೈನೋದಿಕೆಗಳ ಮೂಲೋದ್ದೇಶ. ಮೋಜು ಹಾಗೂ ಹಾಸ್ಯದಿಂದ ಇವು ತುಂಬಿವೆ. ಈ ಮೊದಲು ಪ್ರಚಲಿತವಾಗಿದ್ದ ಭಾವಾತಿ ರೇಕವುಳ್ಳ ವೈನೋದಿಕೆಗಳ ವಿರುದ್ಧ ಈ ನಾಟಕಗಳನ್ನು ಇವನು ರಚಿಸಿದ್ದಾನೆ. ತನ್ನ ಕಾಲದ ಪ್ರಬಂಧ ಸಾಹಿತಿಗಳಲ್ಲಿ ಗೋಲ್ಡ ಸ್ಮಿಥ್ ಶ್ರೇಷ್ಠನಾಗಿದ್ದಾನೆ. ಅವನ ಪ್ರಬಂಧಗಳು ಶುದ್ಧ ಹಾಸ್ಯ ಸಾಹಿತ್ಯಕ್ಕೆ ಸೇರಿದವುಗಳಾಗಿವೆ. ಈತನ ಹಾಸ್ಯಶೈಲಿ ಮಾನ ವೀಯತೆಯಲ್ಲಿ ಅದ್ದಿ ತೆಗೆದ ಹಾಗಿದೆ. ಅವನ ಕಾಲದ ಕಲ್ಪ ಬುದ್ಧಿಯ ಕಟುಹಾಸ್ಯಗಾರರ ಜಾಡನ್ನೇನೂ ಇವನು ಹಿಡಿಯ

ಲಿಲ್ಲ. ಈತನ ಹಾಸ್ಯ ಆಂಗ್ಲ ರಾಷ್ಟ್ರೀಯತೆಯ ಹಾಗೂ ಸಂಸ್ಕೃತಿಯ ದ್ಯೋತಕವಾಗಿದೆಯೆನ್ನಬಹುದು.

vi) **ಶೆರಿಡಾನ್ :** ಇವನು ಗೋಲ್ಡ್‌ಸ್ಮಿಥ್‌ನ ಸಮಕಾಲೀನ ವಿನೋದ ನಾಟಕಕಾರ. ವಿಡಂಬನಾತ್ಮಕ ಹಾಸ್ಯ ಶೈಲಿಯಲ್ಲಿ ಈತ ತನ್ನ ವೈನೋದಿಕೆಗಳನ್ನು ಬರೆದಿದ್ದಾನೆ. ಇವನು ಜೀವನದ ವಿಮರ್ಶಕ, "ದಿ ರೈವ್ಹಲ್ಸ್" "ದಿ ಸ್ಕೂಲ್ ಫಾರ್ ಸ್ಕ್ಯಾಂಡಲ್"ಗಳು ಶೆರಿಡಾನ್ ಬರೆದ ಹರ್ಷನಾಟಕಗಳು. ಚತುರೋಕ್ತಿಗಳು, ವಿನೋದ ಪ್ರಸಂಗಗಳು, ಸಮಕಾಲೀನ ಸಮಾಜದ ಏರುಪೇರುಗಳ ವ್ಯಂಗ್ಯ ಹಾಗೂ ವಿಡಂಬನೆಗಳು ಈ ವಿನೋದ ನಾಟಕಗಳ ಮುಖ್ಯ ವೈಶಿಷ್ಟ್ಯ. ಸುಶಿಕ್ಷಿತ ಪ್ರೇಕ್ಷಕರು ಹಾಗೂ ಓದುಗರಿಗೆ ಮಾತ್ರ ಅರ್ಥವಾಗಬಲ್ಲ ಈ ನಾಟಕಗಳು ಸಮಾಜದ ಮೇಲ್ಮಟ್ಟದ ವರ್ಗಗಳಲ್ಲಿ ಹೆಸರುವಾಸಿಯಾದವು. ರೊಮ್ಯಾಂಟಿಕ್ ಸಂಪ್ರದಾಯದ ಹಾಸ್ಯವನ್ನು ಈ ವಿನೋದ ನಾಟಕಗಳಲ್ಲಿ ಕಾಣುತ್ತೇವೆ. ಈ ವೈನೋದಿಕೆಗಳಲ್ಲಿ ಕಂಡುಬರುವ ಪಾತ್ರಗಳು ಮಾದರಿಯವಾಗಿವೆ. ತಮಾಷಾ ಮಾದರಿಯಲ್ಲೇ "ದಿ ಕ್ರಿಟಿಕ್" ಎಂಬ ಕೃತಿಯನ್ನು ಇವನು ರಚಿಸಿದನು. ಇದರಲ್ಲಿ ಪ್ರಹಸನವೂ ಸೇರಿಕೊಂಡಿದೆ. ಇಂಗ್ಲೀಷ್ ವೈನೋದಿಕೆಗಳ ಪುನರುತ್ಥಾನದ ಕೆಲಸವನ್ನು ಇವನು ಕೈಕೊಂಡ. ರಾಜಪ್ರಭುತ್ವದ ಪುನರುತ್ಥಾನದ ವೈನೋದಿಕೆಗಳಿಗೂ ಶೆರಿಡಾನ್‌ನ ವೈನೋದಿಕೆಗಳಿಗೂ ಬಹು ಸಾಮ್ಯ. ಸಿದ್ಧ ಚತುರೋಕ್ತಿಗಳಿಗೂ ಇವನ ನಾಟಕಗಳಲ್ಲಿ ಕೊರತೆಯಿಲ್ಲ. ಭಾವಾತಿರೇಕತೆಯೂ ಇವನ ಹರ್ಷ ನಾಟಕಗಳಲ್ಲಿ ಜೊತೆಗೂಡಿದೆ. ಶೇಕ್ಸಪೀಯರನ ಹರ್ಷನಾಟಕಗಳಲ್ಲಿ

ಜೀವನದ ಆಳವಾದ ದೃಷ್ಟಿಕೋನವನ್ನು ಕಂಡರೆ ಶೆರಿಡಾನ್‌ನ ನಾಟಕಗಳಲ್ಲಿ ಜೀವನದ ಬಾಹ್ಯರೂಪವನ್ನು ಮಾತ್ರ ಕಾಣು ತ್ತೇವೆ. ನಿತ್ಯ ಜೀವನದಲ್ಲಿಯ ಅನೇಕ ಪ್ರಸಂಗಗಳು ಇವನ ನಾಟಕಗಳಲ್ಲಿ ಕಂಡುಬರುತ್ತವೆ. ಹಾಸ್ಯದ ಜೊತೆಗೆ ಅಣಕ, ವಿಡಂಬನಗಳೂ ಸೇರಿಕೊಂಡಿವೆ. ವಿನೋದದ ಘಟನೆಗಳನ್ನು ಮಾರ್ಮಿಕವಾಗಿ, ವಿನೋದಪೂರ್ಣವಾಗಿ ಜೋಡಿಸಲು ಶೆರಿಡಾನ- ಒಳ್ಳೇ ಪ್ರಾವೀಣ್ಯತೆಯನ್ನು ಪಡೆದಿದ್ದನು.

v) **ಸ್ಮಾಲೆಟ್ :** ಈ ಯುಗದ ಕಾದಂಬರಿಕಾರರಲ್ಲಿ ಇವನು ವಿನೋದ ಶೈಲಿಯ ಕಾದಂಬರಿಕಾರ. "ಹಂಫ್ರೀ ಕ್ಲಿಂಕರ್" ಮತ್ತು "ರೊಡ್ರಿಕ್ ರ‍್ಯಾಂಡಮ್" ಇವೆರಡು ಕಾದಂಬರಿಗಳನ್ನು ಬರೆದಿದ್ದಾನೆ. ಅವು ಹಾಸ್ಯ ಪಾತ್ರಗಳಿಂದೊಡ ಗೂಡಿವೆ; ಆ ಪಾತ್ರಗಳಲ್ಲಿ ಲಲಿತಪೂರ್ಣವಾದ ತಿಳಿಹಾಸ್ಯವು ಹರಿದು ಬಂದಿದೆ. ಹಾಸ್ಯ ಸನ್ನಿವೇಶ ಹಾಗೂ ಪಾತ್ರಗಳು ಓದುಗರನ್ನು ನಗೆಯ ಅಲೆಗಳಲ್ಲಿ ತೇಲಾಡಿಸುತ್ತವೆ. ವಿಮ ರ್ಶಕ ಥ್ಯಾಕರೆ ಈ ಕಾದಂಬರಿಗಳಲ್ಲಿ ಹುದುಗಿದ ಇಂಗ್ಲೀಷ ಪರಂಪರೆಯ ಹಾಸ್ಯ ಶೈಲಿಯನ್ನು ಬಹುವಾಗಿ ಮೆಚ್ಚಿದ್ದಾನೆ. ಅವನ ಮಾತುಗಳಲ್ಲಿ ಸ್ಮಾಲೆಟ್‌ನ ಹಾಸ್ಯ ಶೈಲಿ ನಿತ್ಯನೂತನ ವಾಗಿದೆ, ಅಕ್ಷಯವಾಗಿದೆ ಹಾಗೂ ಆರೋಗ್ಯಕರವಾಗಿದೆ. ಇವನು ವಿನೋದ ಶೈಲಿಯ ವಿಕಟ ಚಿತ್ರಗಾರ. ಸಮಕಾಲೀನ ಸಂಸ್ಕೃತಿಯ ಏರುಪೇರುಗಳನ್ನುತನ್ನ ಕೃತಿಗಳಲ್ಲಿ ಯಥಾವತ್ತಾಗಿ ಚಿತ್ರಿಸಿ ಟೀಕಿಸಿದ್ದಾನೆ. ನೀತಿಬೋಧನೆಯನ್ನು ಅವನ ಹಾಸ್ಯ ಕಾದಂಬರಿಗಳಲ್ಲಿ ಕಾಣಬಹುದು.

iv) **ಸ್ಟರ್ನ್ :** ಈತನ ಕಾದಂಬರಿ "ಟೆಸ್ಟ್ರಮ್ ಶ್ಯಾಂಡಿ" ವಿಕಟ ಹಾಸ್ಯಯುಕ್ತವಾಗಿದೆ. ಇವನ ಹಾಸ್ಯಶೈಲಿ ನಕಲಿಯಿಂದ ಕೂಡಿದ್ದು ಓದುಗರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತದೆ. ವಿಮರ್ಶಕ ಥ್ಯಾಕರೆ ಸ್ಟರ್ನನನ್ನು ವಿದೂಷಕನೆಂಬ ಅನ್ವರ್ಥಕ ಹೆಸರಿನಿಂದ ಕರೆದಿದ್ದಾನೆ. ಥ್ಯಾಕರೆಯ ದೃಷ್ಟಿಯಲ್ಲಿ ಇವನು ಹೆಸರಾಂತ ಕಾದಂಬರಿಕಾರನಲ್ಲ. "ಹಾಸ್ಯ ಸಾಹಿತ್ಯಗಳಲ್ಲಿರ ಬೇಕಾದ ಗುಣಗಳು ಇವನಲ್ಲಿರಲಿಲ್ಲ. ಇವನೊಬ್ಬ ಭಾವಾತಿ ರೇಕವುಳ್ಳ ಭಾವಜೀವಿ. ಕ್ಷುಲ್ಲಕವಾದ ನಕಲಿ ಸನ್ನಿವೇಶಗಳಿಂದ ಜನರನ್ನು ನಗಿಸಿದ್ದಾನೆ; ಆದರಲ್ಲಿಯೂ ಭಾವಾತಿಶಯವನ್ನು ಕಾಣಬಹುದು. ಆದರೆ ಸ್ಟರ್ನನ ಹಾಸ್ಯ ಶೈಲಿ "ರೆಬೆಲೈಸಿಸ್" ಮಾದರಿಯದಾಗಿದೆ." – ಈ ರೀತಿ ಥ್ಯಾಕರೆಯು ಇವನ ಹಾಸ್ಯ ಶೈಲಿಯ ಬಗೆಗೆ ಅಸಮಂಜಸ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ದ್ದಾನೆ. ಏಕೆಂದರೆ ಇವನ ಕಾದಂಬರಿಗಳಲ್ಲಿ ಕಾಣಬರುವದು ಬಹು ಸೂಕ್ಷ್ಮವಾದ ಹಾಸ್ಯ. ಆದರೂ ಹಾಸ್ಯ ಸನ್ನಿವೇಶ ಗಳನ್ನು ನಿರೂಪಿಸುವಲ್ಲಿ ಇವನು ಬಹು ಮೇಧಾವಿ. ಎಷ್ಟೇ ಬುದ್ಧಿವಂತಿಕೆಯನ್ನು ತೋರಿಸಿದರೂ ಶೇಕ್ಸಪೀಯರ ಹಾಗೂ ಭಾಸರನ ಮಟ್ಟವನ್ನು ಇವನ ಹಾಸ್ಯಶೈಲಿ ನಿಲುಕಲಾರದು.

# ೭. ಹತ್ತೊಂಬತ್ತನೆಯ ಶತಕದ ಇಂಗ್ಲೀಷ ಸಾಹಿತ್ಯ ಮತ್ತು ವಿಡಂಬನೆ

A) **ಹತ್ತೊಂಬತ್ತನೆಯ ಶತಕದ ಇಂಗ್ಲೀಷ ಸಾಹಿತ್ಯವನ್ನು ವಿಮರ್ಶಕರು ಎರಡು ವಿಭಾಗಗಳನ್ನಾಗಿ ವಿಭಜಿಸಿದ್ದಾರೆ.** ೧೭೭೮ ರಿಂದ ೧೮೩೨ರ ಕಾಲವನ್ನು ವರ್ಡ್ಸ್‌ವರ್ಥ ಕವಿಯ ಯುಗವೆಂದು ಕರೆಯಲಾಗಿದೆ. ೧೮೩೩ ರಿಂದ ೧೮೮೭ರ ವರೆಗಿನ ಕಾಲಮಾನವನ್ನು ಟೆನಿಸನ್ ಕವಿಯ ಯುಗವೆಂದು ಅಥವಾ ವ್ಹಿಕ್ಟೋರಿಯಾ ಯುಗದ ಪ್ರಥಮಾರ್ಧವೆಂದು ಕರೆಯಲಾಗಿದೆ. ವರ್ಡ್ಸ್‌ವರ್ಥ ಕವಿಯ ಯುಗದಲ್ಲಿ ಗದ್ಯಕ್ಕಿಂತ ರೊಮ್ಯಾಂಟಿಕ್ ಸಂಪ್ರದಾಯದ ಪದ್ಯಸಾಹಿತ್ಯವೇ ಹೆಚ್ಚಾಗಿ ರಚಿಸಲ್ಪಟ್ಟಿದೆ. ಹಾಸ್ಯಕ್ಕಿಂತ ವಿಡಂಬನಶೈಲಿಯೇ ಈ ಯುಗದ ಸಾಹಿತ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ವಿಡಂಬನಶೈಲಿಯ ಈ ಯುಗದ ಕವಿಗಳು ಫ್ರೆಂಚ ಕ್ರಾಂತಿಯಿಂದ ಸ್ಫೂರ್ತಿ ಪಡೆದವರಾಗಿದ್ದಾರೆ. ಬೈರನ್, ಶೆಲ್ಲಿ, ಥಾಮಸ್ ಮೂರ್ ಹಾಗೂ ಸಿಡ್ನೆಸ್ಮಿಥ್ ಮುಂತಾದವರು ವಿಡಂಬನ ಸಾಹಿತ್ಯವನ್ನು ವಿಸ್ತರಿಸಿದರು. ಈ ಯುಗದ ಮಹಿಳಾ ಕಾದಂಬರಿಗಾರ್ತಿ ಜೇನ್ ಆಸ್ಟಿನ್ ತನ್ನ ವಿನೋದಪೂರ್ಣ ಕೌಟುಂಬಿಕ ಕಾದಂಬರಿಗಳನ್ನು ರಚಿಸಿ ಇಂಗ್ಲೀಷ್ ಸಂಪ್ರದಾಯ ಹಾಗೂ ರಾಷ್ಟ್ರೀಯತೆಗಳನ್ನು ಬಿಂಬಿಸುವ ಹಾಸ್ಯ ಶೈಲಿಯನ್ನು ಜನಪ್ರಿಯಗೊಳಿಸಿದಳು. ಥಾಮಸ್ ಮೂರ್ ಐರಿಶ್ ಶೈಲಿಯ ಚತುರೋಕ್ತಿಯನ್ನು ತನ್ನ ಕಾವ್ಯ

ಗಳಲ್ಲಿ ಪ್ರದರ್ಶಿಸಿದ್ದಾನೆ. ಥಾಮಸ್ ಹುಡ್ ಈ ಯುಗಕ್ಕೆ ಸೇರಿದವನು. ಇವನು ತನ್ನ ಕವನಗಳಲ್ಲಿ ಶ್ಲೇಷೆ ಹಾಗೂ ಹಾಸ್ಯವನ್ನು ಧಾರಾಳವಾಗಿ ಉಪಯೋಗಿಸಿದ್ದಾನೆ. ಈ ಶತಮಾನದಲ್ಲಿ "ಮ್ಯಾಗಿರಿಘನ್" ಎಂಬ ಮಾಸಪತ್ರಿಕೆಗಳು ಪ್ರಾರಂಭವಾಗಿ ಲಲಿತ ಪ್ರಬಂಧಗಳ ಬೆಳವಣಿಗೆಗೆ ಪ್ರೋತ್ಸಾಹ ದೊರಕಿತು. ಚಾರ್ಲ್ಸ್ ಲ್ಯಾಂಬ್ ಎಂಬವನು ಲಲಿತ ಪ್ರಬಂಧಗಳಿಂದ ಸಾಹಿತ್ಯವನ್ನು ಉನ್ನತ ಮಟ್ಟಕ್ಕೇರಿಸಲು ಪ್ರಯತ್ನಿಸಿದನು. ವಿಲಿಯಂ ಹ್ಯಾಜಲಿಟ್ ಈ ಯುಗದ ಮತ್ತೊಬ್ಬ ಲಲಿತಪ್ರಬಂಧಕಾರ. ಇವನು ಇಂಗ್ಲೀಷ್ ಹಾಸ್ಯಸಾಹಿತ್ಯಕ್ಕೆ ತನ್ನದೇ ಆದ ಕಾಣಿಕೆಯನ್ನು ಸಮರ್ಪಿಸಿದ್ದಾನೆ. ವಾಲ್ಟರ್ ಸ್ಕಾಟ್ ಈ ಯುಗದ ಸುಪ್ರಸಿದ್ಧ ಸುಪ್ರಸಿದ್ಧ ಕಾದಂಬರಿಕಾರ. ಇವನು ತನ್ನ ರೊಮ್ಯಾಂಟಿಕ್ ಸಂಪ್ರದಾಯದ ಕಾದಂಬರಿಗಳ ಮೂಲಕ ಸ್ಕಾಟಿಶ್ ಗಂಡು ಶೈಲಿಯ ಹಾಸ್ಯವನ್ನು ಪ್ರದರ್ಶಿಸಿದ್ದಾನೆ.

B) **ವಿಕ್ಟೋರಿಯನ್ ಯುಗದ ಸಾಹಿತ್ಯದ ವೈಶಿಷ್ಟ್ಯಗಳು ವಿಚಿತ್ರವಾಗಿವೆ.** ಈ ಯುಗದ ಸಾಹಿತ್ಯದಲ್ಲಿ ವೈವಿಧ್ಯತೆಯನ್ನು ಕಾಣಬಹುದಾಗಿದೆ. ಪ್ರಜಾಪ್ರಭುತ್ವದ ಶೀಘ್ರ ಬೆಳವಣಿಗೆಯು ಸಾಮಾಜಿಕ ಹಾಗೂ ರಾಜಕೀಯ ಪರಿಸರಗಳಲ್ಲಿಯೂ ಮತ್ತು ಔದ್ಯೋಗಿಕ ಕ್ರಾಂತಿ ಮತ್ತು ವಿಜ್ಞಾನದ ಬೆಳವಣಿಗೆಯು ಸಾಮಾನ್ಯ ಜೀವನದ ಪರಿಸರದಲ್ಲಿಯೂ ಹೊಸ ಅಲೆಗಳನ್ನು ಎಬ್ಬಿಸಿತು. ಸಂಪ್ರದಾಯ ಹಾಗೂ ಕಟ್ಟುನಿಟ್ಟಿನ ಜೀವನವನ್ನು ಒಂದೆಡೆ ಕಂಡರೆ ಇವುಗಳಿಗೆ ವಿರುದ್ಧವಾಗಿ ಹೊಸ ಕ್ರಾಂತಿಕಾರಿ ವಿಚಾರಗಳನ್ನು ಇದೇ ಯುಗದಲ್ಲಿ ಕಾಣಬಹುದಾಗಿದೆ. ಈ

ಯುಗದ ಮುಖ್ಯ ಸಾಹಿತ್ಯ ಪ್ರಕಾರ ಕಾದಂಬರಿಯಾಗಿದೆ. ಚಾರ್ಲಸ್ ಡಿಕೆನ್ಸ ತನ್ನ ನೈಜ ಹಾಗೂ ಸಹಜ ಹಾಸ್ಯದಿಂದ ಕೂಡಿದ ವಿನೋದ ಕಾದಂಬರಿಗಳನ್ನು ರಚಿಸಿ ಇಂಗ್ಲೀಷ್ ಹಾಸ್ಯ ಸಾಹಿತ್ಯಕ್ಕೆ ಅಮೋಘ ಕೊಡುಗೆ ನೀಡಿದ್ದಾನೆ. ಇವನದು ಇಂಗ್ಲೀಷ್ ನೆಲ ಜಲವನ್ನು ಹಾಗೂ ಇಂಗ್ಲೀಷ್ ಜನರ ಮಣ್ಣಿನ ವಾಸನೆಯನ್ನು ಹೊರಹೊಮ್ಮುವ ತಿಳಿಯಾದ ನಕ್ಕು ನಲಿಯುವ ಹಾಸ್ಯ. ವಿಲಿಯಂ ಥ್ಯಾಕರೇ ಈ ಯುಗದ ವಿಡಂಬನಕಾರ. ಸ್ವದೇಶಿ ಶೈಲಿಯ ಚುರುಕಾದ ವಿಡಂಬನವನ್ನುಪಯೋಗಿಸಿ ತನ್ನ ಕಾದಂಬರಿಗಳನ್ನು ರಚಿಸಿದ್ದಾನೆ. ಜಾರ್ಜ ಇಲಿಯಟ್ ಈ ಯುಗದ ಕಾದಂಬರಿಕಾರಳಾಗಿದ್ದು ತನ್ನ ನಯವಾದ ಹಾಗೂ ಸಂಪದ್ಭರಿತ ಹಾಸ್ಯ ಶೈಲಿಯುಕ್ತ ಕಾದಂಬರಿಗಳಿಂದ ಇಂಗ್ಲೀಷ್ ಹಾಸ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾಳೆ. ಮ್ಯಾಥ್ಯೂ ಆರ್ನಾಲ್ಡ್ ಈ ಕಾಲದ ಖ್ಯಾತ ಗದ್ಯ ಸಾಹಿತ್ಯಕಾರ. ಇವನ ಸಾಹಿತ್ಯದಲ್ಲಿ ಅಣಕ ಹಾಗೂ ಪರಿಹಾಸ್ಯಗಳನ್ನು ಕಾಣಬಹುದು. ಈ ಯುಗದ ಗದ್ಯ ಹಾಗೂ ಪದ್ಯ ಸಾಹಿತ್ಯ ಪ್ರಕಾರಗಳಲ್ಲಿ ಹಾಸ್ಯವು ವಿರಳವಾಗಿದೆಯೆಂದೇ ಹೇಳಬಹುದು. ಇದೇ ಕಾಲ ಮಾನಕ್ಕೆ ಸೇರಿದ ಆರ್. ಎಲ್. ಸ್ಟೀವ್ಹನ್‌ಸನ್ ಲಲಿತಪ್ರಬಂಧ ಕಾರ. ತಿಳಿಯಾದ, ವಿನೋದಶೀಲ ಹಾಸ್ಯಶೈಲಿಯನ್ನುಪ ಯೋಗಿಸಿ ಓದುಗರನ್ನು ನಕ್ಕು ನಗಿಸಿದ್ದಾನೆ. ಈ ಯುಗದ ಇನ್ನೊಬ್ಬ ಖ್ಯಾತ ಕಾದಂಬರಿಕಾರ ಹಾಗೂ ವಿಮರ್ಶಕ ಜಾರ್ಜ ಮೆರಿಡಿಥ್ ತನ್ನ ನೂತನ ಹಾಸ್ಯ ಸಿದ್ಧಾಂತವನ್ನು ಪ್ರತಿಪಾದಿಸಿ ದ್ದಾನೆ. ಆ್ಯಂಥನೀ ಟ್ರೋಲೋಪ್ ಕೂಡ ಈ ಕಾಲದ ಪ್ರಸಿದ್ಧ

ಹಾಸ್ಯ ವಿಡಂಬನಕಾರ. ಒಂದು ತರಹದ ಐದು ಚರಣಗಳ ಹಾಸ್ಯ ಹಾಗೂ ವಿಡಂಬನಗಳಿಂದ ಕೂಡಿದ ನಕಲಿ ಪದ್ಯಗಳು ಈ ಯುಗದಲ್ಲಿ ಹಾಸ್ಯ ಕವಿಗಳಿಂದ ರಚಿಸಲ್ಪಟ್ಟಿವೆ. ಈ ಚಿಕ್ಕ ಕವನಗಳಲ್ಲಿ ರಸಿಕೋಕ್ತಿಯೂ ಕೂಡಿಕೊಂಡಿದೆ. ಇವುಗಳಿಗೆ ವಿಮರ್ಶಕರು "Light verse" ಅಥವಾ "Limericks" ಎಂಬ ಅಭಿದಾನವನ್ನು ಕೊಟ್ಟಿದ್ದಾರೆ. ಈ ಯುಗದ ಕವಿ ಕವೆಂಟ್ರಿ ಪ್ಯಾಟ್ ಮೋರ್ ವಿಡಂಬನ ಕವನಗಳನ್ನು ರಚಿಸಿದ್ದಾನೆ. ಬೆಂಜಾಮಿನ್ ಡಿಸ್ರೇಲಿ ಈ ಯುಗದ ಇನ್ನೊಬ್ಬ ವಿಡಂಬನಕಾರ. ಕಾರ್ಲೈಲ್ ಹಾಗೂ ಜಾನ್ ರಸ್ಕಿನ್‌ರು ಇದೇ ಯುಗಕ್ಕೆ ಸೇರಿದ ಪ್ರಸಿದ್ಧ ವಿಡಂಬನಕಾರರು. ಸುಪ್ರಸಿದ್ಧ ಕವಿ ಮ್ಯಾಥ್ಯೂ ಆರ್ನಾಲ್ಡ್ ಕೂಡ ವಿಕ್ಟೋರಿಯಾ ಯುಗದ ವಿಮರ್ಶಕ ಮತ್ತು ವಿಡಂಬನಕಾರ.

i) **ಬೈರನ್ :** ಈತ ರೊಮ್ಯಾಂಟಿಕ್ ಸಂಪ್ರದಾಯಕ್ಕೆ ಸೇರಿದ ಕವಿ. ಇವನು ಸಾಹಿತ್ಯ ಪಂಥದಲ್ಲಿ ಅಗ್ರಗಣ್ಯ. ಪೋಪ್ ಹಾಗೂ ಡ್ರೈಡನ್‌ರ ಹೊಸ ಕ್ಲಾಸಿಕಲ್ ಜಾಡನ್ನನುಸರಿಸಿ ಬೈರನ್ ತನ್ನ ಪ್ರಥಮ ವಿಡಂಬನಕಾವ್ಯ "ಇಂಗ್ಲೀಷ್ ಬಾರ್ಡ್ಸ್ ಹಾಗೂ ಸ್ಕಾಚ್ ರಿವ್ಯೂವರ್ಸ್"ವನ್ನು ಪ್ರಕಟಿಸಿದನು. ಇವನು ಮೊದಲಿನಿಂದಲೂ ಕ್ರಾಂತಿಕಾರೀ ವಿಡಂಬನಕಾರ. ವಿಡಂಬನವು ಅವನ ಜೀವದುಸಿರಾಗಿದೆ. ನಂತರದ ವರ್ಷಗಳಲ್ಲಿ ಇಟಾಲಿಯನ್ ಪಕಟ ಕವಿಗಳ ಕಾವ್ಯವನ್ನನುಕರಿಸಿ ಬೈರನ್ ಅಣಕ, ವಿಡಂಬನ ಹಾಗೂ ವ್ಯಂಗ್ಯಮಯವಾದ ಕಾವ್ಯಗಳನ್ನು ರಚಿಸಿದನು. ಅವನು ಬರೆದ ಕೊನೆಯ ಹಾಗೂ ಪ್ರಸಿದ್ಧವಾದ

ವಿಕಟ ಹಾಸ್ಯದ ವಿಡಂಬನ ಕಾವ್ಯ "ಡಾನ್ ಜಾನ್" ಆಗಿದೆ; ಈ ಕೃತಿಯಲ್ಲಿ ಇವನು ಕ್ರೂರ ಸಮಾಜವನ್ನು ಟೀಕಿಸಿದ್ದಾನೆ ಅಲ್ಲದೆ ತನ್ನ ಕಾಲದ ಇಂಗ್ಲೆಂಡಿನ ಸಾಮಾಜಿಕ ಸಂಸ್ಥೆಗಳನ್ನು ನಿರ್ದಯವಾಗಿ ಟೀಕಿಸಿದ್ದಾನೆ. ಇವನ ವಿಡಂಬನ ಶೈಲಿಯು ಕ್ರೂರ, ಅಸಭ್ಯ ಹಾಗೂ ಅಮಾನುಷವಾಗಿದೆ ಎಂಬುದು ವಿಮರ್ಶಕರ ಟೀಕೆ; ಇದು ಸ್ವಲ್ಪಮಟ್ಟಿಗೆ ನಿಜವೆನ್ನಬಹುದು. ಸ್ವಾತಂತ್ರ್ಯದ ಅದಮ್ಯ ಪ್ರೇಮ ಹಾಗೂ ಪ್ರಾಮಾಣಿಕತೆಯ ಭಾವನೆಗಳೇ ಬೈರನ್‌ನನ್ನು ಪ್ರಸಿದ್ಧ ವಿಡಂಬನಕಾರನನ್ನಾಗಿ ಮಾರ್ಪಡಿಸಿವೆಯೆನ್ನಬಹುದು. ಆದರೆ ಇವನ ಶೈಲಿ ಕ್ರಿಯಾಶೀಲವಾಗಿದೆ. ಇವನ ಪ್ರಸಿದ್ಧವಾದ ಕಾವ್ಯ "ಚೈಲ್ಡ್ ಹೆರೋಲ್ಡ್"ದಲ್ಲೂ ಕೂಡ ಅಪ್ರತ್ಯಕ್ಷವಾಗಿ ವಿಡಂಬನೆಯು ತುಂಬಿಕೊಂಡಿದೆ. ಈ ಕಾಲದ ಫ್ರೆಂಚ ಕ್ರಾಂತಿ ಇವನನ್ನು ಸಾಕಷ್ಟು ಕೆರಳಿಸಿ ಅವನ ಮೇಲೆ ಪ್ರಭಾವ ಬೀರಿತು.

ii) **ಶೆಲ್ಲಿ :** ಈ ಕವಿ ಸ್ವಭಾವತಃ ಕ್ರಾಂತಿಕಾರಿ ಹಾಗೂ ಸ್ವಾತಂತ್ರ್ಯಪ್ರೇಮಿ. ದಬ್ಬಾಳಿಕೆ ಹಾಗೂ ಅನ್ಯಾಯಗಳ ವಿರುದ್ಧ ಇವನು ಮೊದಲಿನಿಂದಲೂ ತನ್ನ ಸಿಂಹಗರ್ಜನೆ ಮಾಡಿದ್ದಾನೆ. ಈತನ ಪದ್ಯಸಾಹಿತ್ಯದಲ್ಲಿ ವಿಡಂಬನೆ, ವ್ಯಂಗ್ಯ ಹಾಗೂ ಕ್ರಾಂತಿಕಾರೀ ವಿಚಾರಧಾರೆಗಳು ಸಾಕಷ್ಟು ಕಂಡುಬಂದರೂ ಯಾವ ವಿಮರ್ಶಕರೂ ಇದರ ವಿಷಯವಾಗಿ ಚಕಾರವೆತ್ತದಿರುವದು ನಿಜಕ್ಕೂ ಖೇದನೀಯ ಸಂಗತಿ. ಸಮಕಾಲೀನ ಸಮಾಜದ ಸಂಸ್ಥೆಗಳನ್ನು, ಚರ್ಚುಗಳನ್ನು ಹಾಗೂ ಸಂಪ್ರದಾಯಗಳನ್ನು ಇವನು ತನ್ನ ಕಾವ್ಯದಲ್ಲಿ ವ್ಯಂಗ್ಯವಾಗಿ ಟೀಕಿಸಿದ್ದಾನೆ. ಈತನ ಕೃತಿ

"ಕ್ವೀನ್ ಮ್ಯಾಬ್," "ದಿ ರಿವೋಲ್ಟ ಆಫ್ ಇಸ್ಲಾಮ್" ಹಾಗೂ "ಪ್ರೊಮಿಥಿಯನ್ ಅನಬೌಂಡ್"ಗಳಲ್ಲಿ ಮೇಲೆ ವಿವರಿಸಲ್ಪಟ್ಟ ಕವಿಯ ಭಾವನೆಗಳು ಪ್ರಕಟವಾಗಿವೆ. ಇವನ ಕಾವ್ಯದಲ್ಲಿ ಕಂಡುಬರುವ ವಿಡಂಬನ ಹಾಗೂ ವ್ಯಂಗ್ಯಗಳು ಬೌದ್ಧಿಕವಾಗಿವೆ. ಈತನು ಸಮಾಜ ಸುಧಾರಕನಾಗಿದ್ದರಿಂದಲೇ ಇಂಥ ಭಾವನೆಗಳು ಸಹಜ.

iii) **ಚಾರ್ಲ್ಸ್ ಲ್ಯಾಂಬ್ :** ಇವನು ಇಂಗ್ಲೀಷ್ ಹಾಸ್ಯ ಸಾಹಿತ್ಯದ ವಿಕಾಸದಲ್ಲಿ ಪ್ರಮುಖ ಪಾತ್ರವಹಿಸಿ ಪ್ರಸಿದ್ಧನಾದ ಹಾಸ್ಯ ಲೇಖಕನಾಗಿದ್ದಾನೆ. ತಾನು ಬರೆದ "ಎಲಿಯಾನ ಪ್ರಬಂಧ"ಗಳ ಮೂಲಕ ತನ್ನ ವಿಶಿಷ್ಟವಾದ ಲಾಲಿತ್ಯಪೂರ್ಣ ಹಾಸ್ಯಶೈಲಿಯನ್ನು ಪ್ರಕಟಪಡಿಸಿದ್ದಾನೆ. "ಎಲಿಯಾನ ಪ್ರಬಂಧ" ಗಳು ಹಾಸ್ಯಪೂರ್ಣ ಆಗಿವೆ. ಚತುರೋಕ್ತಿ, ತಿಳಿಹಾಸ್ಯ ಹಾಗೂ ತಮಾಷೆಗಳೂ ಇವನ ಲಲಿತಪ್ರಬಂಧಗಳಲ್ಲಿ ಪಸರಿಸಿವೆ. ತಾನು ವಿವರಿಸುವ ಪ್ರತಿಯೊಂದು ವಿಷಯವನ್ನು ಗೇಲಿಯ ದಿಕ್ಕಿಗೆ ತಿರುಗಿಸಿ ಓದುಗರನ್ನು ನಕ್ಕು ನಗಿಸಿ ನಲಿಸುವದು ಲ್ಯಾಂಬ್‌ನ ಹಾಸ್ಯಶೈಲಿಯ ಉದ್ದೇಶ. ರೊಮ್ಯಾಂಟಿಕ್ ಸಂಪ್ರದಾಯದವರಲ್ಲಿ ಈತ ಪ್ರಮುಖ ಹಾಸ್ಯಗಾರ. ಇವನ ಶೈಲಿಯಲ್ಲಿ ಆಳವಾದ ಹಾಗೂ ಕೋಮಲವಾದ ಪದರುಗಳು ಕಂಡುಬರುತ್ತವೆ. ಭಯಂಕರವಾದ ಮುಳ್ಳು ಕಂಟಿಯಿಂದ ಬೇರ್ಪಡಿಸಿ ತಂದ ಬಿಳಿಯ ಕುಸುಮದಂತೆ ಲ್ಯಾಂಬ್‌ನ ಹಾಸ್ಯ ಶೈಲಿ ನಯವಾಗಿದೆ. ಅನುಕಂಪ ಹಾಗೂ ಹಾಸ್ಯಗಳು ಇವನ ಪ್ರಬಂಧಗಳಲ್ಲಿ ಒಂದರ ಕ್ಕೊಂದು ಸಮರಸವಾಗಿವೆ. ಇವನ ಕೆಲವು ಪ್ರಬಂಧಗಳಲ್ಲಿ

ತಮಾಷೆಯ ಚುಟುಕುಗಳೇ ಹೆಚ್ಚಾಗಿ ಕಂಡುಬರುತ್ತವೆ. ಚತುರೋಕ್ತಿಯ ಸೌಜನ್ಯಶೀಲತೆ ಹಾಗೂ ಲಹರಿಯ ತಮಾಷೆ ಹಾಗೂ ಅನುಕಂಪದ ಹಾಸ್ಯಗಳು ಇವನ ಪ್ರಬಂಧಗಳ ವೈಶಿಷ್ಟ್ಯಗಳು.

iv) **ಜೇನ್ ಆಸ್ಟಿನ್ :** ನವ್ಯ ರೊಮ್ಯಾಂಟಿಕ್ ಯುಗದ ವಿಡಂಬನಕಾರ ಹಾಗೂ ಹಾಸ್ಯಗಾರರಲ್ಲಿ ಜೇನ್ ಆಸ್ಟಿನ್ ಪ್ರಮುಖಳು. ಸೌಮ್ಯವಾದ ವಿಡಂಬನೆ, ವ್ಯಂಗ್ಯ ಹಾಗೂ ಸೌಜನ್ಯಶೀಲವಾದ ನೈಜ ಹಾಸ್ಯಗಳು ಇವಳ ವಿನೋದ ಕಾದಂಬರಿಗಳಲ್ಲಿ ಕಂಡುಬರುವ ವಿವಿಧ ಮುಖಗಳು ಹಾಗೂ ಅವಿಭಾಜ್ಯ ಅಂಗಗಳು. "ಸೆನ್ಸ ಆ್ಯಂಡ್ ಸೆನ್ಸಿಬಿಲಿಟಿ"ಯು ಇವಳ ಕಾದಂಬರಿ; ಇದರಲ್ಲಿ ಭಾವಾತಿರೇಕವನ್ನು ವಿಡಂಬನ ಮಾಡಿದ್ದಾಳೆ. ಇದೇ ಕಾದಂಬರಿಯಲ್ಲಿ ಅಮ್ಮಾವ್ರ ಗಂಡನಂಥ ಗಂಡಸರನ್ನು ಹಾಗೂ ಭೋಗಲಾಲಸೆಗಳಿಂದ ಕೂಡಿದ ಸ್ವಾರ್ಥಿ ಹೆಂಡಂದಿರನ್ನು ವಿಡಂಬನಗೈದಿದ್ದಾಳೆ. ಇವಳ ವಿಡಂಬನ ಶೈಲಿಯು ನೀತಿಪರವಾಗಿದೆ.

ಅನೇಕ ವಿಮರ್ಶಕರ ಅಭಿಪ್ರಾಯದ ಪ್ರಕಾರ ಆಸ್ಟಿನ್‌ಳ ಕೌಟುಂಬಿಕ ಕಾದಂಬರಿಗಳನ್ನು ವೈನೋದಿಕೆಗಳನ್ನಾಗಿ ಪರಿವರ್ತಿಸಬಹುದು. ಜೀವನದ ಬಗೆಗೆ ಇವಳ ಸೌಜನ್ಯತೆ ಹಾಗೂ ಮಂದಸ್ಮಿತ ಹಾಸ್ಯ ದೃಷ್ಟಿಕೋನವನ್ನು ಅವಳ ಕಾದಂಬರಿಗಳಲ್ಲಿ ಕಾಣುತ್ತೇವೆ. ಸಮಕಾಲೀನ ಸಾಮಾಜಿಕ ಏರುಪೇರುಗಳನ್ನು ಹಾಗೂ ಹುಚ್ಚು ಹವ್ಯಾಸಗಳನ್ನು ನೋಡಿ ನಕ್ಕು ಬಿಡುವ ಹಾಸ್ಯಗಾರರ ಸಂಪ್ರದಾಯಕ್ಕೆ ಇವಳು ಸೇರಿದ್ದಾಳೆ. ಇವಳ ಕಾದಂಬರಿಗಳಲ್ಲಿ

ವೈನೋದಿಕೆಗಳ ರೀತ್ಯ ನೈಜವಾದ ರಂಜನೀಯ ಹಾಸ್ಯವು ಸಹಜವಾಗಿ ಪ್ರವಹಿಸುತ್ತದೆ. ಹಾಸ್ಯಪ್ರಸಂಗಗಳನ್ನು ಹಾಗೂ ವಿಲಕ್ಷಣಗಳಿಂದ ಕೂಡಿದ ವಿಚಿತ್ರ ಪಾತ್ರಗಳನ್ನು ಸಂಯೋಜಿಸಿ ಓದುಗರನ್ನು ಬಿದ್ದು ಬಿದ್ದು ನಗುವಂತೆ ಮಾಡುವದೇ ಅವಳ ವಿನೋದ ಕಾದಂಬರಿಗಳ ಮೂಲೋದ್ದೇಶ. ಅವಳ ಹರ್ಷ ಕಾದಂಬರಿಗಳಲ್ಲಿ ನಿರೂಪಿಸಲ್ಪಟ್ಟ ಹುಚ್ಚುತನವೇ ನಮ್ಮ ನಗೆಯ ಮೂಲವಾಗಿದೆ. ಶ್ರೀಮತಿ ಬೆನಟ್, ಸರ್ ವಾಲ್ಟರ್, ಈಲಿಯಟ್, ಶ್ರೀಮತಿ ನಾರಿಸ್,ಶ್ರೀಯುತ ಕಾಲಿನ್ಸ್ ಮುಂತಾದವರು ಆಸ್ಟಿನ್‌ಳ ಕಾದಂಬರಿಗಳಲ್ಲಿ ಬರುವ ಹಾಸ್ಯ ಪಾತ್ರಗಳು. ಅವರ ಹುಚ್ಚಾಪಟ್ಟೆ ಕಾರ್ಯಗಳು ಯಾರನ್ನೂ ನಗಿಸದೇ ಇರಲಾರವು. ಅವಳು ಬರೆದ "ಪ್ರೈಡ್ ಆಂಡ್ ಪ್ರೆಜ್ಯುಡಿಸ್" ಕಾದಂಬರಿಯಲ್ಲಿ ಹಾಸ್ಯದ ಜೊತೆಗೆ ವ್ಯಂಗ್ಯವೂ ಕಂಡುಬರುತ್ತದೆ. ಇವಳ ಹರ್ಷ ಕಾದಂಬರಿಗಳಲ್ಲಿ ಕೂಟಕೃತ್ಯಗಳು ಬಹು ಮೋಜಿನದಾಗಿವೆ. ತಮಾಷೆಯ ಮೂಲಕವಾಗಿ ಮನೆವಾರ್ತೆಯ ಜಗಳಗಳು, ಪ್ರಣಯಪ್ರಸಂಗಗಳು ಹೆಚ್ಚು ಮನರಂಜನೀಯವಾಗಿವೆ. ಕೂಟ ಕೃತ್ಯಗಳಿಂದಾಗಿ ಈ ಕಾದಂಬರಿಗಳು Comedy of Intrigueವನ್ನು ಹೋಲುತ್ತವೆ. ಜೀವನದ ಬಗೆಗೆ ಅವಳಿಗಿದ್ದ ವೈನೋದಿಕ ದೃಷ್ಟಿಯೇ ಈ ಸರಸ ಕಾದಂಬರಿಗಳ ಸೃಷ್ಟಿಗೆ ಕಾರಣವಾಗಿದೆ.

v) **ವಾಲ್ಟರ್ ಸ್ಕಾಟ್ :** ಈತ ಹತ್ತೊಂಬತ್ತನೆಯ ಶತಕದ ರೊಮ್ಯಾಂಟಿಕ್ ಸಂಪ್ರದಾಯಕ್ಕೆ ಸೇರಿದ ಪ್ರಮುಖ ಕಾದಂಬರಿಕಾರ. ಇವನ ಕಾದಂಬರಿಗಳಲ್ಲಿ ಮೃದು, ನೈಜ, ಸರಸಗಳಿಂದ ಕೂಡಿದ ಹಾಸ್ಯಶೈಲಿಯು ಪ್ರವಹಿಸುತ್ತದೆ. ಡಿಕೆನ್ಸ್‌ನ

ಹಾಗೆ ಇವನು ಕೂಡ ಅಪಹಾಸ್ಯದ ಪ್ರಸಂಗಗಳನ್ನು ಕರುಣಾಜನಕ ದೃಶ್ಯಗಳೊಂದಿಗೆ ಸಂಯೋಜಿಸಿದ್ದಾನೆ. ಸ್ಟರ್ನ ಹಾಗೂ ಫೀಲ್ಡಿಂಗ್ ಮೊದಲಾದ ಹದಿನೆಂಟನೆಯ ಶತಕದ ಹಾಸ್ಯಗಾರರಂತೆ ಸ್ಕಾಟ್ ಕೂಡ ಮಾನವೀಯತೆಯಿಂದ ಕೂಡಿದ ಹಾಸ್ಯ ಶೈಲಿಯನ್ನು ತನ್ನ ಕಾದಂಬರಿಗಳಲ್ಲಿ ಪ್ರಯೋಗಿಸಿದ್ದಾನೆ. ಇವನ ಕಾದಂಬರಿಗಳು ಸ್ಕಾಟಿಶ್ ಹಾಗೂ ಇಂಗ್ಲೀಷ್ ಹಾಸ್ಯ ತಳಿಗಳ ಸಮ್ಮಿಶ್ರಣವಾಗಿವೆ.

vi) **ಛಾರ್ಲಸ್ ಡಿಕನ್ಸ್ :** ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಡಿಕನ್ಸ್‌ನ ಹೆಸರು ಅಜರಾಮರವಾಗಿದೆ. ಇಂಗ್ಲೀಷ್ ಸಂಪ್ರದಾಯದ ಹಾಸ್ಯಶೈಲಿಯಿಂದ ಓದುಗರನ್ನು ಇವನು ರಂಜಿಸಿದ್ದಾನೆ. ಇವನ ರಾಷ್ಟ್ರೀಯ ದೃಷ್ಟಿಕೋನದ ಹಾಸ್ಯ ವೈವಿಧ್ಯಮಯವಾಗಿದೆ. ಕಾಮನ ಬಿಲ್ಲಿನಲ್ಲಿ ಸಪ್ತಬಣ್ಣಗಳಿರುವ ಹಾಗೆಯೇ ಡಿಕನ್ಸ್‌ನ ಸಮ್ಮೋಹನಾಸ್ತ್ರವಾದ ಹಾಸ್ಯದಲ್ಲಿ ಹಲವು ಬಣ್ಣಗಳಿವೆ. ಪ್ರಚಂಡವಾಗಿ ಅಬ್ಬರಿಸುವ ಹಾಸ್ಯ, ವಿಡಂಬನ, ವಿಕಟಚಿತ್ರ, ಲೇವಡಿ, ಅಣಕ ಹಾಗೂ ನವುರಾದ ನಯವಾದ ಹಾಸ್ಯ ಇವೆಲ್ಲವುಗಳಿಂದ ಇವನ ಹಾಸ್ಯಪರಿಧಿ ಒಳಗೊಂಡಿದೆ. ಹಾಸ್ಯ ಪ್ರಸಂಗ ಪ್ರಧಾನ ಹಾಗೂ ಹಾಸ್ಯಪಾತ್ರ ಪ್ರಧಾನವಾದ ವಿನೋದ ಕಾದಂಬರಿಗಳನ್ನು ಈತನು ರಚಿಸಿದ್ದಾನೆ. ಮಿಕಾಬರ, ಶ್ರೀಮತಿ ಮಿಕಾಬರ, ಶ್ರೀಮತಿ ಬೆಟ್ಸಿ ಟ್ರಾಟ್‌ವುಡ್, ಬಾರ್ಕಿ ಮುಂತಾದ ವಿಲಕ್ಷಣ, ವಿನೋದಪೂರ್ಣ ಪಾತ್ರಗಳನ್ನು ಸೃಷ್ಟಿಸಿ ಅಬ್ಬರದ ನಗೆಯ ಅಲೆಗಳನ್ನು ಹೊರಹೊಮ್ಮಿಸಿದ್ದಾನೆ. ಕರುಣ ಹಾಗೂ ಹಾಸ್ಯ ರಸಗಳು ಇವನ ಕಾದಂಬರಿಗಳಲ್ಲಿ ಒಂದಕ್ಕೊಂದು ಬೆರೆ

ತಿವೆ. ಅವೆರಡರಲ್ಲಿ ಏಕತೆಯನ್ನು ಕಾಣಬಹುದು. ಇವನ ಕಾದಂಬರಿಗಳು ಸದುದ್ದೇಶದಿಂದ ಕೂಡಿವೆ. ಶ್ರೀಮಂತರ ಬೆಡಗು–ಬಿನ್ನಾಣ, ಅವರ ಕ್ರೂರ ನಡತೆ ಹಾಗೂ ಅವರ ಕೃತ್ರಿಮ ಜೀವನದ ವೈಖರಿಗಳನ್ನು ಡಿಕನ್ಸ್ ತನ್ನ "ಡೇವಿಡ್ ಕಾಪರ ಫೀಲ್ಡ್", "ಪಿಕ್‌ವಿಕ್ ಪೇಪರ್ಸ್" ಎಂಬ ವಿನೋದ ಕಾದಂಬರಿಗಳಲ್ಲಿ ವಿಡಂಬನಗೈದಿದ್ದಾನೆ. ಸಮಾಜ ಸುಧಾರಣೆಯ ಮನೋಧರ್ಮವನ್ನು ಇವನು ತನ್ನ ಕಾದಂಬರಿಗಳ ಮೂಲಕ ವ್ಯಕ್ತಪಡಿಸಿದ್ದಾನೆ. ಸಮಾಜದ ದುಷ್ಟಶಕ್ತಿಗಳಾದ ಧೂರ್ತತೆ, ಠಕ್ಕತನ, ಶೋಷಣೆ ಹಾಗೂ ಕೀಳುಮಟ್ಟದ ಶಿಕ್ಷಣ ವಿಧಾನಗಳನ್ನು ಇವನು ತನ್ನ ಕಾದಂಬರಿಗಳಲ್ಲಿ ಟೀಕಿಸಿದ್ದಾನೆ. ಇವನ ಕಾದಂಬರಿಗಳಲ್ಲಿ ಕಂಡುಬರುವ ವಿಡಂಬನೆ ಸೌಮ್ಯವಾಗಿದೆ. "ಪಿಕ್‌ವಿಕ್ ಪೇಪರ್ಸ್" ಕಾದಂಬರಿಯಲ್ಲಿ ಬರುವ ಎಲ್ಲ ಪಾತ್ರಗಳು ವಿನೋದಪೂರ್ಣವಾಗಿವೆ. ಡಿಕನ್ಸ್‌ನ ಹಾಸ್ಯ ಶೈಲಿಯು ಹೃದಯವೈಶಾಲ್ಯತೆಯಿಂದ ಕೂಡಿದ್ದಾಗಿಯೂ, ರಚನಾತ್ಮಕವಾಗಿಯೂ ಹಾಗೂ ಮಾನವೀಯತೆಯಿಂದ ಕೂಡಿ ವೈಶಿಷ್ಟ್ಯಪೂರ್ಣವಾಗಿದೆ. ಇವನ ಹಾಸ್ಯ ಶೈಲಿಯು ಪ್ರಫುಲ್ಲತೆ ಹಾಗೂ ಉದಾರತೆಗಳನ್ನು ಒಳಗೊಂಡಿದೆ. ಇವನ ವಿನೋದ ಕಾದಂಬರಿಗಳಲ್ಲಿಯ ಕೆಲವು ಪ್ರಸಂಗಗಳಲ್ಲಿ ಪ್ರಹಸನವು ಎದ್ದುಕಾಣುತ್ತದೆ; ಕಟುಹಾಸ್ಯವು ಕೂಡ ಕೆಲವೊಂದು ಕಡೆ ವ್ಯಕ್ತವಾಗಿದೆ. ವಿಮರ್ಶಕರ ಅಭಿಪ್ರಾಯದ ಪ್ರಕಾರ ಡಿಕನ್ಸ್‌ನ ಕಾದಂಬರಿಗಳಲ್ಲಿಯ ಪಾತ್ರಗಳು ವ್ಯಂಗ್ಯಚಿತ್ರಗಳೆನ್ನಬಹುದು. ಇವನ ಕಾದಂಬರಿಗಳಲ್ಲಿ ವರ್ಣಿಸಲ್ಪಟ್ಟ ಬಡತನದ ದೃಶ್ಯಗಳು ಕರುಣ ಹಾಗೂ ಹಾಸ್ಯ ರಸಗಳಿಂದ

ಕೂಡಿವೆ. ಗಿಸ್ಸಿಂಗ್ ಅವರ ಅಭಿಪ್ರಾಯದ ಪ್ರಕಾರ ಇವನ ಶೈಲಿಯು ಪ್ರಹಸನಕ್ಕೆ ಸಮೀಪವಾಗಿದೆ. ಪ್ರಿಸ್ಟ್ಲೀಯರ ಅಭಿಪ್ರಾಯದ ಪ್ರಕಾರ ಹಾಸ್ಯವು ಇವನ ಕಲೆಯು, ಜೀವನದ ಹಾಗೂ ಮನಸ್ಸಿನ ಸತ್ವಯುತ ಭಾಗವಾಗಿದೆ. ಈ ವಿಮರ್ಶಕರ ಅಭಿಪ್ರಾಯಗಳು ಏನೇ ಇದ್ದರೂ ಡಿಕನ್ಸ್, ಇಂಗ್ಲೀಷ್ ಸಂಪ್ರದಾಯದ ಹಾಸ್ಯ ಕಾದಂಬರಿಕಾರನೆಂಬುವದನ್ನು ಎಲ್ಲರೂ ಒಪ್ಪತಕ್ಕದ್ದೇ.

vi) **ವಿಲಿಯಂ ಥ್ಯಾಕರೇ :** ಛಾರ್ಲಸ್ ಡಿಕನ್ಸ್‌ನು ವಿನೋದ ಕಾದಂಬರಿಕಾರನಾದರೆ ವಿಲಿಯಂ ಥ್ಯಾಕರೇ ಈ ಯುಗದ ವಿಡಂಬನ ಕಾದಂಬರಿಕಾರನಾಗಿದ್ದಾನೆ. ಕಟು ಟೀಕೆಯೇ ಇವನ ಅಸ್ತ್ರ. ಇವನು ಅಪ್ಪಟ ವಾಸ್ತವವಾದಿ. ಇವನ ಹಾಸ್ಯ ಶೈಲಿ ಬಹು ಕಠೋರವಾಗಿದೆ. ಥ್ಯಾಕರೇ ತನ್ನ ಕಾಲದ ಪಟ್ಟಣಿಗರ ಕೃತ್ರಿಮ, ಧೂರ್ತ ಹಾಗೂ ವಿಲಾಸೀ ಜೀವನವನ್ನು ಕಟುವಾಗಿ ಟೀಕಿಸಿದ್ದಾನೆ. ಪ್ರಹಸನ ಹಾಗೂ ವ್ಯಾಜಸ್ತುತಿಗಳು ಈತನ ಕಟು ಹಾಸ್ಯ ಶೈಲಿಯ ವಿವಿಧ ಮುಖಗಳಾಗಿವೆ. ಸೃಜನಾತ್ಮಕ ಹಾಸ್ಯ ಹಾಗೂ ಕಾದಂಬರಿಕಾರನ ಕಲೆಯನ್ನು ತ್ಯಜಿಸಿ ಇವನು ಪ್ರಹಸನ ಹಾಗೂ ವಿಡಂಬನೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದಾನೆ. ಜೊನಾಥನ ಸ್ವಿಪ್ಟ್‌ನ ನಂತರ ಇವನೇ ಮುಖ್ಯ ವಿಡಂಬನಕಾರನಾಗಿದ್ದಾನೆ. ಇವನ ವಿಡಂಬನಾತ್ಮಕ ಕಾದಂಬರಿ ಗಳಲ್ಲಿ ಶ್ರೀಮಂತರ ಐಹಿಕ ಜೀವನದ ಭೋಗಲಾಲಸೆಗಳ ಕಟುಟೀಕೆಯನ್ನು ಕಾಣಬಹುದಾಗಿದೆ. ಕೆಲವು ವಿಮರ್ಶಕರು ಇವನನ್ನು ನರದ್ವೇಷಿ ಅಥವಾ ಮುಂಗೋಪಿ ಮುಂತಾದ ಅನ್ವರ್ಥಕಗಳಿಂದ ಕರೆದದ್ದುಂಟು. ಆದರೆ ಈ ಅನ್ವರ್ಥಕಗಳು ಔಚಿತ್ಯಪೂರ್ಣವಾಗಿಲ್ಲವಾದ್ದರಿಂದ ಅವುಗಳನ್ನು ಸುಲಭವಾಗಿ ತಳ್ಳಿಹಾಕಬಹುದು. ಇವನು ಬರೆದ'ವ್ಯಾನಿಟಿ ಫೇರ್'

ಹಾಗೂ "ಹೆನ್ರಿ ಎಜ್ಮಂಡ್" ಪ ಖ್ಯಾತ ಸಾಮಾಜಿಕ ಕಾದಂಬರಿಗಳಾಗಿವೆ.

viii) **ಜಾರ್ಜ ಈಲಿಯಟ್ :** "ಜಾರ್ಜ ಈಲಿಯಟ್" ಎಂಬುದು ವ್ಹಿಕ್ಟೋರಿಯನ್ ಯುಗದ ಕಾದಂಬರಿಗಾರ್ತಿ ಮೇರಿ ಅನ್ ಇವ್ಹಾನ್ಸಳ ಕಾವ್ಯನಾಮವಾಗಿರುತ್ತದೆ. ಹಳ್ಳಿಗಾಡಿನ ವಾತಾವರಣದಲ್ಲಿ ಬೆಳೆದುಬಂದ ಹೈದರ ಹಾಸ್ಯ ಅಥವಾ ಮೋಜಿನ ಶೈಲಿಯ ಹಾಸ್ಯವನ್ನು ಇವಳ ವಿನೋದಪೂರ್ಣ ಕಾದಂಬರಿಗಳಲ್ಲಿ ಕಾಣುತ್ತೇವೆ. ಹಳ್ಳಿಗರ ಪಾತ್ರಗಳ ಮುಖಾಂತರ ಈಲಿಯಟ್ ಗಂಭೀರವಾದ ಹಾಗೂ ವ್ಯಂಗ್ಯವಾದ ಹಾಸ್ಯವನ್ನು ಪ್ರಯೋಗಿಸಿದ್ದಾಳೆ. ಕೆಲವು ಪ್ರಸಂಗಗಳಲ್ಲಿ ಅವಳ ಹಾಸ್ಯವು ವಿಡಂಬನೆಯಾಗಿ ಮಾರ್ಪಡುತ್ತದೆ. ಇವಳ ಹಾಸ್ಯ ಶೈಲಿ ಹೆಚ್ಚು ರಂಜನೀಯವಾಗಿಲ್ಲ.

ix) **ಥಾಮಸ್ ಹಾರ್ಡಿ :** ಈತ ವ್ಹಿಕ್ಟೋರಿಯನ್ ಯುಗದ ಪ್ರಖ್ಯಾತ ಕಾದಂಬರಿಕಾರ. ಈತನ ಕೃತಿಗಳು ದುರಂತ ಕಾದಂಬರಿಗಳೇ ಆದರೂ ಕೂಡ ಅವುಗಳಲ್ಲಿ ಕೆಲವ್ಮಟ್ಟಿಗೆ ಹಾಸ್ಯವು ಮೇಳವಿಸಿದೆ. ಮನಮೋಹಕವಾದ ಹಾಗೂ ನೈಜವಾದ ಹಾಸ್ಯವು ಇವನ ಕಾದಂಬರಿಗಳಲ್ಲಿ ಕಂಡುಬರುವದು ವಿರಳವೇ ಸರಿ. ಗಂಭೀರ ಶೈಲಿಯ ಹಾಗೂ ಉದಾತ್ತ ಹಾಸ್ಯವು ಇವನ ಕಾದಂಬರಿಗಳಲ್ಲಿ ಕಾಣಸಿಗುತ್ತದೆ. ಇವನ ದುರಂತ ಕಾದಂಬರಿಗಳಲ್ಲಿಯ ಈ ಬಗೆಯ ಹಾಸ್ಯಕ್ಕೆ "Comic Relief" ಎಂದು ಹೆಸರು. ಕೆಲವು ವೇಳೆ ಈ ಗಂಭೀರ ಶೈಲಿಯ ಹಾಸ್ಯ

ವಿಡಂಬನೆಯ ಮಾರ್ಗಕ್ಕೆ ತಿರುಗುವದುಂಟು. ಹಳ್ಳಿಯ ಹೈದರ ಪಾತ್ರಗಳೇ ಈ ಗಂಭೀರ ಶೈಲಿಯ ಹಾಸ್ಯವನ್ನುಂಟು ಮಾಡುವ ಸಾಧನವಾಗಿವೆ. ಇದನ್ನೇ ವಿಮರ್ಶಕರು Rustic Humour ಎಂಬ ಹೆಸರಿನಿಂದ ಕರೆದಿದ್ದಾರೆ. ಕೆಲವು ಕಡೆ ಗಳಲ್ಲಿ ಇವನ ಹಾಸ್ಯ ಶೈಲಿ ವ್ಯಂಗ್ಯವಾಗಿ ಮಾರ್ಪಾಡಾಗಿದ್ದುಂಟು.

x) **ಜಾರ್ಜ ಮೆರಿಡಿಥ್ :** ಇವನು ಈ ಯುಗದ ಖ್ಯಾತ ಹರ್ಷ ಕಾದಂಬರಿಕಾರ ಹಾಗೂ ಹಾಸ್ಯ ಸಿದ್ಧಾಂತ ಪ್ರತಿ ಪಾದಕ. ಇವನ ಅಭಿಪ್ರಾಯದ ರೀತ್ಯಾ ವಿನೋದ ಚೈತನ್ಯದ ಅರ್ಥವು ಮೋಜು ಅಥವಾ ತಮಾಷೆ ಆಗಲಾರದು; ಆದರೆ ಅದು ಗಂಭೀರವಾದ ಸಾಮಾಜಿಕ ಪರಿಹಾಸ್ಯವಾಗಿದೆ. ದುರಂತ ಹಾಗೂ ಸವಿನೋದ ಪ್ರಸಂಗಗಳ ಮಧ್ಯ ಪರಿಸರವೇ ಅದಕ್ಕೆ ಅನುಕೂಲ ವಾದ ತಾಣ. ಅವನ ವಿಮರ್ಶೆಯ ಪ್ರಕಾರ ವೈನೋದಿಕೆ ಹಾಗೂ ಭಾವಾತಿರೇಕತೆಗಳು ಯುಕ್ತಿಗಳಿಗೆ ವಿರುದ್ಧವಾದ ಬುದ್ಧಿ ಮತ್ತೆಯ ಶಸ್ತ್ರಗಳಾಗಿವೆ. ವಿನೋದಚೈತನ್ಯವು ವಿವೇಕ ಬುದ್ಧಿಯ ಪ್ರತೀಕವಾಗಿದೆ. ಧೂರ್ತತನ ಹಾಗೂ ಅಹಂಭಾವ ಮುಂತಾದ ಸಾಮಾಜಿಕ ದುಷ್ಟಶಕ್ತಿಗಳು ಈ ವಿನೋದ ಚೈತನ್ಯದ ಮೂಲಕವಾಗಿ ನಾಶಹೊಂದುತ್ತವೆ. ಈ ವಿನೋದ ಚೈತನ್ಯವೇ ವಿಡಂಬನಶಕ್ತಿಯಾಗಿದೆಯೆಂದು ಇವನ ಅಭಿಪ್ರಾಯ. ಅದು ಸಮಕಾಲೀನ ಸಂಪ್ರದಾಯ, ಪೂರ್ವಗ್ರಹಪೀಡನತ್ವ ಹಾಗೂ ಸಾಮಾಜಿಕ ಮೌಢ್ಯತೆಗಳ ವಿರುದ್ಧ ನಿಂತ ಶಕ್ತಿಯಾಗಿದೆಯೆನ್ನು ವದು ಹೇಳಿಕೆ ಹೇಳಿಕೆ. ಇವನು ತನ್ನ ಹರ್ಷ ಹಾಗೂ ವಿಡಂಬನಾತ್ಮಕ ಕಾದಂಬರಿಗಳಲ್ಲಿ ಈ ಸತ್ವಪೂರ್ಣ ವಿನೋದ

ಚೈತನ್ಯದ ಮೂಲಕವಾಗಿ ಸಮಾಜದ ಮೌಢ್ಯತೆ, ಭಾವಾತಿರೇಕತೆ, ಹುಚ್ಚುತನ ಹಾಗೂ ಅತಿರೇಕತೆಗಳನ್ನು ವಿಡಂಬನೆಗೈದಿದ್ದಾನೆ. ವಿನೋದ ಚೈತನ್ಯವು ಮೆರಿಡಿಥ್‌ರ ಅನುಸಾರವಾಗಿ ಬೌದ್ಧಿಕ ಹಾಸ್ಯವಾಗಿದೆಯಲ್ಲದೆ ಸಾಮಾನ್ಯವಾಗಿ ಅದು ವ್ಯಂಗ್ಯದ ಮುಖವಾಡವನ್ನು ಧರಿಸುತ್ತದೆ. ವಿನೋದ ಹಾಗೂ ರುದ್ರ ಪರಿಸರಗಳೆರಡರಲ್ಲಿಯೂ ಅದು ಸಮಾನವಾಗಿ ನೆಲೆಸಿರುತ್ತದೆ.

ಮೆರಿಡಿಥ್‌ನ ಕಾದಂಬರಿಗಳು ಶೇಕ್ಸಪೀಯರನ ರುದ್ರ ಹರ್ಷ ನಾಟಕಗಳನ್ನು ಬಹಳವಾಗಿ ಹೋಲುತ್ತವೆ. "ರುದ್ರ ಹರ್ಷ ಕಾದಂಬರಿಕಾರ" ಎಂಬ ಅಭಿದಾನವನ್ನು ಇವನಿಗೆ ಕೊಡುವದು ಔಚಿತ್ಯಪೂರ್ಣವಾಗಿದೆ. ವಿಮರ್ಶಾತ್ಮಕವಾಗಿ ಪರಿಶೀಲಿಸಿದರೆ ಇವನ "ವಿನೋದ ಚೈತನ್ಯ"ವು ಬೆನ್ ಜಾನ್ಸನ್‌ನ ಹಾಸ್ಯಶೈಲಿಯನ್ನು ಹೋಲುತ್ತದೆ. ಇಂಗ್ಲೀಷ್ ಹಾಸ್ಯ ಸಾಹಿತ್ಯದಲ್ಲಿ ಇವನ ಹಾಸ್ಯಪ್ರಮೇಯ ಒಂದು ಮಹತ್ವದ ಮೈಲುಗಲ್ಲಾಗಿದೆ. ವಿವೇಕತನವೆಂದರೇನೇ ಸಾಮಾಜಿಕ ಜ್ಞಾನ. ವಿವೇಕತನದ ಶಸ್ತ್ರವೇ ವಿನೋದ ಚೈತನ್ಯವಾಗಿದೆ. ಸಮಾಜ ವಿರುದ್ಧವಾದ ಪರಿಸ್ಥಿತಿಗಳಿಗೆಲ್ಲ ಅದು ಅಸ್ತ್ರವಾಗಿದೆ. ಆದ್ದರಿಂದ ಮೆರಿಡಿಥ್‌ನ ಪ್ರಕಾರ ಹಾಸ್ಯ ಪ್ರವೃತ್ತಿ ಎಂದರೆ ವಿವೇಕತನವೇ ಸೈ. ಇವನ ಕೃತಿಗಳಲ್ಲಿ ವ್ಯಂಗ್ಯವು ಹಾಸ್ಯ ಚೈತನ್ಯದ ಸಾಧನವಾಗಿದೆ. ಈ ಹಾಸ್ಯ ಚೈತನ್ಯವು ಸಮಾಜದ ಅಸಂಬದ್ಧತೆಗಳ ಮೇಲೆ ಬೆಳಕನ್ನು ಚೆಲ್ಲಿ ಅವುಗಳನ್ನು ಜನತೆಗೆ ದರ್ಶನ ಮಾಡಿಸುತ್ತದೆ. ಜನರ ನಗುವನ್ನು ಶುದ್ಧೀಕರಣ ಮಾಡಿ ಸಮಾಜದ ವಿರೂಪತನದ ಬಗೆಗೆ ಸಹಾನುಭೂತಿ ಹಾಗೂ ಅನುಕಂಪಗಳನ್ನು ಹುಟ್ಟಿಸುವದೇ

ಇವನ ಹಾಸ್ಯ ಚೈತನ್ಯದ ಮುಖ್ಯೋದ್ದೇಶವಾಗಿದೆ. ವಿನೋದ ಸತ್ವವು ಸಾಮಾಜಿಕ ಸಾಧನವಾಗಿದೆ ಹಾಗೂ ಸಮಾಜದ ಪ್ರತಿಬಿಂಬವಾಗಿ ಅದರ ಶುದ್ಧೀಕರಣ ಮಾಡುವ ಶಕ್ತಿಯಾಗಿದೆಯೆಂಬ ಮೆರಿಡಿಥ್‌ನ ಹಾಸ್ಯಪ್ರಮೇಯ ನಿಜಕ್ಕೂ ಹಾಸ್ಯ ಸಾಹಿತ್ಯ ಹಾಗೂ ವಿಮರ್ಶಾ ಸಾಹಿತ್ಯಕ್ಕೆ ನೀಡಿದ ಅಮೋಘ ಕಾಣಿಕೆಯಾಗಿದೆ.

# ೮. ಇಪ್ಪತ್ತನೆಯ ಶತಕದ ಇಂಗ್ಲೀಷ ಹಾಸ್ಯ ಮತ್ತು ವಿಡಂಬನ ಸಾಹಿತ್ಯ

ಇಪ್ಪತ್ತನೆಯ ಶತಕದ ಇಂಗ್ಲೀಷ್ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನ ಶೈಲಿಗಳು ವಿಕಾಸವಾಗಲು ಹಿನ್ನೆಲೆ ಹಾಗೂ ಪರಿಸರಗಳು ಬಹಳ ಅನುಕೂಲಕರವಾಗಿವೆ. ಮಾಸಪತ್ರಿಕೆ, ಪಾಕ್ಷಿಕ, ವಾರಪತ್ರಿಕೆ ಹಾಗೂ ಮ್ಯಾಗಝಿನ್‌ಗಳು ಪ್ರಸಾರಗೊಂಡು ಹಾಸ್ಯ ಹಾಗೂ ವಿಡಂಬನ ಸಾಹಿತ್ಯ ಬೆಳೆಯಲು ಅನುವು ಮಾಡಿ ಕೊಟ್ಟವು. ಲಿಟರರಿ "ರಿವ್ಯೂ" ಹಾಗೂ "ಪಂಚ"ಗಳಂಥ ಸಾಹಿತ್ಯಕ್ಕೆ ಮೀಸಲಾದ ವಾರಪತ್ರಿಕೆಗಳು ಈ ಯುಗದಲ್ಲಿ ಪ್ರಸಾರದಲ್ಲಿವೆ. "ಲಿಟರರಿ ಸಪ್ಲಿಮೆಂಟ" ಎಂಬುದು ಇನ್ನೊಂದು ಸಾಹಿತ್ಯಕ ವಾರಪತ್ರಿಕೆ. ಹಾಸ್ಯ, ವಿಡಂಬನೆ, ಚುಟುಕು, ವ್ಯಂಗ್ಯ ಲೇಖನಗಳಿಗಾಗಿ ಇದು ಪ್ರಸಿದ್ಧವಾಗಿದೆ. ಇದೇ ಯುಗದಲ್ಲಾದ ಖಂಡಾಂತರ ಹಾಸ್ಯ ಮತ್ತು ವಿಡಂಬನೆ ಸಾಹಿತ್ಯಗಳಲ್ಲಿಯ ಬದಲಾವಣೆಗಳು ಇಂಗ್ಲೀಷ್ ಸಾಹಿತ್ಯದ ಮೇಲೆ ಸಾಕಷ್ಟು ಪರಿಣಾಮ ಮಾಡಿರುತ್ತವೆ. ನಾರ್ವೆಜಿಯನ್ ನಾಟಕಕಾರ ಹೆನ್ರಿ ಇಬ್ಸನ್‌ನ ವಿಡಂಬನ ವೈನೋದಿಕೆಗಳು ಬರ್ನಾಡ ಷಾರಂಥ ಖ್ಯಾತ ವಿಡಂಬನ ನಾಟಕಕಾರರ ಮೇಲೆ ಪ್ರಭಾವ ಬೀರಿದವು. ವಿಡಂಬನ ಶೈಲಿಯ ಕೃತಿಗಳು ಇಂಗ್ಲಂಡದ ಕಡಲ್ಗಾಲುವೆಯನ್ನು ದಾಟಿ ತಮ್ಮ ಪ್ರಭಾವ ಮುದ್ರೆಯನ್ನು ಇಂಗ್ಲೀಷ್ ಬರಹಗಾರರ ಮೇಲೆ ಅಚ್ಚೊತ್ತಿವೆ.

ಇಂದಿನದು ವಿಜ್ಞಾನಯುಗ. ಜೀವನದ ಎಲ್ಲ ರಂಗಗಳಲ್ಲಿಯೂ ನಾವು ವಿಜ್ಞಾನದ ಚುಂಚುಪ್ರವೇಶ ಹಾಗೂ ಪ್ರಭಾವವನ್ನು ಕಾಣುತ್ತೇವೆ. ಈ ಕಾರಣದಿಂದ ಇಂದು ಸಾಹಿತ್ಯ ಕ್ಷೇತ್ರದಲ್ಲಿ ವಿಜ್ಞಾನ ಸಾಹಿತ್ಯ ಎಂಬ ಹೊಸ ಟಿಸಿಲು ಬೆಳೆಯುತ್ತಿದೆ. ಮನೋವೈಜ್ಞಾನವು ಈ ಯುಗದಲ್ಲಿ ಹೆಚ್ಚಾಗಿ ಸಂಶೋಧಿಸಲ್ಪಟ್ಟಿದ್ದರಿಂದ ಮನೋವಿಜ್ಞಾನಿಕ ನೂತನ ಹಾಸ್ಯ ಶೈಲಿ ಹಾಗೂ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿವೆ. ವಿಜ್ಞಾನ ಹಾಗೂ ಮನೋವಿಜ್ಞಾನಗಳು ಇಂಗ್ಲೀಷ್ ಸಾಹಿತ್ಯದಲ್ಲಿಯ ಹಾಸ್ಯ ಹಾಗೂ ವಿಡಂಬನೆಗಳಿಗೆ ವಿಕಾರತ್ವ, ಭೀಭತ್ಸ್ಯತೆ, ರೌದ್ರತೆ, ಸೂಕ್ಷ್ಮತೆ ಹಾಗೂ ಮನೋಸಂವೇದನತ್ವಗಳ ರೂಪಗಳನ್ನು ಕೊಟ್ಟಿವೆ.

ಇಪ್ಪತ್ತನೆಯ ಶತಕದಲ್ಲಿ ವಿಚಾರವಾದ, ಜ್ಞಾನಪ್ರಸಾರ ಹಾಗೂ ಅನ್ವೇಷಣಶೀಲ ಪ್ರವೃತ್ತಿಗಳಿಂದ ಇಂಗ್ಲೀಷ್ ಹಾಸ್ಯ ಮತ್ತು ವಿಡಂಬನ ಸಾಹಿತ್ಯದಲ್ಲಿ ವಿಪುಲವಾದ ಬದಲಾವಣೆಗಳಾಗಿವೆ; ಹಾಗೂ ಹೊಸ ಅಲೆಗಳುಂಟಾಗಿವೆ. ಥಾರ್ನಡೈಕ್, ಗ್ರೇಗ್ ಹಾಗೂ ಗ್ರೇಗರಿ ಮುಂತಾದ ವಿಮರ್ಶಕರು ನಗೆ, ಹಾಗೂ ಹಾಸ್ಯಗಳ ವಿಷಯವಾಗಿ ಮನೋವೈಜ್ಞಾನಿಕ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಖ್ಯಾತ ವಿಡಂಬನ ನಾಟಕಕಾರ ಬರ್ನಾಡ ಷಾರು ತಮ್ಮ ವೈನೋದಿಕೆಗಳಲ್ಲಿ ಆಧುನಿಕ ಯುಗದ ಏರು ಪೇರುಗಳನ್ನು ವಿಡಂಬನಗೈದಿದ್ದಾರೆ. ಸ್ಯಾಮ್ಯುಯಲ್ ಬಟ್ಲೆರರು ತಮ್ಮ ವಿಡಂಬನಾತ್ಮಕ ಕಾದಂಬರಿ "ದಿ ವೇ ಆಫ್ ಆಲ್ ಫ್ಲೆಶ್" ಮತ್ತು "ಏರವೆನ್ ರಿವಿಜಿಟೆಡ್"ಗಳಲ್ಲಿ ವ್ಹಿಕ್ಟೋರಿಯನ್ ಯುಗದ ಹುಚ್ಚು ಸಂಪ್ರದಾಯಗಳನ್ನು ಹಾಗೂ ನವ

ಯುಗದ ಯಂತ್ರೀಕರಣವನ್ನೂ ವಿಡಂಬನಗೈದಿದ್ದಾರೆ. ಯಾಂತ್ರಿಕ ಜೀವನವು ಕ್ರಿಯಾಶಕ್ತಿಯನ್ನು ನಿರ್ವೀರ್ಯವನ್ನಾಗಿ ಮಾಡುತ್ತ ದೆಂಬುದೇ ಬಟ್ಲರರ ವಾದ.

ಈ ಯುಗದ ವಿಡಂಬನಕಾರ ಜಾರ್ಜ ಗಿಸಿಂಗ್ ತನ್ನ ಕೃತಿ "ನ್ಯೂಗ್ರುಬ್ ಸ್ಟೀಟ್"ದ ಮುಖಾಂತರ ಕೊಳಚೆ ಪ್ರದೇಶದ ಬಡ ನಿವಾಸಿಗಳ ಕರುಣಾಜನಕ ಚಿತ್ರಗಳನ್ನು ವರ್ಣಿಸಿ ಸಮಾಜ, ಸುಧಾರಣೆಯ ಕಾರ್ಯವನ್ನು ಕೈಕೊಂಡನು. ಆರ್ನೋಲ್ಡ್ ಬೆನೆಟ್ ಕವಿ ತನ್ನ ವಿಡಂಬನಾತ್ಮಕ ಹಾಸ್ಯ ಕವನಗಳಲ್ಲಿ ಜಾತ್ಯಾಂಧತೆಯನ್ನು ಚಿತ್ರಿಸಿ ಆ ಪ್ರವೃತ್ತಿಯನ್ನು ವಿಡಂಬನ ಗೈದಿದ್ದಾನೆ. ಸಾಸನ್ ಕವಿ ವಿಡಂಬನಾತ್ಮಕ ಕವನಗಳನ್ನು ರಚಿಸಿ ಈ ಯುಗದ ಲೋಪ ದೋಷಗಳನ್ನು ಎತ್ತಿ ತೋರಿಸಿ ದ್ದಾನೆ. ನವಯುಗದ ವಿರೂಪ ಜೀವನದ ಬಗೆಗೆ ತನಗಿರುವ ರೋಷವನ್ನು ಕವಿ ಮೇಸ್‌ಫೀಲ್ಡ್ ತನ್ನ ಪದ್ಯಗಳಲ್ಲಿ ವ್ಯಕ್ತ ಪಡಿಸಿದ್ದಾನೆ.

ಈ ಯುಗದಲ್ಲಿ "ವಿಡಂಬನ"ವು ವ್ಯಕ್ತಿಗಳ ಪರಸ್ಪರ ದೂಷಣೆ ಮಾಡುವ ಸಾಧನವಾಗಿಲ್ಲ; ಆದರೆ ಅದು ಸಾಮಾಜಿಕ ಪರಿವರ್ತನೆ ಮಾಡಲು ಸಾಧನವಾಗಿದೆ. ಜಾರ್ಜ ಆರ್‌ವೆಲ್, ಓಸ್ಕಾರ ವೈಲ್ಡ್, ಬರ್ನಾರ್ಡ ಷಾ ಮೊದಲಾದವರು ಈ ಯುಗದ ವ್ಯಂಗ್ಯ ವಿಡಂಬನಕಾರರು. ಸಾಮಾಜಿಕ ಹಾಗೂ ರಾಜಕೀಯ ವಿಡಂಬನೆಯು ಇವರ ಕೃತಿಗಳಲ್ಲಿ ಕಂಡುಬರುವದು.

ಈ ಶತಕದಲ್ಲಿ ಇಂಗ್ಲೀಷ್ ವೈನೋದಿಕೆಗಳು ಪುನರ್ಜನ್ಮ ವನ್ನು ಪಡೆದವು. ಅವು ಎರಡು ರೂಪಗಳನ್ನು ತಾಳಿವೆ. ವೈಚಾರಿಕ ವೈನೋದಿಕೆಗಳು ಮೊದಲನೆಯ ರೂಪವನ್ನೂ ಹಾಗೂ

ಮನೋರಂಜಕ ವೈನೋದಿಕೆಗಳು ಎರಡನೆಯ ರೂಪವನ್ನೂ ಪ್ರತಿನಿಧಿಸುತ್ತವೆ. ಹೆನ್ರಿ ಇಬ್ಸನ್ ಹಾಗೂ ಜಾರ್ಜ ಬರ್ನಾರ್ಡ ಷಾರವರು ವೈಚಾರಿಕ ಹರ್ಷ ನಾಟಕಗಳನ್ನು ಪ್ರಚಾರಗೊಳಿಸಿದರು. ಓಸ್ಕಾರ್ ವೈಲ್ಡ್‌ರು ಮನರಂಜಿಸುವ ವೈನೋದಿಕೆಗಳನ್ನು ರಚಿಸಿದ್ದಾರೆ. ನೋಲ್ ಕಾವರ್ಡ್, ಸಾಮರಸೆಟ್ ಮಾಮ್, ಫ್ರೆಡರಿಕ್ ಲಾನ್ಸಡೇಲ್ ಮತ್ತು ಆಲ್‌ಫ್ರೆಡ್ ಸುತ್ರೋ ಮುಂತಾದವರು ಓಸ್ಕಾರ್ ವೈಲ್ಡ್‌ರ ಸಾಲಿಗೆ ಸೇರಿದವರು. ಈ ಎಲ್ಲ ವಿನೋದ ನಾಟಕಕಾರರು ಮನುಷ್ಯನ ವೈಲಕ್ಷಣ ತೋರುವ ಹರ್ಷ ನಾಟಕಗಳನ್ನು ರಚಿಸಿದ್ದಾರೆ. ಈ ಯುಗದ ಪ್ರೇಕ್ಷಕರ ಹವ್ಯಾಸವನ್ನು ಸಾಂತ್ವನಗೊಳಿಸುವದೊಂದೇ ಅವರು ಬರೆದ ನಾಟಕಗಳ ಉದ್ದೇಶವಾಗಿದೆ. ಇವುಗಳಲ್ಲೆಲ್ಲ ಸಾಮಾಜಿಕ ವಿಡಂಬನೆಯೇ ಕಂಡುಬರುತ್ತದೆ. ವೈಲ್ಡ್‌ನ ಧಾಟಿಯನ್ನೇ ಅನುಕರಿಸಿ ಈ ಯುಗದ ಅನೇಕ ನಾಟಕಕಾರರು ತಮ್ಮ ಕೃತಿಗಳ ಮೂಲಕ ಸಾಮಾಜಿಕ ಮನರಂಜನೆಗಾರರ ಪಾತ್ರಗಳನ್ನು ವಹಿಸಿದ್ದಾರೆ. ನೋಲ್ ಕಾವರ್ಡ್‌ರ ಹರ್ಷ ನಾಟಕಗಳು ಚತುರೋಕ್ತಿಗಳಿಂದ ಕೂಡಿವೆ; ಇವರ ಕೃತಿಗಳು "Restorations" ವೈನೋದಿಕೆಗಳನ್ನು ಹೋಲುತ್ತವೆ. ಸಾಮರಸೆಟ್ ಮಾಮ್‌ರವರು ವ್ಯಂಗ್ಯ ಹಾಗೂ ಸಿಡುಕುತನದ ಹಾಸ್ಯಗಳಿಂದ ಕೂಡಿದ್ದ ವಿನೋದಪೂರ್ಣವಾದ ಅನೇಕ ಹರ್ಷ ನಾಟಕಗಳನ್ನು ರಚಿಸಿದ್ದಾರೆ. ಆಲ್‌ಫ್ರೆಡ್ ಸುತ್ರೊ ಅವರು ಹತ್ತೊಂಬತ್ತನೆಯ ಶತಕದ ಕೃತಿಮವಾದ ವೈನೋದಿಕೆಗಳನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ.

ಈ ಶತಕದಲ್ಲಿ ರಚಿಸಲ್ಪಟ್ಟ ಪದ್ಯನಾಟಕಗಳು ವಿಡಂಬನ ಹಾಗೂ ತಿಳಿಹಾಸ್ಯಗಳಿಂದ ಹೊಸರೂಪವನ್ನು ತಾಳಿವೆ. ಈ

ಯುಗದ ಕವಿ ಸ್ಟೀಫನ್ ಸ್ಪೆಂಡರ್‌ರು ವಿಡಂಬನಯುಕ್ತ ಕವನಗಳನ್ನು ರಚಿಸಿದ್ದಾರೆ. ಅವರು ಸರ್ವಾಧಿಕಾರಿ ಹಿಟ್ಲರನ ವಿರುದ್ಧ ತಮ್ಮ ಕಿಡಿಗಳನ್ನು ಕವನಗಳಲ್ಲಿ ಕಾರಿದ್ದಾರೆ. ಟಿ.ಎಸ್. ಈಲಿಯಟ್ ಈ ಯುಗದ ಖ್ಯಾತ ಕವಿಯಾಗಿದ್ದಾರೆ. ಇವರ ಕವನಗಳಾದ "Waste Land," "Hallow Men" "Hippopotamus" ಮುಂತಾದವು ಗಂಭೀರ ವಿಡಂಬನೆ ಹಾಗೂ ಭೀಭತ್ಸ ಹಾಸ್ಯಗಳಿಂದ ಕೂಡಿವೆ. ನವಯುಗದ ಭೌತಿಕ ಹಾಗೂ ಯಾಂತ್ರಿಕ ಜೀವನ ಚರ್ಯೆಯನ್ನು ಈಲಿಯಟ್‌ರು ತಮ್ಮ ವಿಚಾರ ಪರಿಪ್ಲುತವಾದ ವಿಡಂಬನಾತ್ಮಕ ಕಾವ್ಯಗಳಲ್ಲಿ ತೋರಿದ್ದಾರೆ. ಆಲ್ಡಸ್ ಹಕ್ಸಲೀ, ಜೇಮ್ಸ ಜಾಯ್ಸ, ವರ್ಜಿನಿಯಾ ವೂಲ್ಫ್ ಡೋರೋಥಿ ರಿಚರ್ಡಸನ್, ಮೇ ಸಿನ್‌ಕ್ಲೇರ್ ಮುಂತಾದ ಕಾದಂಬರಿಕಾರರು ಈ ಶತಮಾನದ ಐಹಿಕ ಭೋಗಲಾಲಸೆಗಳನ್ನು ತಮ್ಮ ಕಾದಂಬರಿಗಳಲ್ಲಿ ವಿಡಂಬನಗೈದಿದ್ದಾರೆ. ಹೆಚ್. ಜಿ. ವೇಲ್ಸ್, ಗಾಲ್ಸವರ್ದಿ, ಆರ್ನಾಲ್ಡ್ ಬೆನೆಟ್ ಮೊದಲಾದ ಕಾದಂಬರಿಕಾರರು ಕಾದಂಬರಿಗಳನ್ನು ಸಾಮಾಜಿಕ ವಿಡಂಬನೆಯ ಸಾಧನಗಳನ್ನಾಗಿ ಮಾರ್ಪಡಿಸಿದರು. ಜೀವನದ ಮೌಲ್ಯಗಳನ್ನು ಜನರಿಗೆ ವಿದಿತಪಡಿಸುವ ಘನೋದ್ದೇಶವನ್ನು ಈ ಶತಕದ ವೈನೋದಿಕ ಕಾದಂಬರಿಗಳು ಹೊಂದಿವೆ. ಅಲ್ಲದೆ ಅವು ವೈಚಾರಿಕವಾಗಿದ್ದು ವಾಸ್ತವಜೀವನವನ್ನು ಪ್ರತಿಬಿಂಬಿಸುತ್ತವೆ. ಹಕ್ಸಲೀರಂಥ ಕಾದಂಬರಿಕಾರರು ನವಯುಗದ ಜೀವನದ ವಿರೂಪಗಳನ್ನು ಹಾಗೂ ಮಾನವನ ಮೇಲಾದ ವಿಜ್ಞಾನದ ದುಷ್ಪರಿಣಾಮಗಳನ್ನು ತೀಕ್ಷ್ಣವಾಗಿ ವಿಡಂಬನಗೈದಿದ್ದಾರೆ.

ಹೆಚ್. ಜಿ. ವೇಲ್ಸ್, ಆರ್. ಎಲ್. ಸ್ಟೀವನ್‌ಸನ್ ಮೊದಲಾದವರು ಸಣ್ಣಕತೆಗಳನ್ನು ಪ್ರಚಾರದಲ್ಲಿ ತಂದರು. ಅವರ ಕಥೆಗಳಲ್ಲಿ ವ್ಯಂಗ್ಯ ಹಾಗೂ ವಿನೋದಗಳು ಕೂಡಿಕೊಂಡಿವೆ. ಪ್ರಸ್ತುತ ಯುಗದ ಜನತೆ ಎರಡು ಮಹಾಯುದ್ಧಗಳನ್ನು ಕಂಡು ಅವುಗಳ ವಿಷಮತೆಯನ್ನು ಅನುಭವಿಸಿದೆ. ಥಾಮಸ್ ಹಾರ್ಡಿಯವರಂಥ ಕವಿಗಳು ತಮ್ಮ ಕವನಗಳಲ್ಲಿ ಉದಾಸೀನವಾದ ವ್ಯಂಗ್ಯವನ್ನು ಪ್ರಯೋಗಿಸಿದ್ದಾರೆ. ಇದನ್ನೇ ಟಿ. ಎಸ್. ಈಲಿಯಟ್‌ರ ಕವನಗಳಲ್ಲಿ ಕಾಣುತ್ತೇವೆ. ಜಾರ್ಜ ಆರವೆಲ್ ಈ ಯುಗದ ಖ್ಯಾತ ವಿಡಂಬನ ಕಾದಂಬರಿಕಾರ. ಇವರು ತಮ್ಮ ಪ್ರಖ್ಯಾತ ಕಾದಂಬರಿ 'Animal Form' ದಲ್ಲಿ ರಶಿಯದ ಸರ್ವಾಧಿಕಾರಿ ಸ್ಟಾಲಿನ್‌ನ ದುರಹಂಕಾರೀ ಪ್ರವೃತ್ತಿಯನ್ನು ಹಾಗೂ ಕಮ್ಯುನಿಸ್ಟರ ದಬ್ಬಾಳಿಕೆಯನ್ನು ತೀಕ್ಷ್ಣವಾಗಿ ವಿಡಂಬನಗೈದಿದ್ದಾರೆ. ಈ ಯುಗದ ಪ್ರಸಿದ್ಧ ಜೀವನ ಚರಿತ್ರಕಾರ ಲಿಟನ್ ಸ್ಟ್ರೆಚಿ "Queen Victoria" ಹಾಗೂ "Eminant Victorians" ಗಳಂಥ ಪ್ರಸಿದ್ಧ ಜೀವನ ಚರಿತ್ರೆಗಳನ್ನು ರಚಿಸಿ ಕಾವ್ಯಮಯವಾದ ವ್ಯಂಗ್ಯ ಹಾಸ್ಯವನ್ನು ಉಪಯೋಗಿಸಿದ್ದಾರೆ. ಇವರದು ಬೌದ್ಧಿಕ ಹಾಸ್ಯ.

ಈ ಶತಮಾನದಲ್ಲಿ ಹೊಸ ಬಗೆಯ ನಾಟಕ ಸಾಹಿತ್ಯ ಬೆಳೆದು ಬಂದಿದೆ. ಅದುವೇ ಅಸಂಗತ ನಾಟಕಗಳ ಬೆಳವಣಿಗೆ. ಆ ನಾಟಕಗಳ ಧೃಷ್ಟಾರರು ಬೆಕೆಟ್ ಹಾಗೂ ಪಿಂಟರ ಮೊದಲಾದವರು ತಮ್ಮ ಅಸಂಗತ ನಾಟಕಗಳಲ್ಲಿ ಭೀಭತ್ಸ್ಯ ಹಾಸ್ಯವನ್ನು ಪ್ರಯೋಗಿಸಿದ್ದಾರೆ, ಆ ಹಾಸ್ಯವು ವಿಕಾರ ಹಾಗೂ ಗಾಂಭೀರ್ಯಗಳಿಂದ ಆವೃತವಾಗಿದೆ. ವಾಸ್ತವಿಕತೆಯೇ ಇಂದಿನ ಸಾಹಿತ್ಯದ

ಜೀವಾಳವಾದ್ದರಿಂದ ವ್ಯಂಗ್ಯ ಹಾಗೂ ವಿಡಂಬನಗಳು ತಿಳಿಹಾಸ್ಯಕ್ಕಿಂತಲೂ ಹೆಚ್ಚಾಗಿ ಬಳಸಲ್ಪಟ್ಟಿವೆ. ಇಂದಿನ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಹಾಸ್ಯವು ರೌದ್ರತೆಯೊಂದಿಗೆ ಸಂಯೋಜಿತವಾಗಿದೆ. ಅದನ್ನೇ ವಿಮರ್ಶಕರು "ರೌದ್ರಹಾಸ್ಯ ಶೈಲಿ" (Tragic Humour) ಎಂದು ಹೆಸರಿಸಿದ್ದಾರೆ.

ಅಸಂಬಂದ್ಧವಾದ ಹಾಸ್ಯಭರಿತ ಕವನಗಳು ಈ ಶತಕದಲ್ಲಿ ಹೆಚ್ಚು ಪ್ರಸಾರದಲ್ಲಿವೆ. ಇದೇ ರೀತಿ ಈಗ ಇಂಗ್ಲಂಡಿನಲ್ಲಿ ಪ್ರಚಲಿತವಾಗಿರುವ "Pop Music" ಹಾಸ್ಯ ರಸದಿಂದ ಕೂಡಿದೆ. ಇಂಗ್ಲಂಡಿನ ಅನೇಕ ದಿನಪತ್ರಿಕೆ, ವಾರಪತ್ರಿಕೆ ಹಾಗೂ ಮಾಸಿಕ ಪ್ರಕಟನೆಗಳಲ್ಲಿ ಆಶುಕವಿತೆಗಳೊಡನೆ ವ್ಯಂಗ್ಯಪೂರಿತ ಹಾಸ್ಯಮಯ ವ್ಯಂಗ್ಯ ಚಿತ್ರಗಳು ಸದಾಕಾಲವೂ ಅಚ್ಚಾಗಿ ಬರುವದು ಸರ್ವೇಸಾಮಾನ್ಯವಾಗಿದೆ. "Columnists" ಎಂಬ ಅಭಿದಾನವುಳ್ಳ ಹಾಸ್ಯ ವಿಮರ್ಶಕರು ಇಂಗ್ಲಂಡಿನಂಥ ಪಾಶ್ಚಾತ್ಯ ರಾಷ್ಟ್ರದಲ್ಲಿ ತಮ್ಮ ವ್ಯವಸಾಯ ಪ್ರಾರಂಭಿಸಿ ಇಂಗ್ಲೀಷ್ ಪತ್ರಿಕೆಗಳನ್ನು ಹೆಚ್ಚು ಆಕರ್ಷಕವಾಗಿ ಮಾಡಿದ್ದಾರೆ.

ಈ ಶತಕಕ್ಕೆ ಸೇರಿದ ಐರ್ಲೆಂಡಿನವರಾದ ಬರ್ನಾರ್ಡ ಷಾ, ಓಸ್ಕಾರ್ ವೈಲ್ಡ್, ಓಕ್ಯಾಸಿಸೀನ ಮೊದಲಾದ ನಾಟಕಕಾರು ಐರ್ಲೆಂಡಿನ ಸಂಸ್ಕೃತಿಯನ್ನೇ ಹಿನ್ನೆಲೆಯಾಗಿಟ್ಟುಕೊಂಡು ತಮ್ಮ ವೈನೋದಿಕೆಗಳನ್ನು ಬರೆದಿದ್ದಾರೆ. ಆ ಸಂಸ್ಕೃತಿ ಅವರೆಲ್ಲರ ಧಮನಿಗಳಲ್ಲೂ ಹರಿದು ಐರ್ಲೆಂಡಿನ ವಿಶಿಷ್ಟವಾದ, ಒರಟಾದ ವ್ಯಂಗ್ಯ ಹಾಸ್ಯ ವಿಡಂಬನೆ ಹಾಗೂ ಚತುರೋಕ್ತಿಗಳು ಅವರ ವೈನೋದಿಕೆಗಳಲ್ಲಿ ಹಾಸು ಹೊಕ್ಕಾಗಿವೆ. ಇವರ ಹಾಸ್ಯ ಸಾಹಿತ್ಯವನ್ನು ಹೆಚ್ಚಾಗಿ

ಮೆರಗು ಗೊಳಿಸಿದ ಹಾಸ್ಯ ಪ್ರಕಾರಗಳಾವವು ಎಂದರೆ ವ್ಯಂಗ್ಯ ಮತ್ತು ವಿಡಂಬನೆಗಳು, ಲೇಡಿ ಗ್ರೇಗರಿ ಹಾಗೂ ಜಾನ್ ಸಿಂಜ್‌ರು ಕೂಡ ಐರ್ಲೆಂಡಿನ ಹಿನ್ನೆಲೆಯುಳ್ಳ ವೈನೋದಿಕೆಗಳನ್ನು ರಚಿಸಿದ್ದಾರೆ. ಈ ಶತಕಕ್ಕೆ ಸೇರಿದ ವಿಲಿಯಂ ಗಿಲ್ಬರ್ಟ ಸಂಗೀತ ಪ್ರಧಾನ ಹರ್ಷ ನಾಟಕಗಳನ್ನು ರಚಿಸಿ ಅವುಗಳನ್ನು ಪ್ರಚಾರಗೊಳಿಸಿದನು. ಶ್ಲೇಷೆ, ಚತುರೋಕ್ತಿ ಹಾಗೂ ವ್ಯಂಗ್ಯ ಇವೇ ಮುಂತಾದ ಹಾಸ್ಯ ಪ್ರಕಾರಗಳನ್ನು ಇವನು ತನ್ನ ಕೃತಿಗಳಲ್ಲಿ ಪ್ರಯೋಗಿಸಿದ್ದಾನೆ.

**ಜಾನ್ ಗಾಲ್ಸವರ್ದಿಯವರು** ಈ ಯುಗದ ಖ್ಯಾತ ನಾಟಕಕಾರರು. ಇವರು ಬರೆದ ವೈನೋದಿಕೆಗಳಲ್ಲಿ ಹಾಸ್ಯಕ್ಕಿಂತ ವ್ಯಂಗ್ಯವೇ ಹೆಚ್ಚಾಗಿ ಕಂಡುಬರುತ್ತದೆ. ವ್ಯಂಗ್ಯ ಹಾಸ್ಯವು ಇವರ ಕಲೆಯ ಮುಖ್ಯ ಭಾಗವಾಗಿದೆ. ಇವರು ವಿಡಂಬನ ಕಾರರೂ ಆಗಿದ್ದು ಭೌತಿಕ ಜೀವನದ ಹುಚ್ಚು ವ್ಯಾಮೋಹವನ್ನು ತಮ್ಮ ಕಾದಂಬರಿಗಳಲ್ಲಿ ವಿಡಂಬನಗೈದಿದ್ದಾರೆ. ಮೆರಿಡಿಥ್‌ನ ವಿನೋದದ ಸಿದ್ಧಾಂತವನ್ನೇ ಅನುಕರಿಸಿ ಬರೆದ ತಮ್ಮ ಕಾದಂಬರಿ ಗಳಲ್ಲಿ ಫಾರಸ್ಟರ್‌ರು ಈ ಯುಗದ ಜನರ ಧೂರ್ತತೆ ಹಾಗೂ ತಕ್ಕತನಗಳನ್ನು ವ್ಯಂಗ್ಯವಾಗಿ ವಿಡಂಬನಗೈದಿದ್ದಾರೆ.

**ಜಿರೋಮ್ ಕೆ. ಜಿರೊಮ್** ಎಂಬವರು ಬರೆದುದು ಲಲಿತ ಪ್ರಬಂಧ ಮತ್ತು ಹರಟೆಗಳೇ ಜಾಸ್ತಿ. ಇವರದು ವಿಶಿಷ್ಟವಾದ ಹಾಸ್ಯಶೈಲಿ. ವಾಸ್ತವಿಕ ಜೀವನದಲ್ಲಿಯ ಹಾಸ್ಯ ಪ್ರಸಂಗಗಳನ್ನು ಜರಡಿ ಹಿಡಿದು ಸ್ವಾಭಾವಿಕವಾದ ತಿಳಿಹಾಸ್ಯ ಶೈಲಿಯಲ್ಲಿ ತೇಲಿಸಿಬಿಡುವದು ಈ ಲೇಖಕರ ಹಾಸ್ಯ ಸಾಹಿತ್ಯ ವೈಖರಿ. ಕೆಲವೊಂದು ಸಲ ಹಾಸ್ಯದೊಡನೆ ಅತಿಶಯೋಕ್ತಿ

ಯನ್ನು ಸೇರಿಸುವದೂ ಉಂಟು. ಅತಿಶಯೋಕ್ತಿಯಿಂದಲೇ ಕೆಲವೊಂದು ಬಾರಿ ಮೋಜು, ಹಾಸ್ಯಗಳು ಹೊಸ ರೂಪ ತಾಳಿ ಹೊರಹೊಮ್ಮುತ್ತವೆ ಎಂಬುದೇ ಈ ವಿನೋದ ಲೇಖಕರ ಅಭಿಪ್ರಾಯ. ಜೀವನದ ಸಾಮಾನ್ಯ ವಸ್ತುಗಳ ವಿಲಕ್ಷಣವಾದ ವಿಶಿಷ್ಟತೆಯ ಮೇಲೆಯೇ ಎಲ್ಲ ನಗೆ ಬರಹಗಾರರ ವಿಚಕ್ಷಕ ದೃಷ್ಟಿ ಕೇಂದ್ರೀಕೃತವಾಗಿರುವಂತೆಯೇ ಇವರದೂ ಸಹ ಆಗಿದೆ.

**ಪಿ.ಜಿ. ವುಡ್‌ಹೌಸ**ರು ತಾವು ಸೃಷ್ಟಿಸಿದ ಹಾಸ್ಯ ಪಾತ್ರಗಳಷ್ಟೇ ಹಾಸ್ಯ ಸಾಹಿತಿಗಳೆಂದು ಅಮರರಾಗಿದ್ದಾರೆ. ಇವರ ಕೃತಿಗಳು ಎಡ್‌ವರ್ಡಿಯನ್ ಯುಗದ ಕೊನೆಗಾಲದ ಇಂಗ್ಲಂಡಿನ ಸಮಾಜ ದರ್ಪಣವಾಗಿವೆ. ಇವರ ಹಾಸ್ಯ ಲೇಖನಗಳು ಚಿರಂತನವಾಗಿವೆ. ವ್ಯಂಗ್ಯಕ್ಕಿಂತ ಲೇವಡಿಯೇ ಇವರ ಪ್ರಬಲ ಅಸ್ತ್ರ. ನಗುವಿನ ಕಚಗುಳಿಯಿಡುವದು ಇವರ ವಿಧಾನ. ಬ್ರಿಟನ್ನಿನ ಉಚ್ಚ ವರ್ಗದವರ ನಿರರ್ಥಕ ಬಾಳೇ ಇವರ ಕೃತಿಗಳಿಗೆ ಸಾಮಗ್ರಿ. ವುಡ್‌ಹೌಸರ ಹಾಸ್ಯ ಕಾಮದಿಂದ ಬಲು ದೂರ. ಅವರು ಸೃಷ್ಟಿಸಿದ ಹಾಸ್ಯ ಪಾತ್ರಗಳಾದ ಜೇಮ್ಸ್, ಬರ್ಟೀ, ಪ್ರಿಸ್ಮಿತ್, ಯಾಕ್ರಿಜ್, ಮುಲ್ಲಿನರ್, ಲಾರ್ಡಎಮ್ಸ್‌ವರ್ಥರು ಅವರ ನವೀನ ಮಾದರಿಯ ಹಾಸ್ಯವೈಖರಿಗೆ ಹಿಡಿದ ಕನ್ನಡಿ. ಅವರು ಸೃಷ್ಟಿಸಿದ ಹಾಸ್ಯ ಪಾತ್ಯಗಳು ಬೆನ್ ಜಾನ್ಸನ್‌ರು ಸೃಷ್ಟಿದಂತಹ ಪಾತ್ರಗಳ ಹಾಗೆಯೇ ವಿಶಿಷ್ಟವಾಗಿವೆ. ಅಸೂಯಾಪರ ವಿಶ್ವದ ಆಟಂ ಕೋಟೆಯ ಅಡಿಯಲ್ಲಿ ಹಾಸ್ಯದ ಬಾಂಬನ್ನು ಇಟ್ಟು ಎಲ್ಲ ದಬ್ಬಾಳಿಕೆಯನ್ನು ಮೋಜಿನ ಮಾತಿನಿಂದ ಚುಡಾ

ಯಿಸಿದ ವುಡ್‌ಹೌಸರು ಮಾನವನ ಆಶಾವಾದದ ಕಿರೀಟವಾಗಿದ್ದಾರೆ.

ಹರಿತವಾದ ಚತುರೋಕ್ತಿ, ಅಣಕಗಳು ಇವರು ಬರೆದ ಹರಟೆ, ಲಲಿತ ಪ್ರಬಂಧಗಳಲ್ಲಿ ಹೇರಳವಾಗಿವೆ. ಇವರದು ಗಂಭೀರ ಹಾಸ್ಯಶೈಲಿ. ತಮ್ಮ ಪ್ರತಿಪಾದಕ ವಿದೂಷಕನ ಹಾಗೆ ಇವರು ಇಂಗ್ಲೀಷ್ ಜನರ ಧೂರ್ತತೆಯನ್ನು ಅನುಕಂಪದಿಂದ ಟೀಕಿಸಿದ್ದಾರೆ ಇವರ ಹಾಸ್ಯ ಸ್ವಯಂಪ್ರಭೆಯಿಂದ ಕೂಡಿದ್ದಾಗಿದೆ ಹಾಗೂ ಅನುಪಮವಾಗಿದೆ. ವಿಕಟ ಚಿತ್ರಗಳನ್ನು ಬಿಡಿಸುವದರಲ್ಲಿಯೂ ಇವರದು ಎತ್ತಿದ ಕೈ. ಕೆಲವು ಕಡೆ ಇವರ ಹಾಸ್ಯ ಶೈಲಿ ಬಲು ಖಾರವಾಗಿದೆ.

**ಜೆ. ಬಿ. ಪ್ರೀಸ್ಟಲೇಯವರು** ಕಾದಂಬರಿಕಾರ ಪ್ರಬಂಧಕಾರ ಹಾಗೂ ಕಥೆಗಾರರಾಗಿದ್ದಾರೆ. ಶಬ್ದಗಳ ಗುಂಫನಗಳಿಂದ, ವಿಶೇಷಣಗಳಿಂದ ತಮ್ಮ ಬರವಣಿಗೆಯನ್ನು ಗಂಭೀರವಾದ ಹಾಸ್ಯ ಶೈಲಿಗೆ ತಿರುಗಿಸಿದ್ದಾರೆ. ಅವರ ಬರಹಗಳಲ್ಲಿ ನಾವು ಹಾಸ್ಯವ್ಯಂಗ್ಯದ ತಿಳಿಛಾಯೆಯನ್ನು ಕಾಣುತ್ತೇವೆ. ಅವರ ಹಾಸ್ಯ ಸಾಹಿತ್ಯ ಪದಾನುಪದಯುಕ್ತವಾಗಿದೆ.

**ಹಿಲೇರ ಬೆಲ್ಲೋಕ್‌ರು** ಅಸಂಬದ್ಧವಾದ ವಿನೋದಕ್ಕಾಗಿ ಹಾಸ್ಯ ಸಾಹಿತ್ಯವನ್ನು ಪ್ರಚಾರ ಮಾಡಿದರು. ಇವರು ವಿಡಂಬನಾತ್ಮಕವಾದ ಕಾದಂಬರಿಗಳನ್ನು ಬರೆದಿದ್ದಾರೆ. ಉತ್ಸಾಹದ ಚಿಲುಮೆಯಾದ ಇವರ ಹಾಸ್ಯಪ್ರಜ್ಞೆಯು ಇವರ ಕ್ರಮಬದ್ಧವಾದ ಮೋಜಿನ ಪದ್ಯಗಳಲ್ಲಿಯೂ ಕಾಣಸಿಗುತ್ತದೆ. "ಓದುಗ

ರೊಡನೆ ಚರ್ಚೆ" ಎಂಬ ಪ್ರಬಂಧದಲ್ಲಿ ಇವರ ಸೂಕ್ಷ್ಮ ಹಾಸ್ಯ ಪ್ರಜ್ಞೆ ಹೊರಹೊಮ್ಮಿದೆ.

**ರಾಬರ್ಟ ಲಿಂಡ್‌ರು** ಈ ಶತಕದ ಪ್ರಮುಖ ಹಾಸ್ಯ ಬರಹಗಾರರು. ಇವರ ಹಾಸ್ಯಪ್ರಜ್ಞೆ ಬಹು ಸೂಕ್ಷ್ಮ ಹಾಗೂ ವಿಚಕ್ಷಕ. ಹಾಸ್ಯ ಮತ್ತು ವಿಡಂಬನೆಗಳನ್ನು ಸರಿಯಾಗಿ ಸಂಯೋಜಿಸಿ ತಮ್ಮ ಪ್ರಬಂಧಗಳನ್ನು ಹೆಚ್ಚು ಆಪ್ಯಾಯಮಾನವಾಗುವಂತೆ ಮಾಡುವದೇ ಇವರ ಗುರಿ. ಚುರುಕಾದ ಸಂಕೀರ್ಣ ವಾಕ್ಯಗಳು ಹಾಗೂ ಚತುರೋಕ್ತಿಗಳಿಂದ ಕೂಡಿದ ಚಾಟೋಕ್ತಿಗಳು ಇವರ ಹಾಸ್ಯ ಪ್ರಬಂಧಗಳಿಗೆ ಹೆಚ್ಚಿನ ಮೆರುಗನ್ನು ಕೊಟ್ಟಿವೆ. ಇವರದು ಸುಸಂಸ್ಕೃತವಾದ ಹಾಸ್ಯ ಶೈಲಿ.

ವಿಶಾಲ ಭಾವನೆಯ ಸೌಹಾರ್ದತೆಯಲ್ಲಿ ಅದ್ದಿ ತೆಗೆದ ಹಾಸ್ಯ ಪ್ರಜ್ಞೆ ಲ್ಯೂಕಾಸ್‌ರದು. ಬಹು ಸ್ವಾರಸ್ಯವಾದ ವಿನೋದ ಘಟನೆಗಳನ್ನು ವರ್ಣಿಸಿ ಮನರಂಜನೆ ಮಾಡುವ ಹಾಸ್ಯ ಕಲೆಗಾರ ಸಾಹಿತಿ ಲ್ಯೂಕಾಸ್. ಈ ಶತಕದ ಖ್ಯಾತ ಲಾಲಿತ್ಯಪೂರ್ಣವಾದ ಹಾಸ್ಯ ಪ್ರಬಂಧಕಾರರಲ್ಲಿ ಸ್ಟೀಫನ್ ಲೀಕೋಕ್ ಕೂಡ ಒಬ್ಬರಾಗಿದ್ದಾರೆ. ಇವರು ಬರೆದ ವಿನೋದಪೂರ್ಣ ಹಾಸ್ಯಭರಿತ ವ್ಯಕ್ತಿಚಿತ್ರಗಳ ಮಾಲೆ "ಬಿಹೈಂಡ್ ದಿ ಬಿಯಾಂಡ್" ನಮ್ಮನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸುವದಲ್ಲದೇ, ನಗು ಹಾಗೂ ಹಾಸ್ಯಗಳ ಮುಖಾಂತರ ನಮ್ಮನ್ನು ಜೀವನದ ಗಂಭೀರ ಸಮಸ್ಯೆಗಳೆಡೆಗೆ ಕರೆದೊಯ್ಯುತ್ತಿದೆ. ಹಾಸ್ಯದ ಮೂಲಕ ನೀತಿ ಬೋಧಿಸುವದೇ ಇವರ ಮುಖ್ಯೋದ್ದೇಶ. ಇನ್ನೊಬ್ಬ ಖ್ಯಾತ ಹಾಸ್ಯ ಸಾಹಿತಿ ಚಸ್ಟರಟನ್ ಪ್ರಫುಲ್ಲವಾದ ಹಾಗೂ ಸ್ವಯಂ

ವಿರೋಧೋಕ್ತಿಗಳುಳ್ಳ ಪ್ರಬಂಧಗಳ ಕರ್ತೃ. ಇವರು ಪ್ರಸಿದ್ಧ ವಿಮರ್ಶಕ ಹಾಗೂ ವಿಡಂಬನಕಾರರೂ ಆಗಿದ್ದಾರೆ. ವಿಡಂಬನಾತ್ಮಕ ಚುಚ್ಚು ನುಡಿ ಹಾಗೂ ಸರಸೋಕ್ತಿಗಳನ್ನು ಧಾರಾಳವಾಗಿ ಉಪಯೋಗಿಸಿ ತಮ್ಮ ಕಾಲದ ಜನರ ಜೀವನಕ್ರಮ ಕೃತ್ರಿಮತೆ ಹಾಗೂ ಬೂಟಾಟಿಕೆಗಳಿಂದಿರುವದನ್ನು ಪರಾಮರ್ಶಿಸಿದ್ದಾರೆ. ವಿರೋಧಾಭಾಸ ದೃಷ್ಟಾಂತಗಳಿಂದ ಇವರು ತಮ್ಮ ಹಾಸ್ಯ ಶೈಲಿಯನ್ನು ಚುರುಕುಗೊಳಿಸಿದ್ದಾರೆ.

**ಎ.ಜಿ. ಗಾರ್ಡಿನರರು** ಈ ಶತಕದ ಹಾಸ್ಯ ಸಾಹಿತಿಗಳಲ್ಲಿ ಅಗ್ರಗಣ್ಯರು. ಇವರು ತಿಳಿಯಾದ ಹಾಸ್ಯ ಶೈಲಿಯಿಂದ ತಾವು ಬರೆದ ಲಲಿತ ಪ್ರಬಂಧಗಳನ್ನು ರಂಜನೀಯವಾಗಿ ಮಾಡಿದ್ದಾರೆ. ಇವರ ಹಾಸ್ಯ ಶೈಲಿಯಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಕೆಲವೆಡೆಗಳಲ್ಲಿ ಹಾಸ್ಯ ಶೈಲಿಯು ಎಷ್ಟು ಸೂಕ್ಷ್ಮವಿದೆಯೋ ಅಷ್ಟೇ ಇನ್ನು ಕೆಲವು ಕಡೆಗಳಲ್ಲಿ ಭೋರ್ಗರೆಯುವಂಥದಾಗಿದೆ. ಇನ್ನು ಕೆಲವೊಂದು ಪ್ರಸಂಗಗಳಲ್ಲಿ ಹುಡುಗಾಟಿಕೆಯ ಹುಮ್ಮಸ್ಸಿನಲ್ಲಿ ಮುಳುಗಿದೆ. ಇವರ ಪ್ರಬಂಧಗಳಲ್ಲಿ ಹಾಸ್ಯವು ಒಂದಲ್ಲಾ ಒಂದು ರೂಪದಲ್ಲಿ ಹಾಸುಹೊಕ್ಕಾಗಿದೆ. ಪುಷ್ಪಗಳಿಂದ ಸುಗಂಧವು ಹೇಗೆ ಹೊರಸೂಸುವದೋ ಹಾಗೆ ಇವರ ಲೆಕ್ಕಿಣಿಕೆಯಿಂದ ಹಾಸ್ಯವು ಹೊರಹೊಮ್ಮುತ್ತಿದೆ. ಸ್ವಾಭಾವಿಕವಾಗಿ ಇವರ ಹಾಸ್ಯವು ಧಾರೆಯಾಗಿ ಪ್ರವಹಿಸಿದರೂ ವಿನಯದ ಎಲ್ಲೆಯನ್ನು ಮೀರುವದಿಲ್ಲ ಹಾಗೂ ಉಲ್ಲಾಸಯುಕ್ತವಾಗಿದೆ. ತೀಕ್ಷ್ಣವಾದ ಕಟುಟೀಕೆಗೂ, ಕೀಳುಮಟ್ಟದ ತಮಾಷೆಗೂ ಮಾಧ್ಯಮವೇ ಇವರ ಹಾಸ್ಯ ಶೈಲಿಯ ಪ್ರಥಮ ಸೋಪಾನ. ಇವರ ಲಲಿತ ಪ್ರಬಂಧಗಳಲ್ಲಿ ತಿಳಿಹಾಸ್ಯ ಹಾಗೂ ಸೌಮ್ಯ ವಿಡಂಬನೆಯನ್ನು ಕಾಣುತ್ತೇವೆ.

ಒಟ್ಟಾರೆ ಹೇಳುವದಾದರೆ ಎ. ಜಿ. ಗಾರ್ಡಿನರ, ಪಿ. ಜಿ, ವುಡ್‌ಹೌಸ್. ಜಿ. ಕೆ. ಚಸ್ಟರಟನ್. ಹೆಚ್. ಜಿ. ವೇಲ್ಸ್; ಲೀಕೋಕ್, ಲ್ಯೂಕಾಸ್, ಲಿಂಡ್, ಬೆಲ್ಲೋಕ್, ಜೆರೋಮ್ ಕೆ. ಜೆರೋಮ್, ಆಲ್ಡಸ್ ಹಕ್ಸಲೇ ಹಾಗೂ ಪ್ರೀಸ್ಟಲೇ ಮುಂತಾದ ಇಂಗ್ಲೀಷ್ ಬರಹಗಾರರು ಹಾಸ್ಯ ಮತ್ತು ವಿಡಂಬನ ಸಾಹಿತ್ಯ ವನ್ನು ವಿಸ್ತಾರಗೊಳಿಸಲು ಬಹುವಾಗಿ ಶ್ರಮಿಸಿದವರಾಗಿದ್ದಾರೆ. ಆದರೂ ಶೇಕ್ಸಪೀಯರ ಹಾಗೂ ಭಾಸರಸ ಮಟ್ಟಕ್ಕೇರಿದ ಯಾವ ಕವಿ, ಕಾದಂಬರಿಕಾರ ಅಥವಾ ವಿನೋದ ನಾಟಕಕಾರರನ್ನು ಈ ಯುಗದಲ್ಲಿ ಕಾಣಲಾರೆವು. ರೆಬೆಕಾ ವೆಸ್ಟಳು ತನ್ನ ಲೇಖನಗಳ ಮುಖಾಂತರ ವಿಡಂಬನಕಾರಳೆಂದು ತೋರಿಸಿದ್ದಾಳೆ. ಇ. ವ್ಹಿ. ನಾಕ್ಸರ ಲೇಖನಗಳು ಕೂಡ ಸರಸೋಕ್ತಿಗಳಿಂದ ಕೂಡಿವೆ. ಎ. ಎ. ಮಿನ್ ಅವರ ಲೇಖನಗಳು ಲಹರಿಯ ವಿನೋದ, ಹಾಸ್ಯಗಳಿಗೆ ಹೆಸರಾಗಿವೆ. ಇಪ್ಪತ್ತನೆಯ ಶತಕದ ಇಂಗ್ಲೀಷ್ ಹಾಸ್ಯ ಸಾಹಿತ್ಯವು ವಿಚಾರಪರಿಪ್ಲುತವಾಗಿದೆ. ಇಂದು ಉಗಮ ವಾದ ವಿಚಾರವಾದ, ಚಾರ್ವಾಕವಾದ ಹಾಗೂ ವಿಮರ್ಶಾತ್ಮಕ ವಾದ ಆಂದೋಲನಗಳು ಇಂಗ್ಲೀಷ್ ಹಾಸ್ಯ ಹಾಗೂ ವಿಡಂಬನ ಸಾಹಿತ್ಯಕ್ಕೆ ಕ್ರಾಂತೀಕಾರೀ ಸ್ವರೂಪ ಕೊಟ್ಟಿವೆ. ನವ ಮನ್ವಂತರದ ಇಂಗ್ಲೀಷ್ ಹಾಸ್ಯ ಹಾಗೂ ವಿಡಂಬನೆ ಸಾಹಿತ್ಯದಲ್ಲಿ ಹೊಸ ಟಿಸಿಲುಗಳನ್ನು ಕಾಣಬಹುದಾಗಿದೆ.

—o—

## ೯. ಪಾರಿಭಾಷಿಕ ಶಬ್ದಕೋಶ

Humourist–ವಿನೋದಗಾರ, ಹಾಸ್ಯಗಾರ

Humour–ಹಾಸ್ಯ, ಹಾಸ್ಯರಸ, ನಗೆ

Wit–ಚತುರೋಕ್ತಿ, ಸರಸೋಕ್ತಿ

Limerick–ಐದು ಚರಣಗಳ ಹಾಸ್ಯ ಪದ್ಯ

Mock Leroic–ಉದಾತ್ತ ಶೈಲಿಯ ವಿಕಟಾನುಕರಣ

Pun–ಶ್ಲೇಷೆ ಹದಿರು, ನುಡಿಯ ಹಾಸ್ಯ ಪ್ರಯೋಗ

Satire–ವಿಡಂಬನ, ಅಣಕ,

Satirist–ವಿಡಂಬನಕಾರ

Repartee–ಹಾಜರಿ ಜವಾಬು, ಸಿದ್ಧ ಚತುರ ಪ್ರತ್ಯುತ್ತರ

Antic humoar–ವಿಕಟ ಚೇಷ್ಟೆ

Comic Opera–ಹಾಸ್ಯಮಯ ಸಂಗೀತ ನಾಟಕ ಅಥವಾ ಪ್ರಹಸನ

Masque–ಪದ್ಯರೂಪೀ ಹರ್ಷನಾಟಕ, ಮೊಗವಾಡ ನಾಟಕ

Comedietta–ಲಘು ಹರ್ಷ ನಾಟಕ

Comic song–ವಿನೋದಕರ ಹಾಡು, ನೆಗೆಯ ಹಾಡು

Comic strip–ವಿಕಟ ಚಿತ್ರಾವಳಿ

Comic Relicf–ವೈವಿಧ್ಯ ತೋರಿ ಉಲ್ಲಾಸಗೊಳಿಸುವ ವಿನೋದ

Burlesque–ವಿಕಟಾನುಕರಣ ಸಾಹಿತ್ಯ

Farcc–ಪ್ರಹಸನ, ಮೋಜು, ನಕಲಿ
Parody–ಅಣಕ ಬರಹ, ವಿಡಂಬನಾನುಕರಣ
Irony–ಹಾಸ್ಯವ್ಯಂಗ್ಯ, ಅಣಕ
Sarcastic Irony–ಕಟುವ್ಯಂಗ್ಯ, ವ್ಯಂಗ್ಯ ಮೌಢ್ಯ
Tragic Irony–ದುರಂತ ವ್ಯಂಗ್ಯ
Tragie-Comedy–ರುದ್ರ ಹರ್ಷ ನಾಟಕ
Paradox–ವಿರೋಧಾಭಾಸ, ಸ್ವಯಂ ವಿರೋಧೋಕ್ತಿ
Hyperbole–ಅತಿಶಯೋಕ್ತಿ
Nonsense verse–ಅಸಂಬದ್ಧವಾದ, ವಿನೋದಕ್ಕಾಗಿ ಬರೆದ ಪದ್ಯಗಳು
Miracle Plays–ಮಧ್ಯಯುಗದ ಪವಾಡ ನಾಟಕಗಳು
Moralities–ಹದಿನಾರನೆಯ ಶತಕದ ಇಂಗ್ಲಂಡಿನಲ್ಲಿ ಪ್ರಚಾರವಾದ ನೀತಿಭೋಧಕ ನಾಟಕಗಳು
Mock epic–ಅಣಕ ಕಾವ್ಯ
Travesty–ಹಾಸ್ಯ ಕವಿತೆ, ಹಾಸ್ಯಾನುಕರಣ, ವಿಕಟಾನುಕರಣ
Comedy of manners–ಮನುಷ್ಯನ ವಿಲಕ್ಷಣತೆ ತೋರುವ ಹರ್ಷ ನಾಟಕಗಳು
Comedy ot Humours–ಮನುಷ್ಯನ ಮನಸ್ಥಿತಿಯನ್ನು ನಿರೂಪಿಸುವ ವಿನೋದ ನಾಟಕ
Fun–ಮೋಜು
Raillery–ಪರಿಹಾಸ್ಯ, ಲೇವಡಿ
Sarcasm–ಚುಚ್ಚು ಮಾತು, ಮನ ನೋಯಿಸುವ ಕಹಿ ಮಾತು

Comic spirit–ವಿನೋದದ ಸತ್ವ
Ridicule–ಅಣಕ. ಕುಚೋದ್ಯ
Cardinal Humours–ಶರೀರದ ಮುಖ್ಯ
ರಸಧಾತುಗಳು
Sentimental Comedy–ರಸಭಾವಾತಿರೇಕವುಳ್ಳ
ವಿನೋದನಾಟಕ
Theory of Humour–ರಸಧಾತು ತತ್ವ
Cartoons–ವ್ಯಂಗ್ಯ ಚಿತ್ರ
Innuendo–ಯಾಸೆ ಮಾತು. ಅಡ್ಡ ಮಾತು. ವ್ಯಂಗ್ಯೋಕ್ತಿ
Interlude–ವಿಡಂಬನ ದೃಶ್ಯ
Caricature–ವಿಕಟ ಚಿತ್ರ
Comedist–ಹರ್ಷ ನಾಟಕಕಾರ
Comedy–ಹರ್ಷನಾಟಕ, ಪ್ರಹಸನ. ನಗೆನಾಟಕ

## ೧೦. ಗ್ರಂಥಋಣ (Bibliography)


1. Hazlitt "Lectures on the English comic Writers".
2. Jones Feibleman "In Praise of comedy"
3. Prof. Dowden "Shakespearian comedy".
4. C. M. Gayley "Representative English comedies".
5. J. Y. T. Graig "The Psychology of Laughter and comedy".
6. J. C. Gragary "The Nature of Laughter"
7. George Meredith "An Essay on comedy and the uses of comic spirit".
8. John Palmer - "Comedy".
9. Albert Rapp - "The origin of wit and Humour".
10. N. W. Sawyer - "The Comedy of Manners from Sheridan to Maughaum".
11. S. C. Sengupta "Shakespearean comedy".
12. Willard Smith "The Nature of comedy"
13. Wylie Sypher - "Comedy".
14. A. H. Thorudyke - "English comedy".
15. Allardice Nicoll - "Theory of Drama".

16. Millet-and Bentley– "The Art of Drama"
17. L. J. Potts – "Comedy".
18. Perry – "Masters of Dramatic comedy".
19. Encyclopaedia Britanicca Volume X & XXII.
20. ""Twentieth century Men of letters" British council publication.
21. English Satire and satirists – Hugh walker.
22. John peter "Complaint and satire in early English Literature,'.
23. R. M. Alden "The Rise of formal Satire in English".
24. Cassell's Encyclopaedia of English Literature".
25. "English Satire" James Sutherland.
26. Dictionary of World literary terms.
27. Hand Book of literary terms.
28. Louis cazmian "Development of English Humour".
29. Harry Shaw "Dictionary of literary terms."
30. Glossary of contemporary literary terms.
31. ಮೈಸೂರು ವಿಶ್ವವಿದ್ಯಾನಿಲಯದ "ಇಂಗ್ಲೀಷ ಕನ್ನಡ ಶಬ್ದಕೋಶ".

# ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

೧ ತುಂಗಭದ್ರಾ ನೀರಾವರಿ ಬೆಳೆಗಳು
—ವಿಜಯಕುಮಾರ ಗಿಡ್ನವರ

೨ ದ್ರಾವಿಡ ಜನಾಂಗ
—ಸಂಗಮೇಶ ಡಿ. ಸವದತ್ತಿಮಠ

೩ ವರಲಕ್ಷ್ಮಿ ಹೈಬ್ರಿಡ್ ಹತ್ತಿ
—ವಿಜಯಕುಮಾರ ಗಿಡ್ನವರ

೪ ಜೋಳದ ಕೀಟ ಪಿಡುಗುಗಳು ಹಾಗೂ ಅವುಗಳ ಹತೋಟಿ —ಕೆ. ಎ. ಕುಲಕರ್ಣಿ

೫ ಬಾಲಲೀಲಾ ಮಹಾಂತ ಶಿವಯೋಗಿ
—ಎಸ್. ಎಸ್. ಭೂಸರಡ್ಡಿ

೬ ಮೈಲಾರ ಬಸವಲಿಂಗ ಶರಣರು
—ದೇವೇಂದ್ರಕುಮಾರ ಹಕಾರಿ

೭ ತರ್ದವಾಡಿ ನಾಡು
—ಆರ್. ಎನ್. ಗುರವ

೮ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು
—ಸಿ. ಹನುಮೇಗೌಡ

೯ ಹಾವುಗಳು ಮಾನವನ ಮಿತ್ರ-ಶತ್ರು
—ಎನ್. ಟಿ. ಮೋಟೆಬೆನ್ನೂರ

೧೦ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳು
—ಎ. ಆರ್. ಪಾಟೀಲ

೧೧ ವೇದಗಳು ವೇದಾಂಗಗಳು ಮತ್ತು ವೇದಾಂತ ತತ್ತ್ವ
—ಬಿ. ಎನ್. ಕೃಷ್ಣಮೂರ್ತಿ


ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩